### ಮಹಾಕವಿ ಕಾಳಿದಾಸನು ಚಿತ್ರಿಸಿದ

# ಇಂದುಮತಿಯ ಸ್ವಯಂವರ

**ಡಾ। ಎನ್. ಕೆ. ಉದಯಶಂಕರ್**

**ಭಾಗ – ೩**

ಅನಂತರ ದ್ವಾರಪಾಲಿಕೆಯಾದ ಸುನಂದೆಯು ದೇವಸಮಾನನಾಗಿದ್ದ 'ನಾಗ' ಎಂಬ ಪಟ್ಟಣದ ರಾಜನನ್ನು ಸಮೀಪಿಸಿ ಎಲೈ ಚಕೋರಪಕ್ಷಿಯಂತೆ ಕಣ್ಣುಗಳುಳ್ಳವಳೇ! ಇಲ್ಲಿ ನೋಡು! ಎಂದು ಮೊದಲೇ ಉದ್ದೇಶಿಸಿ ಹೇಳಲ್ಪಟ್ಟಿದ್ದ ಭೋಜನ ಗೋತ್ರದಲ್ಲಿ ಜನಿಸಿದವಳಾದ ಇಂದುಮತಿಯನ್ನು ಕುರಿತು ಈ ರೀತಿ ಹೇಳುತ್ತಾಳೆ -

ಭುಜಗಳ ಮೇಲೆ ಧರಿಸಿದ ಉದ್ದವಾದ ಹಾರಗಳುಳ್ಳ ಶ್ರೀಗಂಧದಿಂದ ಏರ್ಪಟ್ಟ ಲೇಪನವುಳ್ಳ ಪಾಂಡ್ಯ ರಾಜನು ಎಳೆಯ ಬಿಸಿಲಿನಿಂದ ಕೆಂಪಾದ ತಪ್ಪಲು ಪ್ರದೇಶವುಳ್ಳ ಪ್ರವಾಹಸ್ಯಂದನಗಳಿಂದ ಕೂಡಿದ ಪರ್ವತರಾಜನಂತೆ ಪ್ರಕಾಶಿಸುತ್ತಿದ್ದಾನೆ. ಸೂರ್ಯನ ಮಾರ್ಗವನ್ನು ತಡೆಯುವುದಕ್ಕಾಗಿ ಮೇಲೆ ಬೆಳೆಯುತ್ತಿದ್ದ ವಿಂಧ್ಯ ಪರ್ವತದ ಬೆಳವಣಿಗೆಯನ್ನು ತಡೆದು ಒಂದೇ ಸ್ಥಿತಿಯಲ್ಲಿ ನಿಲ್ಲಿಸಿದವನಾದ ಮತ್ತು ಯಾರಿಂದ ಸಮುದ್ರವು ನಿಃಶೇಷವಾಗಿ ಮೊದಲು ಕುಡಿಯಲ್ಪಟ್ಟ ಬಳಿಕ ಹೊರಕ್ಕೆ ಬಿಡಲ್ಪಟ್ಟಿತೋ ಅಂತಹ ಅಗಸ್ತ್ಯನು ಅಶ್ವಮೇಧಯಾಗದ ಕೊನೆಯಲ್ಲಿ ಅವಭೃತಸ್ನಾನ ಮಾಡಿ ತೊಯ್ದ ದೇಹವುಳ್ಳ ಯಾವ ಪಾಂಡ್ಯರಾಜನನ್ನು ಸ್ನೇಹದಿಂದ 'ಸ್ನಾನ ಸಾಂಗವಾಗಿ ಆಯಿತೇ?' ಎಂದು ಕೇಳುವವನಾಗಿ ಆಗುತ್ತಾನೋ; ಹಿಂದೆ ಜನಸ್ಥಾನದ ವಿನಾಶವನ್ನು ಶಂಕಿಸಿದ ಉದ್ಧತನಾದ ಲಂಕೇಶ್ವರನಾದ ರಾವಣನು ದುರ್ಲಭವಾದ 'ಬ್ರಹ್ಮಶಿರಸ್' ಎಂಬ ಅಸ್ತ್ರವನ್ನು ಶಿವನಿಂದ ಪಡೆದಿದ್ದ ಯಾವ ಪಾಂಡ್ಯರಾಜನೊಡನೆ ಸಂಧಿಮಾಡಿಕೊಂಡು ಇಂದ್ರಲೋಕವನ್ನು ಗೆಲ್ಲಲು ಹೊರಟನೋ; ದೊಡ್ಡ ಕುಲದಲ್ಲಿ ಹುಟ್ಟಿದವನಾದ ಈ ಪಾಂಡ್ಯರಾಜನಿಂದ ನಿನ್ನ ಕೈಯು ಶಾಸ್ತ್ರಾನುಸಾರವಾಗಿ ಗ್ರಹಣಮಾಡಲ್ಪಡಲಾಗಿ ಮಹತ್ತಾದ ಭೂಮಿಯಂತೆ ರತ್ನಗಳಿಂದ ವ್ಯಾಪ್ತವಾದ ಸಮುದ್ರವನ್ನೇ ಡಾಬನ್ನಾಗಿ ಉಳ್ಳ ದಕ್ಷಿಣ ದಿಕ್ಕು ಎಂಬ ಸ್ತ್ರೀಗೆ ನೀನು ಸವತಿಯಾಗು! ವೀಳೆಯದೆಲೆಯ ಬಳ್ಳಿಗಳಿಂದ ಸುತ್ತುವರಿಯಲ್ಪಟ್ಟ ಅಡಿಕೆಮರಗಳುಳ್ಳ ಏಲಕ್ಕಿ ಬಳ್ಳಿಗಳಿಂದ ಆಲಿಂಗಿತವಾದ ಶ್ರೀಗಂಧದ ಮರಗಳುಳ್ಳ ಹೊಂಗೆಯ ಎಲೆಗಳ ಆಸ್ತರಣಗಳುಳ್ಳ ಮಲಯ ಪರ್ವತದ ಅಕೃತ್ರಿಮವಾದ ಸ್ಥಳಗಳಲ್ಲಿ ಪದೇ ಪದೇ ಅಥವಾ ಸದಾಕಾಲದಲ್ಲೂ ರಮಿಸಲು ಮನಸ್ಸು ಮಾಡು! ಈ ರಾಜನು ಕನ್ನೈದಿಲೆಯಂತೆ ಶ್ಯಾಮವರ್ಣದ ಶರೀರವುಳ್ಳವನು ನೀನು. ಗೋರೋಚನದಂತೆ ಗೌರವರ್ಣದ ತೆಳ್ಳನೆಯ ಶರೀರವುಳ್ಳವಳು. ಆದ್ದರಿಂದ ನಿಮ್ಮಿಬ್ಬರ ಸಮಾಗಮವು ಮಿಂಚು ಮತ್ತು ಮೋಡಗಳ ಸಮಾಗಮದಂತೆ ಅನ್ಯೋನ್ಯ

N.I.T.K., ಸುರತ್ಕಲ್, ಪೋಸ್ಟ್ ಶ್ರೀನಿವಾಸ ನಗರ – 575 025, ದಕ್ಷಿಣ ಕನ್ನಡ



ಸೌಂದರ್ಯವೃದ್ಧಿಯಾಗಲಿ!

**ಸ್ವಸುರ್ವಿದರ್ಭಾಧಿಪತೇಸ್ತದೀಯೋ ಲೇಭೇಽಂತರಂ ಚೇತಸಿ ನೋಪದೇಶಃ ।**
**ದಿವಾಕರಾದರ್ಶನಬದ್ಧಕೋಶೇ ನಕ್ಷತ್ರನಾಥಾಂಶುರಿವಾರವಿಂದೇ ॥**

ವಿದರ್ಭರಾಜ ಭೋಜನ ತಂಗಿಯಾದ ಇಂದುಮತಿಯ ಮನಸ್ಸಿನೊಳಕ್ಕೆ ಆ ಸುನಂದೆಯ ಉಪದೇಶವು ಸೂರ್ಯನು ಕಾಣದಿದ್ದುದರಿಂದ ಮುಚ್ಚಿಕೊಂಡುಬಿಟ್ಟಿದ್ದ ಕೋಶವುಳ್ಳ ಕಮಲದೊಳಕ್ಕೆ ನಕ್ಷತ್ರರಾಜನಾದ ಚಂದ್ರಕಿರಣದೋಪಾದಿಯಲ್ಲಿ ಅವಕಾಶವನ್ನು ಪಡೆಯಲಿಲ್ಲ!

**ಸಂಚಾರಿಣೀ ದೀಪಶಿಖೇವ ರಾತ್ರೌ ಯಂ ಯಂ ವ್ಯತೀಯಾಯ ಪತಿಂ ವರಾಸಾ ।**
**ನರೇಂದ್ರಮಾರ್ಗಾಟ್ಟ ಇವ ಪ್ರಪೇದೇ ವಿವರ್ಣಭಾವಂ ಸ ಸ ಭೂಮಿಪಾಲಃ ॥**

ಪತಿಯನ್ನು ವರಿಸುವವಳಾದ ಆ ಇಂದುಮತಿಯು ರಾತ್ರಿಯಲ್ಲಿ ಸಂಚಾರಶೀಲವಾದ ದೀಪದ ಜ್ಯೋತಿಯಂತೆ ಯಾವ ಯಾವ ರಾಜನನ್ನು ಬಿಟ್ಟು ಮುಂದೆ ಹೋಗುತ್ತಿದ್ದಳೋ, ಆಯಾ ರಾಜನು ರಾಜಮಾರ್ಗದಲ್ಲಿನ ಗೃಹದಂತೆ ಕಳೆಗುಂದಿಹೋಗುತ್ತಿದ್ದನು.

ಆ ಇಂದುಮತಿಯು ಹತ್ತಿರ ಸಾರುತ್ತಿರಲು ರಘುಮಹಾರಾಜನ ಮಗನಾದ ಅಜನು ತನ್ನನ್ನು ಇವಳು ವರಿಸಿಯಾಳೋ ಇಲ್ಲವೋ ಎಂಬ ಕಳವಳದಿಂದ ಕೂಡಿದವನಾದನು. ಆಗ ಆ ಅಜನ ಬಲಗಡೆಯ ತೋಳು ಕೇಯೂರವೆಂಬ ಆಭರಣದ ಸ್ಥಾನದಲ್ಲಿ ಉಂಟಾದ ಕಂಪನದಿಂದ ಆತನ ಸಂದೇಹವು ನಿವಾರಣೆಯಾಯಿತು.

**ತಂ ಪ್ರಾಪ್ಯಸರ್ವಾವಯವಾನವದ್ಯಂ ವ್ಯಾವರ್ತತಾನ್ಯೋಪಗಮಾತ್ಕುಮಾರೀ ।**
**ನ ಹಿ ಪ್ರಫುಲ್ಲಂ ಸಹಕಾರಮೇತ್ಯ ವೃಕ್ಷಾಂತರಂ ಕಾಂಕ್ಷತಿ ಷಟ್ಪದಾಲೀ ॥**

ರಾಜಕುಮಾರಿ ಇಂದುಮತಿಯು ಎಲ್ಲಾ ಅವಯವಗಳಲ್ಲೂ ದೋಷವಿಲ್ಲದವನಾದ ಆ ಅಜನ ಸಾಮೀಪ್ಯವನ್ನು ಸೇರಿ ಬೇರೆ ರಾಜನ ಬಳಿ ಹೋಗುವುದರಿಂದ ನಿವೃತ್ತಳಾದಳು. ದುಂಬಿಯ ಹಿಂಡು ಹೂಬಿಟ್ಟಿರುವ ಮಾವಿನ ಮರವನ್ನು ಸೇರಿದ ಮೇಲೆ ಬೇರೆ ವೃಕ್ಷವನ್ನು ಅಪೇಕ್ಷಿಸುವುದಿಲ್ಲವಲ್ಲವೆ?

ಆಗ ಆ ಅಜನಲ್ಲಿ ನೆಲೆಸಿದ ಮನೋವೃತ್ತಿಯುಳ್ಳ ಚಂದ್ರನಪ್ರಭೆಯಂತೆ ಕಾಂತಿಯುಳ್ಳ ಇಂದುಮತಿಯನ್ನು ನೋಡಿ ಮಾತಿನಲ್ಲಿ ಪೂರ್ವಾಪರ ವಿವೇಕವುಳ್ಳ ಸುನಂದೆಯು ವಿಸ್ತಾರವಾಗಿ ಈ ಮಾತುಗಳನ್ನಾಡುತ್ತಾಳೆ -

ಮನುಪುತ್ರನಾದ ಇಕ್ಷ್ವಾಕುವಂಶದ ರಾಜರ ಮಧ್ಯೆ ಶ್ರೇಷ್ಠನಾದವನೂ, ಪ್ರಖ್ಯಾತಗುಣಗಳುಳ್ಳವನೂ, ಕಕುತ್ಸ್ಥನೆಂದು ಪ್ರಸಿದ್ಧನಾದ ಒಬ್ಬ ರಾಜನಿದ್ದನು. ಯಾವ ಕಕುತ್ಸ್ಥನಿಂದ ಮೊದಲಾಗಿ ಉನ್ನತವಾದ ಆಶಯಗಳುಳ್ಳ ಉತ್ತರ ಕೋಸಲದ ದಿಲೀಪನೇ ಮೊದಲಾದ ರಾಜರು ಪ್ರಶಸ್ತವಾದ ಕಾಕುತ್ಸ್ಥ ಎಂಬ ಹೆಸರನ್ನು ಧರಿಸುತ್ತಲಿದ್ದಾರೋ; ಯಾವ ಕಕುತ್ಸ್ಥನು ಯುದ್ಧದಲ್ಲಿ ದೊಡ್ಡ ಗೂಳಿಯ ರೂಪವನ್ನು ತಾಳಿದ್ದ ಮಹೇಂದ್ರನನ್ನು ಹತ್ತಿ ಸವಾರಿ ಮಾಡುತ್ತಾ ಈಶ್ವರನ ಲೀಲೆಯನ್ನು ಹೊಂದಿದವನಾಗಿ ಬಾಣಗಳಿಂದ ರಾಕ್ಷಸಸ್ತ್ರೀಯರ

ಗಂಡಸ್ಥಳಗಳನ್ನು ವಿವೃತ್ತಿಗೊಳಿಸಿದ ಪತ್ರಲೇಖಾಲಂಕಾರವುಳ್ಳವುಗಳನ್ನಾಗಿ ಮಾಡಿದನೋ; ಯಾವ ಕಕುತ್ಸ್ಥನು ಐರಾವತ ಆನೆಯ ಬೆನ್ನುತಟ್ಟುವುದರಿಂದ ಶಿಥಿಲವಾದ ಇಂದ್ರನ ಅಂಗದಾಭರಣವನ್ನು ತನ್ನ ಅಂಗದೊಡನೆ ಸಂಘರ್ಷಿಸುವಂತೆ ಮಾಡುತ್ತಾ ತನ್ನದೇ ಆದ ಶ್ರೇಷ್ಠವಾದ ಮೂರ್ತಿಯನ್ನು ಹೊಂದಿದವನಾಗಿ ಇಂದ್ರನ ಅರ್ಧಾಸನದ ಮೇಲೂ ಕೂಡಾ ಕುಳಿತುಕೊಂಡಿದ್ದಾನೋ; ಹೆಚ್ಚಾದ ಕೀರ್ತಿಯುಳ್ಳವನೂ, ವಂಶಪ್ರದೀಪಕನೂ ಆದ ದಿಲೀಪನೆಂಬ ರಾಜನು ಅಂಥ ಕಕುತ್ಸ್ಥನ ವಂಶದಲ್ಲಿ ಹುಟ್ಟಿದವನಲ್ಲವೆ! ಯಾವ ದಿಲೀಪನು ಇಂದ್ರನ ಅಸೂಯೆಯನ್ನು ಹೋಗಲಾಡಿಸುವುದಕ್ಕಾಗಿ ತೊಂಬತ್ತೊಂಭತ್ತು ಯಾಗಗಳನ್ನು ಮಾಡಿಬಿಟ್ಟನೋ; ಯಾವ ದಿಲೀಪನು ಭೂಮಿಯನ್ನು ಆಳುತ್ತಿರಲಾಗಿ ವಿಹಾರಸ್ಥಾನಕ್ಕೆ ಹೋಗುವ ಮಾರ್ಗದ ಮಧ್ಯದಲ್ಲೇ ನಿದ್ದೆ ಹೋದ ಸ್ವೈರಿಣಿಯರಾದ ಸ್ತ್ರೀಯರ ವಸ್ತ್ರಗಳನ್ನು ಗಾಳಿಯು ಕೂಡಾ ಜರುಗಿಸುತ್ತಿರಲಿಲ್ಲವೋ; ಹಾಗಿರುವಾಗ ಅವರನ್ನು ಅಪಹರಿಸಲು ಯಾವನು ತಾನೇ ಕೈಚಾಚಿಯಾನು? ಆ ದಿಲೀಪನ ಮಗನಾದ ರಘುವು ತಂದೆಯಿಂದ ಬಂದ ರಾಜ್ಯವನ್ನು ಪಾಲಿಸುತ್ತಿದ್ದಾನೆ. 'ವಿಶ್ವಜಿತ್' ಎಂಬ ಮಹಾಯಾಗವನ್ನು ಅನುಷ್ಠಾನ ಮಾಡಿದ ಯಾವ ರಘುವು ನಾಲ್ಕು ದಿಕ್ಕುಗಳಿಂದಲೂ ಜಯಿಸಿ ತಂದು ಸಂವರ್ಧಿಸಲ್ಪಟ್ಟ ಐಶ್ವರ್ಯವನ್ನು ಮಣ್ಣಿನ ಪಾತ್ರೆ ಮಾತ್ರವೇ ಉಳಿದಿರುವಂತಹುದನ್ನಾಗಿ ಮಾಡಿದನೋ; ಬೆಟ್ಟಗಳನ್ನು ಹತ್ತಿಹೋಗಿರುವ ಸಮುದ್ರಗಳನ್ನು ದಾಟಿ ಹೋಗಿರುವ ಅರ್ಥಾತ್ ಸಮಸ್ತ ಭೂ ಮಂಡಲವನ್ನೇ ವ್ಯಾಪಿಸಿರುವ ಸರ್ಪಗಳಿಗೆ ವಾಸಸ್ಥಾನವಾದ ಪಾತಾಳವನ್ನು ಪ್ರವೇಶಿಸಿರುವ ಮೇಲಕ್ಕೆ ಅಂದರೆ ಸ್ವರ್ಗಾದಿ ಲೋಕಗಳಿಗೆ ಹೋಗಿರುವ ಮತ್ತು ಮಧ್ಯೆ ವಿಚ್ಛೇದವಿಲ್ಲದಿರುವ ಯಾವನ ಕೀರ್ತಿಯನ್ನು ಇಷ್ಟೇ ಎಂದು ಅಳೆಯಲು ಸಾಧ್ಯವಿಲ್ಲವೋ, ಆ ಅಜನೆಂಬ ಕುಮಾರನು ಸ್ವರ್ಗದ ಅಧಿಪತಿಯಾದ ಇಂದ್ರನಿಗೆ ಅವನ ಮಗನಾದ ಜಯಂತನು ಹೇಗೋ ಹಾಗೆ ಆ ರಘುವಿಗೆ ತಕ್ಕವನಾಗಿ ಜನಿಸಿದ್ದಾನೆ. ಶಿಕ್ಷಣೀಯನಾದ ವಯಸ್ಸಿನಲ್ಲೇ ಇರುವ ಯಾವ ಅಜನು ಈ ಲೋಕದ ಭಾರವಾದ ನೊಗವನ್ನು ದುರಂಧರನಾದ ತಂದೆಗೆ ಸಮವಾಗಿಯೇ ಹೊತ್ತಿದ್ದಾನೆಯೋ;

**ಕುಲೇನ ಕಾಂತ್ಯಾ ವಯಸಾ ನವೇನ, ಗುಣೈಶ್ಚತೈಸ್ತೈರ್ವಿನಯಪ್ರಧಾನೈಃ ।**

**ತ್ವಮಾತ್ಮನಸ್ತುಲ್ಯಮಮುಂ ವೃಣಿಷ್ವ ರತ್ನಂ ಸಮಾಗಚ್ಛತಿ ಕಂಚನೇನ ॥**

"ಕುಲದಿಂದಲೂ, ಲಾವಣ್ಯದಿಂದಲೂ, ನವಯೌವನದಿಂದಲೂ ವಿನಯವೇ ಪ್ರಧಾನವಾದ ಆಯಾ ಬೇರೆ ಬೇರೆ ಗುಣಗಳಿಂದ ಕೂಡಾ ನಿನಗೆ ಅನುರೂಪನಾಗಿರುವ ಈತನನ್ನು ನೀನು ವರಿಸು! ರತ್ನವು ಚಿನ್ನದೊಡನೆ ಒಂದುಗೂಡಲಿ!!"

ಬಳಿಕ ಸುನಂದೆಯ ಮಾತು ಮುಗಿದ ಮೇಲೆ ರಾಜಪುತ್ರಿಯಾದ ಇಂದುಮತಿಯು ಲಜ್ಜೆಯನ್ನು ಕಮ್ಮಿ ಮಾಡಿಕೊಂಡು ಪ್ರಸನ್ನತೆಯಿಂದ ಶುದ್ಧವಾದ ನೋಟದಿಂದ ವರಮಾಲಿಕೆಯಿಂದಲೋ ಎಂಬಂತೆ ಅಜಕುಮಾರನನ್ನು ಅನುರಾಗಪೂರ್ವಕವಾಗಿ ನೋಡಿದಳು.

**ಸಾ ಯೂನಿ ತಸ್ಮಿನ್ನಭಿಲಾಷಬಂಧಂ ಶಶಾಕ ಶಾಲೀನತಯಾ ನ ವಕ್ತುಮ್ ।**

**ರೋಮಾಂಚ ಲಕ್ಷ್ಯೇಣ ಸ ಗಾತ್ರಯಷ್ಟಿಂ ಭಿತ್ವಾ ನರಾಕ್ರಮದರಾಲಕೇಶ್ಯಾಃ ॥**



ಆ ರಾಜಕುಮಾರಿಯು ಯುವಕನಾದ ಆ ಅಜನಲ್ಲಿ ತನಗುಂಟಾಗಿರುವ ಅಭಿಲಾಷೆ ಅರ್ಥಾತ್ ಅನುರಾಗದ ಬಂಧನವನ್ನು ನಾಚಿಕೆಯ ಕಾರಣದಿಂದ ಬಾಯಿಬಿಟ್ಟು ಹೇಳಲು ಶಕ್ತಳಾಗಲಿಲ್ಲ. ಆದರೂ ಕೂಡಾ ಗುಂಗುರುಕೂದಲುಳ್ಳ ಆ ಇಂದುಮತಿಯ ಆ ಅಭಿಲಾಷಬಂಧವು ರೋಮಾಂಚನದ ರೂಪದಿಂದ ಅವಳ ತೆಳುವಾದ ಶರೀರವನ್ನು ಭೇದಿಸಿಕೊಂಡು ಹೊರಬಂದಿತು.

**ತಥಾಗತಾನಾಂ ಪರಿಹಾಸಪೂರ್ವಂ ಸಖ್ಯಾಂ ಸಖೀ ವೇತ್ರಭೃದಾಬಭಾಷೇ ।**

**ಆರ್ಯೇ ವ್ರಜಾವೋಽನ್ಯತ ಇತ್ಯಥೈನಾಂ ವಧೂರಸೂಯಾಕುಟಿಲಂ ದದರ್ಶ॥**

ಸಖಿಯಾದ ಇಂದುಮತಿಯು ಈ ರೀತಿಯ ಸ್ಥಿತಿಯಲ್ಲಿರಲಾಗಿ ವೇತ್ರಧಾರಿಣಿಯಾದ ಸಹಚರಿಯಾದ ಸುನಂದೆಯು "ಪೂಜ್ಯಳೇ! ಮತ್ತೊಬ್ಬನ ಬಳಿಗೆ ಹೋಗೋಣವೇ ಎಂದು?" ಎಂದು ಪರಿಹಾಸ್ಯಪೂರ್ವಕವಾಗಿ ಪ್ರಶ್ನಿಸಿದಳು. ಆಗ ಮದುವಣಗಿತ್ತಿಯಾದ ಇಂದುಮತಿಯು ಈ ಸುನಂದೆಯನ್ನು ಅಸಮಾಧಾನದಿಂದ ಕುಟಿಲಳಾಗಿ ನೋಡಿದಳು.

**ಸಾ ಚೂರ್ಣಗೌರಂ ರಘುನಂದನಸ್ಯ ಧಾತ್ರೀಕರಾಭ್ಯಾಂ ಕರಭೋಪಮೋರೂಃ ।**

**ಆ ಸಂಜಯಮಾಸ ಯಥಾಪ್ರದೇಶಂ ಕಂಠೇಗುಣಂ ಮೂರ್ತಮಿವಾನುರಾಗಮ್ ॥**

ಸುಂದರವಾದ ತೊಡೆಗಳುಳ್ಳ ಆ ರಾಜಕುಮಾರಿಯು ಮಂಗಳಚೂರ್ಣದಿಂದ ಗೌರವರ್ಣವಾಗಿದ್ದ ವರಮಾಲೆಯನ್ನು ಮೂರ್ತಿಮತ್ತಾದ ಅನುರಾಗವನ್ನೋ ಎಂಬಂತೆ ತನ್ನ ಧಾತ್ರಿಯ ಕೈಗಳಿಂದ ರಘುಪುತ್ರನಾದ ಅಜನ ಕೊರಳಲ್ಲಿ ಹಾಕಿಸಿದಳು.

ವರಣೀಯನಾದ ಆ ಅಜನು ಮಧೂಕ ಮುಂತಾದ ಮಂಗಳಕರಗಳಾದ ಪುಷ್ಪಗಳಿಂದ ತನ್ನ ವಿಶಾಲವಾದ ವಕ್ಷಃಸ್ಥಲದ ಮೇಲಿಂದ ಉದ್ದವಾಗಿ ತೂಗಾಡುತ್ತಿದ್ದ ಆ ಮಾಲೆಯಿಂದ ವಿದರ್ಭರಾಜನ ತಂಗಿಯಾದ ಇಂದುಮತಿಯನ್ನು ತನ್ನ ಕೊರಳಿಗೆ ಅರ್ಪಿಸಿದ ಬಾಹುಪಾಶವುಳ್ಳವಳನ್ನಾಗಿ ಭಾವಿಸಿಕೊಂಡನು!

ಆ ಸ್ವಯಂವರದಲ್ಲಿ ಸಮಾನವಾದ ಗುಣಗಳುಳ್ಳ ಇಂದುಮತೀ - ಅಜರ ಒಟ್ಟುಗೂಡುವಿಕೆಯಿಂದ ಸಂತುಷ್ಟರಾದ ನಾಗರಿಕರು ಈ ಅಜನನ್ನು ಕೂಡಿದ ಇಂದುಮತಿಯನ್ನು ಮೋಡಗಳಿಂದ ಬಿಡಲ್ಪಟ್ಟ ಶರತ್ಕಾಲದ ಚಂದಿರನನ್ನು ಕೂಡಿದ ಬೆಳದಿಂಗಳೆಂದೂ ತನಗೆ ಸದೃಶವಾದ ಸಮುದ್ರವನ್ನು ಪ್ರವೇಶಿಸಿದ ಗಂಗೆಯೆಂದೂ ಇತರ ರಾಜರಿಗೆ ಕಿವಿಗಳಿಗೆ ಪರುಷವಾದ ಒಂದೇ ಅಭಿಪ್ರಾಯದ ಮಾತನ್ನು ವ್ಯಕ್ತಪಡಿಸಿದರು.

**ಪ್ರಮುದಿತವರಪಕ್ಷಮೇಕತಸ್ತತ್ಕ್ಷಿತಿಪತಿ ಮಂಡಲಮನ್ಯತೋ ವಿತಾನಮ್ ।**

**ಉಷಸಿ ಸರ ಇವ ಪ್ರಫುಲ್ಲಪದ್ಮಂ ಕುಮುದವನಪ್ರತಿಪನ್ನನಿದ್ರಮಾಸೀತ್ ॥**

ಒಂದು ಕಡೆ ಸಂತೋಷಗೊಂಡ ವರನಕಡೆಯವರುಳ್ಳ ಮತ್ತೊಂದು ಕಡೆ ಆಶಾಭುಗದಿಂದ ಶೂನ್ಯಮನಸ್ಸಿನ ರಾಜಮಂಡಲವುಳ್ಳ ಆ ಸ್ವಯಂವರಸ್ಥಾನವು ಬೆಳಗಿನ ಜಾವದಲ್ಲಿ ಒಂದಕಡೆ ಅರಳಿದ ಕಮಲಗಳುಳ್ಳದ್ದಾಗಿಯೂ ಮತ್ತು ಇನ್ನೊಂದು ಕಡೆ ಕೆನ್ನೈದಿಲೆಗಳು ಕೈಗೊಂಡ ನಿದ್ದೆಯುಳ್ಳದ್ದಾಗಿಯೂ ಇರುವ ಸರೋವರದಂತೆ ಶೋಭಿಸಿತು. (ಮುಗಿಯಿತು.)

ಮರಣ ಒಂದು ಜಿಜ್ಞಾಸೆ

# ಯದ್ಯಪಿ ಲೋಕೇ ಮರಣಂ ಶರಣಮ್

ಎಸ್. ಪಿ. ಶ್ರೀನಿವಾಸ ಭಟ್ಟಜಿ

**ಭಾಗ - ೩**

ಹೀಗೆಯೇ ಹದಿನಾರು ವಯಸ್ಸಿನ ಶಿವಭಕ್ತ ಮಾರ್ಕಂಡೇಯನೂ ಯಮನನ್ನು ಕಂಡು ಹೆದರಿ, ತನ್ನ ಇಷ್ಟ ದೇವತೆಯಾದ ಶಿವನನ್ನು ಬಾಚಿ ತಬ್ಬಿಕೊಂಡಿದ್ದನು. ಆಗ ಯಮನು, ಶಿವಲಿಂಗದೊಂದಿಗೆ ಮಾರ್ಕಂಡೇಯನನ್ನು ಬಂಧಿಸಿದಾಗ, ಶಿವನು ಪ್ರತ್ಯಕ್ಷನಾಗಿ ಯಮನನ್ನು ಬೆದರಿಸಿ, ಓಡಿಸಿ ತನ್ನ ಭಕ್ತನಾದ ಮಾರ್ಕಂಡೇಯನನ್ನು ರಕ್ಷಿಸಿದ ಕಥೆಯು ಪುರಾಣ ಪ್ರಸಿದ್ಧವಾಗಿದೆ. ಇಂತಹ ಪುಣ್ಯ ಪುರುಷರ ಚರಿತ್ರೆಯನ್ನು ಕೇಳುವುದರಿಂದ ಮೃತ್ಯು ಭಯವು ದೂರವಾಗುವುದು. ಮರಣ ಭಯ ಹೇಗೆ ಇರುತ್ತದೆ ಎನ್ನುವುದು ಯಾರಿಂದಲೂ ವರ್ಣಿಸಲು ಸಾಧ್ಯವಿಲ್ಲ. ವರ್ಣಿಸಲಸಾಧ್ಯವಾದ ಆ ಮರಣ ಭಯವು ಆಸನ್ನ ಮರಣಿಗೆ ಮಾತ್ರವೇ ಅದರ ಅನುಭವವಾದೀತು. ಆದ್ದರಿಂದ ಹಿರಿಯರು ಹೇಳುತ್ತಾರೆ, ಸದಾ ಭಗವಂತನ ಚಿಂತನೆಯನ್ನು ಮಾಡಿರಿ.

ಭಗವಂತನ ಚಿಂತನೆ ಮಾಡುತ್ತಲೇ ಇದ್ದರೆ, ಭಗವಂತನೇ ಕೊನೆಗಾಲದಲ್ಲಿ ಭಕ್ತನನ್ನು ತನ್ನ ಚಿಂತಕನನ್ನು ಕಾಪಾಡುತ್ತಾನೆ ಎಂಬುದರಲ್ಲಿ ಸಂದೇಹವಿಲ್ಲ. ಇಲ್ಲಿ 'ವಾಜಶ್ರವಸ್' ಎಂಬ ಬ್ರಾಹ್ಮಣೋತ್ತಮನ ಎಳೇ ವಯಸ್ಸಿನ, ತನ್ನ ಮಗನಾದ 'ನಚಿಕೇತಸ್'ನನ್ನು 'ವಿಶ್ವಜಿತ್' ಎಂಬ ಯಾಗದ ಮೂಲಕ ತನ್ನ ಮಗನನ್ನು ಯಮಾಲಯಕ್ಕೆ ಕಳಿಸುವ ಒಂದು ಸಂದರ್ಭವು ಬಂದೊದಗಿತು. ಎಳೇ ವಯಸ್ಸಿನ ಬಾಲಕ ನಚಿಕೇತನು ತನ್ನ ತಂದೆಯ ತಪಃ ಪ್ರಭಾವದಿಂದ ಯಮಲೋಕಕ್ಕೆ ತೆರಳಿ ಯಮಧರ್ಮರಾಜನ ಆತಿಥ್ಯವನ್ನು ಸ್ವೀಕರಿಸಿ ತನಗೆ ತಿಳಿಯಬೇಕಾಗಿದ್ದ "ಮರಣದ ನಂತರ ಆತ್ಮನ ನೆಲೆಯು ಹಲವರು ಹಲವು ತರದಲ್ಲಿ ಹೇಳುತ್ತಾರೆ, ಇದರ ಸತ್ಯಾಂಶವನ್ನು ನನಗೆ ತಿಳಿಯಬೇಕಾಗಿದೆ" ಎಂದು ಯಮನೊಡನೆ ಮಾತನಾಡಿ ಅವನಿಂದ ನಿಜಾಂಶವನ್ನು ತಿಳಿಯುವ ತನಕ ತರ್ಕಮಾಡಿ, ಯಮನ ಪರೀಕ್ಷೆಗೆ ಒಳಪಟ್ಟು, ತನ್ನ ಮನೋದೃಢತೆಯಿಂದ, ಅವನು ಒಡ್ಡಿದ ಆಸೆ, ಆಕಾಂಕ್ಷೆ ಆಮಿಷಕ್ಕೆ ಒಳಗಾಗದೇ ಧೈರ್ಯದಿಂದ ತನ್ನ ಕಾರ್ಯವನ್ನು ಸಾಧಿಸಿ, ಮೂರು ದಿನಗಳಲ್ಲಿ ಯಮಲೋಕದಲ್ಲಿದ್ದು ತಿರುಗಿ ಮನೆಗೆ ಮರಳಿ, ರಹಸ್ಯವೂ ಮಹತ್ವಪೂರ್ಣವಾದಂಥ ಮರಣ ರಹಸ್ಯವನ್ನು ಜತೆಗೆ ಬ್ರಹ್ಮಜ್ಞಾನವನ್ನು ಪಡೆದು ನಮಗೆಲ್ಲರಿಗೂ ಅರಿವು ಮಾಡಿಕೊಟ್ಟವನೇ ನಚಿಕೇತಸ್ ಎಂಬ ಚಿಕ್ಕ ಬಾಲಕ. ಸಾವಿತ್ರಿ

'ದತ್ತ ಮಂದಿರ', ರೋಯಲ್ ಪಾರ್ಕ್ ಕ್ಲಬ್ ರೆಸಾರ್ಟ್ ಹತ್ತಿರ,, ಸೂರತ್ - 395 007



ಕಥೆಯಲ್ಲಿ ತನ್ನ ಪತಿ ಸತ್ಯವಾನನನ್ನು ಕೊಂಡೊಯ್ಯಲು ಯಮನು ದೂತರನ್ನು ಕಳುಹಿಸದೇ ತಾನೇ ಸ್ವತಃ ಭೂಲೋಕಕ್ಕೆ ಬಂದು, ಸಾವಿತ್ರಿಗೆ ಪ್ರತ್ಯಕ್ಷ ದರ್ಶನವನ್ನು ಕೊಟ್ಟು ತಾನು ಯಾರು, ಬಂದ ಕಾರಣವನ್ನು ಸಾವಿತ್ರಿಗೆ ತಿಳಿಸಿ, ಅವಳು ಅಂಜದೆ, ಯಮನೊಡನೆ ತಾರ್ಕಿಕವಾಗಿಯೂ, ವಿನಯದಿಂದಲೂ, ಯಮನಿಂದಲೇ ಹೊಗಳಲ್ಪಟ್ಟವಳಾಗಿ, ತನ್ನ ತಪಃಶಕ್ತಿಯಿಂದ ಯಮನ ಪಾಶದಿಂದ ತನ್ನ ಪತಿಯನ್ನು ಬಿಡಿಸಿ, ಉತ್ತಮ ವರಗಳನ್ನು ಯಮನಿಂದ ಪಡೆದು ಕೃತಕೃತ್ಯಳಾದಳು ಸಾವಿತ್ರಿ ಮಾತೆ.

ನಚಿಕೇತನು ತನ್ನ ತಪಃಶಕ್ತಿಯಿಂದ ಯಮಲೋಕಕ್ಕೆ ಹೋಗಿ ತನ್ನ ಕಾರ್ಯಸಾಧಿಸಿ ಜಯಭೇರಿಯನ್ನು ಹೊಡೆದು ತನ್ನ ಮನೆಗೆ ಮರಳಿದನು. ಸಾವಿತ್ರಿಯಾದರೋ ತಾನಿದ್ದಲ್ಲಿಗೇ ಯಮನು ಬರುವಂತಹ ತಪಃ ಶಕ್ತಿಯನ್ನು ಪಡೆದಿದ್ದಳು. ಇವಳು ಕೂಡಾ ಯಮನಿಂದಲೇ ಹೊಗಳಿಸಿಕೊಂಡು ತನ್ನ ಕಾರ್ಯವನ್ನು ಸಾಧಿಸಿ ಜಯಭೇರಿ ಮೊಳಗಿದಳು. ಇವರ ಪುಣ್ಯ ಕಥೆ ಕೇಳುವುದರಿಂದ ನಚಿಕೇತನ ಮತ್ತು ಸತ್ಯವಾನ್ ಸಾವಿತ್ರಿಯ ತಪಃ ಶಕ್ತಿಯು ನಮಗೆ ಸ್ವಲ್ಪವಾದರೂ ಪ್ರಭಾವ ಬೀರದೇ ಇರದು ಮತ್ತು ಯಮಧರ್ಮರಾಜನು ನಮಗೆ ಸ್ವಲ್ಪವಾದರೂ ರಿಯಾಯಿತಿ ಕೊಡದೆ ಇರಲಾರನು. ಭಜಗೋವಿಂದ ಸ್ತೋತ್ರದಲ್ಲಿ ಆಚಾರ್ಯರು ಮುಂದುವರೆದು ಹೇಳುತ್ತಾರೆ.

**ಭಗವದ್ ಗೀತಾ ಕಿಂಚಿದಧೀತಾ ಗಂಗಾಜಲಲವಕಣಿಕಾಪೀತಾ ।**

**ಸಕೃದಪಿಯಸ್ಯಮುರಾರಿಸಮರ್ಚಾ ತಸ್ಯಯಮಃ ಕಿಂ ಕುರುತೇ ಚರ್ಚಾ ॥**

ಕಿಂಚಿತ್ತಾದರೂ ಭಗವದ್ ಗೀತೆಯ ಪಾರಾಯಣದಿಂದಲೂ, ಒಂದು ಬಿಂದು ಗಂಗಾಜಲವನ್ನು ಪಾನ ಮಾಡುವುದರಿಂದಲೂ, ದಿನಕ್ಕೆ ಒಂದು ಬಾರಿಯಾದರೂ ಹರಿಯನ್ನು ಅರ್ಚಿಸುವುದರಿಂದ ಅವನೊಡನೆ ಯಮನಿಗೆ ಚರ್ಚೆ ಮಾಡುವ ಅವಶ್ಯಕತೆಯೇ ಇಲ್ಲವೆನ್ನುತ್ತಾರೆ. ಮಾರ್ಕಂಡೇಯನು ಮೊದಲನೇ ಬಾರಿಗೆ ಯಮನನ್ನು ನೋಡಿ ಹೆದರಿದರೂ ನಂತರ ಧೈರ್ಯದಿಂದ "ನನ್ನನ್ನು ಯಮನು ಏನು ಮಾಡಬಲ್ಲ?" ಎಂದು ಸ್ತೋತ್ರ ಮಾಡಿದ್ದಾನೆ. ಅದೇ 'ಚಂದ್ರಶೇಖರಾಷ್ಟಕ'ವೆಂಬ ಪ್ರಸಿದ್ಧ ಸ್ತೋತ್ರ. ಇದರಲ್ಲಿ ಒಂದೊಂದು ಶ್ಲೋಕದ ಕೊನೆಯ ಚರಣದಲ್ಲಿ 'ಚಂದ್ರಶೇಖರಮಾಶ್ರಯೇ ಯಮ ಕಿಂ ಕರಿಷ್ಯತಿ ವೈ ಯಮಃ॥' ನಾನು ಚಂದ್ರಶೇಖರನನ್ನು ಆಶ್ರಯ ಮಾಡುತ್ತೇನೆ. ಯಮನು ನನ್ನನೇನು ಮಾಡಬಲ್ಲ? ಪ್ರತ್ಯಕ್ಷವಾಗಿ ಯಮನೊಡನೆ ಮಾತನಾಡಿದವರು, ಯಮನೊಡನೆ ಸವಾಲು ಹಾಕಿದಂಥ ಮಹಾತ್ಮರ ಕಥೆಗಳಿಂದ ಆ ಕಥೆಗಳನ್ನು ಓದಿ, ಅದರಲ್ಲಿರುವ ಕಥೆಯ ಸಾರಾಂಶವನ್ನು ಮನನ ಮಾಡಿ, ಮೆಲುಕು ಹಾಕಿ, ಸಚ್ಚರಿತ್ರೆಯಿಂದ ಜೀವನ ನಡೆಸುವವರಿಗೆ ಯಮನ ಭಯವಿಲ್ಲ ಎನ್ನುತ್ತಾರೆ ಗುರುಹಿರಿಯರು. ಶ್ರೀಕೃಷ್ಣನು ಭಗವದ್ ಗೀತೆಯ ಮೂಲಕ ಸ್ಪಷ್ಟ ಪಡಿಸಿದ್ದಾನೆ.

**ಅಂತಕಾಲೇ ಚ ಮಾಮೇವ ಸ್ಮರನ್ಮುಕ್ತ್ವಾ ಕಲೇವರಮ್ ।**

**ಯಃ ಪ್ರಯಾತಿ ಸ ಮಧ್ಭಾವಂ ಯಾತಿ ನಾಸ್ತ್ಯತ್ರ ಸಂಶಯಃ ॥**

ಅಂತಕಾಲದಲ್ಲಿ ಯಾರು ನನ್ನನ್ನೇ ಸ್ಮರಣೆ ಮಾಡುತ್ತಾ ದೇಹತ್ಯಾಗವನ್ನು ಮಾಡುತ್ತಾನೋ ಅವನು ನನ್ನ ಸಾಕ್ಷಾತ್ ಸ್ವರೂಪವನ್ನು ಹೊಂದುತ್ತಾನೆ. ಅದು ಹೇಗೆಂದರೆ-

**ಯಂ ಯಂ ವಾಪಿ ಸ್ಮರನ್‌ಭಾವಂ ತ್ಯಜತ್ಯಂತೇ ಕಲೇವರಮ್ ।**

**ತಂ ತಮೇವೈತಿ ಕೌಂತೇಯ ಸದಾತದ್ಭಾವ ಭಾವಿತಃ ॥**

ಅರ್ಜುನ! ಮನುಷ್ಯನು ಅಂತ್ಯ ಕಾಲದಲ್ಲಿ ಯಾವ ಯಾವ ಭಾವನೆಯನ್ನು ಇಟ್ಟುಕೊಂಡು ಶರೀರ ತ್ಯಾಗ ಮಾಡುವನೋ ಅವನು ಅದೇ ಇಷ್ಟಾರ್ಥಗಳನ್ನು ಪಡೆಯುವನು. ಏಕೆಂದರೆ ಅವನು ಜೀವಿಸಿರುವಾಗ ಯಾವ ಧ್ಯೇಯವನ್ನು ಇಟ್ಟುಕೊಂಡಿರುತ್ತಾನೋ ಅದೇ ಧ್ಯೇಯವು ಅವನ ಅಂತ್ಯಕಾಲದಲ್ಲಿ ಗೋಚರವಾಗುವುದು. ಆದ್ದರಿಂದ -

**ತಸ್ಮಾತ್ ಸರ್ವೇಷು ಕಾಲೇಷು ಮಾಮನುಸ್ಮರ ಯುದ್ಧ್ಯ ಚ ।**

**ಮಯ್ಯಾರ್ಪಿತ ಮನೋ ಬುದ್ಧಿರ್ಮಾಮೇವೈಷ್ಯಸ್ಯಸಂಶಯಮ್ ॥**

ಇಲ್ಲಿ ಎಲ್ಲಾ ಕಾಲಗಳಲ್ಲಿಯೂ ನನ್ನನ್ನು ಸ್ಮರಿಸು ಹಾಗೂ ಯುದ್ಧ ಮಾಡು ಎಂದು ಹೇಳಿದ್ದು ಅರ್ಜುನನಿಗೆ ಮಾತ್ರವಲ್ಲ. ನಮಗೆಲ್ಲರಿಗೂ ಈ ವಾಕ್ಯವು ಅನ್ವಯಿಸುತ್ತದೆ. ಇಲ್ಲಿ ಯುದ್ಧ ಮಾಡಲು ಹೇಳಿದ್ದು ಅರ್ಜುನನಿಗೆ ಕೌರವರೊಂದಿಗೆ, ಆದರೆ ನಮಗೆ ಶತ್ರುಗಳು ಆ ಕೌರವರಲ್ಲ, ನಮ್ಮ ಶತ್ರುಗಳು ಇವರು - ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು ಈ ಆರು ಶತ್ರುಗಳಲ್ಲಿ ಪ್ರಧಾನ ಶತ್ರುವಾಗಿರುವವನು ಕಾಮ. ಇವನನ್ನು ಜಯಿಸುವುದು ಅಷ್ಟು ಸುಲಭವಲ್ಲ. ಇವನನ್ನು ಜಯಿಸುವವರು ಮಹಾತ್ಮರಾಗುತ್ತಾರೆ. ಈ ಕಾಮವನ್ನು ಜಯಿಸದೆ ಹೋದರೆ ಮನುಷ್ಯನು ಕಾಮನಿಗೆ ಗುಲಾಮನಾಗಿ ದುರಾತ್ಮನಾಗಿಯೇ ಜೀವನವನ್ನು ಸಾಗಿಸುತ್ತಿರುತ್ತಾನೆ. ಕಾಮನನ್ನು ಜಯಿಸಿದ್ದೇ ಆದ ಪಕ್ಷದಲ್ಲಿ ಕ್ರೋಧಕ್ಕೆ ಪಕ್ಕಾಗುತ್ತಾನೆ. ಹಾಗೆ ಲೋಭ, ಮೋಹ, ಮದ, ಮತ್ಸರ ಈ ಶತ್ರುಗಳ ಪ್ರಭಾವ ಕುಗ್ಗುವುದು. ಯಾವಾಗಲೂ ಭಗವಂತನ ಸ್ಮರಣೆ ಮಾಡುತ್ತಲೇ ಇದ್ದರೆ, ಈ ಷಡ್‌ವೈರಿಗಳ ಪ್ರಭಾವವು. ಶಮನವಾಗುತ್ತದೆ. ಎಲ್ಲಿ ಭಗವಂತನ ನಾಮಸ್ಮರಣೆ ಕುಂಠಿತವಾಗುವುದೋ ಅಲ್ಲಿ ಕಾಮನು


*With Best Compliments from :*



**LAXMIDAS JEWELLERS**

"Megha Building" Balmatta Road,
Mangalore - 575 001.

**Phone : 2426060, 2421760**




ತಲೆ ಎತ್ತುತ್ತಾನೆ. ಇಂತಹ ಕೆಲವು ರಹಸ್ಯಗಳನ್ನು ನಮ್ಮ ಪೂರ್ವಜರು ಕೊಪ್ಪರಿಗೆಯಲ್ಲಿ ತುಂಬಿಟ್ಟಿದ್ದಾರೆ. ಆ ಕೊಪ್ಪರಿಗೆಯನ್ನು ನಮ್ಮ ವಿವೇಕವನ್ನು ಬಳಸಿಕೊಂಡು ಅನ್ವೇಷಣೆ ಮಾಡಿ ಪಡೆಯಬೇಕೇ ಹೊರತು, ಇದು ಸಾಮಾನ್ಯರಿಗೆ ದೊರಕುವ ಕೊಪ್ಪರಿಗೆಯಲ್ಲ. ಹೆಣ್ಣು, ಹೊನ್ನು, ಮಣ್ಣುಗಳನ್ನು ಸಂಪಾದಿಸಿ ಕೀರ್ತಿ ಪಡೆಯುವುದು ಎಂಬುದು ದಿವಾಸ್ವಪ್ನ. ಹಗಲು ಕನಸು. ಇಂತಹ ಸಂಪಾದನೆಗಳು ಕೇವಲ ವಿಪತ್ತಿನಲ್ಲೇ ಮುಕ್ತಾಯವಾಗುವುದು.

**ವಿಪದೋ ನೈವವಿಪದಃ ಸಂಪದೋ ನೈವ ಸಂಪದಃ ।**

**ವಿಪತ್ ವಿಸ್ಮರಣಂ ವಿಷ್ಣೋಃ ಸಂಪನ್ನಾರಾಯಣ ಸ್ಮೃತಿಃ ॥**

ಜ್ಞಾನಿಗಳು ಹೇಳುತ್ತಾರೆ - ಧನಹಾನಿ, ಮಾನಹಾನಿ, ದಾರಿದ್ರ್ಯ, ಅಸಂಭಾವೀ ದುರ್ಘಟನೆಗಳು, ರೋಗ ರುಜಿನಗಳು ಇವೆಲ್ಲಾ ಸಾಮಾನ್ಯ ಜನರು ವಿಪತ್ ಎಂತಲೂ, ಒಳ್ಳೆ ಉದ್ಯೋಗ, ಕೈತುಂಬಾ ಹಣಸಂಪಾದನೆ, ಮನೆ, ಮಠ, ಹೆಂಡತಿ, ಮಕ್ಕಳು, ವಾಹನ ಸೌಕರ್ಯ ಮಾನ ಮರ್ಯಾದೆಗಳು ಲಭಿಸುವುದು ಇವೆಲ್ಲಾ ಸಂಪತ್ತು ಎಂತಲೂ ಅರ್ಥಮಾಡಿಕೊಂಡಿರುತ್ತಾರೆ. ಆದರೆ, ಸಜ್ಜನರು ಇದರ ಬಗ್ಗೆ ಅರಿವು ನೀಡುತ್ತಾರೆ. ಅದನ್ನೇ ನಾವು ಅನುಕರಣೆ ಮಾಡಬೇಕು.

ಸುಖ, ಸಿರಿ, ಸಂಪತ್ತು ಬಂದಾಗ ಮರೆಯುವುದು ಆಗ ಭಗವಂತನನ್ನು ಮರೆಯುವುದು ಇದನ್ನೇ ವಿಪತ್ತು ಎಂದಿದ್ದಾರೆ ಜ್ಞಾನಿಗಳು. ಹಾಗೆಯೇ ಯಾವಾಗಲೂ ಭಗವಂತನ ಅಂದರೆ ತನ್ನ ಇಷ್ಟ ದೇವತೆಯನ್ನು ಚಿಂತಿಸುತ್ತಿರುವುದು, ನಾಮಸ್ಮರಣೆ ಮಾಡುವುದು, ಸುಖ - ದುಃಖ, ಲಾಭನಷ್ಟ, ಜಯ - ಅಪಜಯ, ಮಾನ - ಅವಮಾನಗಳಲ್ಲಿ ಸಮಭಾವನೆ ಇಟ್ಟುಕೊಂಡು, ಸಿರಿ ಬಂದಾಗ ಹಿಗ್ಗದೆ, ಕಷ್ಟ ಬಂದಾಗ ಕುಗ್ಗದೇ ಇತರರೊಡನೆ ತನ್ನ ಕುಂದು ಕೊರತೆಗಳನ್ನು ತೋಡಿಕೊಳ್ಳದೆ ಸಮಚಿತ್ತತೆಯಿಂದ ಬಾಳುವುದೇ ಅದೇ ದೊಡ್ಡ ಸಂಪತ್ತು.

ಇಂದ್ರನು ಒಂದು ಕಾಲದಲ್ಲಿ ಸಿರಿ ಸಂಪತ್ತಿನಿಂದ ಮೆರೆಯುವಾಗ, ದೂರ್ವಾಸ ಮುನಿಯಿಂದ ಶಪಿಸಲ್ಪಟ್ಟ ಇಂದ್ರನು, ಸರ್ವೈಶ್ವರ್ಯವನ್ನು ಕಳೆದುಕೊಂಡು, ಶೋಚನೀಯ ಪರಿಸ್ಥಿತಿಯಲ್ಲಿ, ಪಶ್ಚಾತ್ತಾಪ ಪಟ್ಟುಕೊಂಡು, ದೂರ್ವಾಸ ಮುನಿಯೊಡನೆ ಹೇಳುತ್ತಿದ್ದಾನೆ. ಇದು ಇಂದ್ರನು ಹೇಳಿದ ಮಾತು.

"ಮಹರ್ಷಿ! ತಾವು ಶಾಪ ಕೊಟ್ಟದ್ದು ನನಗೆ ಒಳ್ಳೆಯದೇ ಆಯಿತು. ನಾನು ನಷ್ಟ ಪಟ್ಟ ಐಶ್ವರ್ಯವನ್ನು ಕೇಳುತ್ತಿಲ್ಲ. ನನಗೆ ಕಿಂಚಿತ್ತಾದರೂ ಜ್ಞಾನವನ್ನು ಕರುಣಿಸಿ, ಅದರಿಂದ ನನ್ನ ಮಾಯೆ ದೂರವಾದೀತು"

**ಐಶ್ವರ್ಯಂ ವಿಪದಾಂ ಬೀಜಂ ಜ್ಞಾನ ಪ್ರಚ್ಛನ್ನಕಾರಣಮ್ ।**

**ಮುಕ್ತಿಮಾರ್ಗ ಕುಠಾರಶ್ಚ ಭಕ್ತೇಶ್ಚ ವ್ಯವಧಾಯಕಮ್ ।**

ಐಶ್ವರ್ಯವು ವಿಪತ್ತಿಗೆ ಬೀಜವಾಗಿದೆ. ಜ್ಞಾನವನ್ನು ಮುಚ್ಚಿ ಬಿಡುತ್ತದೆ. ಮೋಕ್ಷ ಮಾರ್ಗಕ್ಕೆ

ಈ ಐಶ್ವರ್ಯವು ಕುಠಾರ (ಕೊಡಲಿ) ಯಾಗಿದೆ ಮತ್ತು ಭಕ್ತಿಗೆ ವಿಘ್ನ ಕಾರಿಯಾಗಿದೆ.

ದುರ್ವಾಸು ಹೇಳುತ್ತಾರೆ -

**ಜನ್ಮ ಮೃತ್ಯು ಜರಾಶೋಕ ರೋಗಬೀಜಾಂಕುರಂ ಪರಮ್ ।**

**ಸಂಪತ್ತಿ ತಿಮಿರಾಂಧಶ್ಚ ಮುಕ್ತಿ ಮಾರ್ಗಂನ ಪಶ್ಯತಿ ॥**

ಅಷ್ಟೇ ಅಲ್ಲ, ಐಶ್ವರ್ಯವು ಜನ್ಮ ಮೃತ್ಯು, ಜರೆ, ಶೋಕ ಹಾಗೆಯೇ ರೋಗದ ದೊಡ್ಡ ಬೀಜರೂಪ ಮತ್ತು ಅಂಕುರ ರೂಪವಾಗಿದೆ. ಸಂಪತ್ತಿ ರೂಪದ ಅಂಧಕಾರದಿಂದ ಅಂಧನಾದವನು ಮುಕ್ತಿ ಮಾರ್ಗವನ್ನು ಕಾಣುತ್ತಿಲ್ಲ.

**ಸಂಪನ್ಮತ್ತೌ ವಿಮೂಢಶ್ಚ ಸುರಾಮತ್ತಃ ಸ ಏವ ಚ।**

**ಭಾಂಧವೈರ್ವೇಷ್ಟಿತಃ ಸೋSಪಿ ಬಂಧುತ್ವೇನೈವ ಹೇ ಹರೇ ॥**

ಹೇ ಇಂದ್ರ ! ಸಂಪತ್ತಿನಿಂದ ಮದಿಸಿದವನು (ಮತ್ತನು) ಮತ್ತು ಮದಿರೆಯಿಂದ ಮದಿಸಿದವನು ಇವರೀರ್ವರೂ ಮೂಢರೇ. ಬಂಧು - ಬಾಂಧವರ ಸಂಗಡವಿದ್ದರೂ ಸಂಪತ್ತಿನ ಮದದಿಂದ ಸ್ಮೃತಿ ತಪ್ಪಿದವನೂ ವಿಷಯ ಸುಖಗಳಿಂದ ಅಂಧನಾಗಿಯೂ, ಮಹಾಕಾಮಿಯೂ ಮತ್ತು ರಜೋಗುಣಿಯಾದ ಆ ಮನುಷ್ಯನು ಸತ್ವಗುಣದ ಮಾರ್ಗವನ್ನು ಕಾಣುವುದಿಲ್ಲ. ಇಂದ್ರಿಯ ಜನ್ಯ ವಿಷಯ ಸುಖಗಳಿಂದ ಅಂಧರಾದ ಮನುಷ್ಯರನ್ನು ಎರಡು ವಿಧದಿಂದ ವಿಂಗಡಿಸಿದ್ದಾರೆ. ಒಂದು ರಾಜಸ, ಇನ್ನೊಂದು ತಾಮಸ. ಇವರಲ್ಲಿ ಶಾಸ್ತ್ರವನ್ನು ಅರಿತಿರುವವನು ರಾಜಸ. ವಿಷಯಾಂಧನೆಂದೂ ಮತ್ತು ಶಾಸ್ತ್ರವನ್ನು ಅರಿಯದಿರುವವನು ತಾಮಸ ವಿಷಯಾಂಧನೆಂದೂ ಬಣ್ಣಿಸಿದ್ದಾರೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳುತ್ತಾನೆ -

**ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ ।**

**ಯತತಾಮಪಿ ಸಿದ್ಧಾನಾಂ ಕಶ್ಚಿನ್ ಮಾಂ ವೇತ್ತಿ ತತ್ವತಃ ॥**

ಸಾವಿರಾರು ಮನುಷ್ಯರಲ್ಲಿ ಯಾವನೋ ಒಬ್ಬ ನನ್ನ ಪ್ರಾಪ್ತಿಗಾಗಿ ಪ್ರಯತ್ನ ಪಡುತ್ತಿರುತ್ತಾನೆ. ಹೀಗೇ ಪ್ರಯತ್ನ ಮಾಡುವವರಲ್ಲಿ ಯಾವನೋ ಒಬ್ಬನು ನನ್ನ ಪರಾಯಣನಾಗಿ ನನ್ನನ್ನು ತತ್ವರೂಪದಿಂದ ಅರ್ಥಾತ್ ಯಥಾರ್ಥರೂಪದಿಂದ

MODERN INTERIORS & FURNITURE
Ph.: 2523504
Opp. : Sanskrit College, Maruthi Veethika, Udupi - 576 101
*Specialists in :* • Interior Decoration work and Furnishings.
• Steel & Wooden Furniture. • Sofa sets of different designs
• Computer Furniture and chairs of different Designs
• Kurlon & Duroflex Mattress and many more.



ಅರಿಯುವವನಾಗುತ್ತಾನೆ.

**ಅಂತಕಾಲೇ ಚ ಮಾಮೇವ ಸ್ಮರನ್ಮುಕ್ತ್ವಾಕಲೇವರಮ್ ।**

**ಯಃ ಪ್ರಯಾತಿ ಸ ಮದ್ಭಾವಂ ಯಾತಿನಾಸ್ತ್ಯತ್ರಸಂಶಯಃ ॥**

ಶ್ರೀಕೃಷ್ಣನು ಹೇಳುತ್ತಾನೆ. ಅಂತಕಾಲದಲ್ಲಿಯೂ ನನ್ನನ್ನೇ ಸ್ಮರಿಸುತ್ತಾ ದೇಹತ್ಯಾಗವನ್ನು ಯಾರು ಮಾಡುವನೋ ಅವನು ತನ್ನ ಸಾಕ್ಷಾತ್ ಸ್ವರೂಪವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ.

**ಪ್ರಯಾಣ ಕಾಲೇ ಮನಸಾS ಚಲೇನ ಭಕ್ತ್ಯಾಯುಕ್ತೋ ಯೋಗ ಬಲೇನ ಚೈವ**

**ಭ್ರುವೋರ್ಮಧ್ಯೇ ಪ್ರಾಣಮಾವೇಶ್ಯಸಮ್ಯಕ್ ಸ ತಂ ಪರಂ ಪುರುಷಮುಪೈತಿದಿವ್ಯಮ್ ।**

ಭಕ್ತಿ ಯುಕ್ತನಾಗಿ ಯಾವನು ಅಂತಕಾಲದಲ್ಲಿ ಯೋಗಬಲದಿಂದ ಭ್ರೂ ಮಧ್ಯದಲ್ಲಿ ಪ್ರಾಣವನ್ನು ನಿಲ್ಲಿಸಿ, ನಿಶ್ಚಲ ಮನಸ್ಸಿನಿಂದ ಸ್ಮರಣೆ ಮಾಡುವವನು ನನ್ನ ದಿವ್ಯ ರೂಪ ಪರಮ ಪುರುಷ ಪರಮಾತ್ಮನನ್ನೇ ಪ್ರಾಪ್ತಿ ಹೊಂದುತ್ತಾನೆ.

**ಓ ಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ಮಾಮನುಸ್ಮರನ್ ।**

**ಯಃ ಪ್ರಯಾತಿ ತ್ಯಜನ್ ದೇಹಂ ಸ ಯಾತಿ ಪರಮಾಂ ಗತಿಮ್ ॥**

ಎಲ್ಲಾ ಇಂದ್ರಿಯ ದ್ವಾರಗಳನ್ನು ಸ್ಥಗಿತ ಗೊಳಿಸಿ, ಮನಸ್ಸನ್ನು ಹೃದಯದಲ್ಲಿ ಸ್ಥಿರಪಡಿಸಿ, ಪರಮಾತ್ಮ ಸಂಬಂಧವಾದ ಯೋಗಧಾರಣೆಯಲ್ಲಿ ಸ್ಥಿರವಾಗಿದ್ದುಕೊಂಡು 'ಓಂ' ಎಂಬ ಏಕಾಕ್ಷರರೂಪ ಬ್ರಹ್ಮನನ್ನು ಉಚ್ಚಾರಣೆ ಮಾಡುತ್ತಾ ಹಾಗೇ ಅದರ ಅರ್ಥ ಸ್ವರೂಪ ನನ್ನ ನಿರ್ಗುಣ ಬ್ರಹ್ಮನ ಚಿಂತನೆ ಮಾಡುತ್ತ ಯಾವನು ಶರೀರವನ್ನು ತ್ಯಾಗ ಮಾಡುತ್ತಾನೋ ಆ ಪುರುಷನು ಪರಮಗತಿಯನ್ನು ಪಡೆಯುತ್ತಾನೆ.

"ಹೇ ಅರ್ಜುನ! ಯಾವನು ಅನನ್ಯ ಚಿತ್ತನಾಗಿ ಯಾವಾಗಲೂ ಪುರುಷೋತ್ತಮನಾದ ನನ್ನನ್ನು ಸ್ಮರಣೆ ಮಾಡುತ್ತನೋ ಅವನು ನಿತ್ಯ ನಿರಂತರವಾಗಿ ನನ್ನಲ್ಲಿ ಯುಕ್ತನಾದವನಿಗೆ, ನಾನು ಸುಲಭವಾಗಿ ದೊರಕುವೆನು.

**ಮಾಮುಪೇತ್ಯ ಪುನರ್ಜನ್ಮ ದುಃಖಲಯಮಶಾಶ್ವತಮ್ ।**

**ನಾಪ್ನುವಂತಿ ಮಹಾತ್ಮಾನಃ ಸಂಸಿದ್ಧಿಂಪರಮಾಂ ಗತಿಮ್ ॥**

ಪರಮ ಸಿದ್ಧಿಯನ್ನು ಪ್ರಾಪ್ತರಾದ ಮಹಾತ್ಮ ಜನರು ನನ್ನನ್ನು ಪ್ರಾಪ್ತಿ ಮಾಡಿಕೊಂಡು, ದುಃಖಾಲಯ ಮತ್ತು ಕ್ಷಣ ಭಂಗುರವಾದ ಪುನರ್ಜನವನ್ನು ಪುನಃ ಅವರು ಪಡೆಯುವುದಿಲ್ಲ.

(ಮುಂದುವರಿಯುವುದು)

# ಅನಿತ್ಯ ಫಲ

**ಮ. ಗೋ. ಹೆಗಡೆ**

ಫಲಾಪೇಕ್ಷೆಯಿಂದ ಮನುಷ್ಯನು ಮಾಡುವ ಕರ್ಮವು ಅವನ ಮನಸ್ಸಿಗೆ ನೆಮ್ಮದಿ ನೀಡಿದಂತೆ ಎನಿಸಿದರೂ ಅದು ಖಂಡಿತವಾಗಿ ತಾತ್ಕಾಲಿಕವಾಗಿರುತ್ತದೆ. ಹಾಗಿದ್ದರೂ ಅಷ್ಟರ ಮಟ್ಟಿಗೆ, ಅದು ದೀರ್ಘಾವಧಿಯ ಫಲವೆಂದು ಗ್ರಹಿಸುವ ಬುದ್ಧಿಯು, ಮನುಷ್ಯನನ್ನು ಮೋಹ ಮತ್ತು ಮಾಯೆಯ ಸೆರೆಯಲ್ಲಿ ಬಂದಿಯಾಗುವಂತೆ ಮಾಡುತ್ತದೆ. ಒಂದು ವಿಶಿಷ್ಟವಾದ ಅರ್ಥದಲ್ಲಿ ಮನುಷ್ಯನು ಸೆರೆಯಾಳಾಗುತ್ತಾನೆ. ಅದು ಇನ್ನೂ ಮುಂದುವರಿದು ತಾತ್ಕಾಲಿಕದಿಂದ ಶಾಶ್ವತವೆಂಬಷ್ಟರ ಮಟ್ಟಿಗೆ ಮನುಷ್ಯನನ್ನು ಎಳೆದೊಯ್ಯುತ್ತದೆ.

ಒಂದು ಕ್ಷಣದಲ್ಲಿ ದೊರೆತ ಕರ್ಮಫಲವು ಮರುಕ್ಷಣದಲ್ಲೇ ಮನುಷ್ಯನ ಮನಸ್ಸನ್ನು ನೆಮ್ಮದಿಯಿಂದ ವಂಚಿಸುತ್ತದೆ. ಆಗ ಮನುಷ್ಯನ ಪೇಚಾಟ ಹೇಳತೀರದು. ಅವನು ತನ್ನ ವೈರಿಯಾಗುತ್ತಾನೆ. ಆತ ಶಾಂತಿಯನ್ನು ಕಳೆದುಕೊಂಡು ಚುಕ್ಕಾಣಿಯಿಲ್ಲದ ಹಡಗಾಗುತ್ತಾನೆ. ಅಥವಾ ದಿಕ್ಕೆಟ್ಟ ಕುರಿಯಾಗುತ್ತಾನೆ. ಕೊನೆಗೆ ಹುಚ್ಚನೂ ಆಗಬಹುದು.

ಪ್ರಪಂಚದಲ್ಲಿ ಅನೇಕ ಮನುಷ್ಯರು ಇಂದು ತಾತ್ಕಾಲಿಕ ಕರ್ಮಫಲ ಅಪೇಕ್ಷಿಸುವವರೇ. ಇದರಿಂದಲೇ ಪ್ರತಿಯೊಬ್ಬನ ಮನಸ್ಸೂ ಸಹ ಅವನೊಡನೆ ಸಹಕರಿಸದ ಒಳ ವೈರಿಯಾಗುತ್ತದೆ. ಗೊಂದಲಮಯವಾದ ವಾತಾವರಣದಲ್ಲಿ ನೈತಿಕ ಮಾಲಿನ್ಯ ಉಂಟಾಗುವುದು. ಇದರಿಂದವೇ ಪರಿಸರ ಮಾಲಿನ್ಯಕ್ಕಿಂತ ಸಾವಿರಪಟ್ಟು ಹೆಚ್ಚಿನ ಮಾಲಿನ್ಯವು ನೈತಿಕ ಮಾಲಿನ್ಯದಿಂದಾಗುತ್ತದೆ. ಇದರಿಂದ ಸಾಮಾಜಿಕ ಸ್ವಾಸ್ಥ್ಯ ಹದಗೆಟ್ಟು ಎಲ್ಲಿ ನೋಡಿದರಲ್ಲಿ ಕೊಲೆ, ಸುಲಿಗೆ, ದರೋಡೆ, ವ್ಯಭಿಚಾರ ಮುಂತಾದ ಅಮಾನುಷ ಕೃತ್ಯಗಳು ಅವ್ಯಾಹತವಾಗಿ ನಡೆಯುತ್ತವೆ. ಪರಸ್ಪರರಲ್ಲಿ ವಿಶ್ವಾಸವಿಲ್ಲದ ವಿಶ್ವ ತಯಾರಾಗುತ್ತದೆ.

ಮನುಷ್ಯನನ್ನು 'ಮಾಧವ'ನನ್ನಾಗಿ ಮಾಡುವುದರ ಬದಲು, ಅವನನ್ನು 'ದಾನವ'ನನ್ನಾಗಿಸುವ ತಾತ್ಕಾಲಿಕ ಕರ್ಮಫಲವನ್ನು 'ಅನಿತ್ಯಫಲ' ಎಂದು ಗುರುತಿಸಲಾಗಿದೆ. ಇದು ತತ್ತ್ವಶಾಸ್ತ್ರ, ನಿರ್ದೇಶಿಸುವ ಸೂಕ್ಷ್ಮಾತಿ ಸೂಕ್ಷ್ಮವಾದ ಆಂತರಿಕ ಸಂಗತಿ.

ಅನಿತ್ಯಫಲದಡಿಯಲ್ಲಿ ಬರದ, ಯಾವ ಕ್ಷೇತ್ರವೂ ಗೋಚರಿಸುವುದಿಲ್ಲ. ಭಿಕ್ಷಾಪತಿಯಿಂದ ಹಿಡಿದು ಲಕ್ಷಪತಿಯವರೆಗಿನ ಎಲ್ಲಾ ಮಹನೀಯರೂ ಅನಿತ್ಯ ಫಲಾಕಾಂಕ್ಷಿಗಳೇ. 'ಅನಿತ್ಯಫಲ'ಕ್ಕೆ ಮನುಷ್ಯನ ಮನಸ್ಸನ್ನು ಹೇಗೆ ಘಾಸಿಗೊಳಿಸಬೇಕೆಂಬ ಸೂಕ್ಷ್ಮ ತಂತ್ರಜ್ಞಾನ ಕರತಲಾಮಲಕವಾಗಿದೆ.

**ಬಂಕಿಕೊಡ್ಲ – 581 319, ಉತ್ತರಕನ್ನಡ**



ಶೀಘ್ರವಾಗಿ ಬಂದಿದ್ದು, ಶೀಘ್ರವಾಗಿ ನಿರ್ಗಮಿಸುತ್ತದೆ ಎಂಬ ಸೃಷ್ಟಿಯ ಮೂಲತತ್ವವನ್ನು, ಅನಿತ್ಯ ಫಲಕ್ಕೆ ಬಲಿಬಿದ್ದವರು ಮರೆತು ಬಿಡುವಂತೆ ಮಾಡುತ್ತದೆ.

ಈಗಿನ ವಿದ್ಯಾರ್ಥಿಗಳಲ್ಲಿ ಇಂತಹ ಮನೋಧರ್ಮವಿರುವುದನ್ನು ಧಾರಾಳವಾಗಿ ಕಾಣಬಹುದು. ಗಣಿತದಲ್ಲಿ ಬರುವ ಹಲವು ಸೂತ್ರಗಳನ್ನು ಕೆಲವರು 'ನನಗೆ ಬಂತು' ಎಂದು ಥಟ್ಟನೆ ಹೇಳುತ್ತಾರೆ. ಮರುಕ್ಷಣದಲ್ಲಿ ಅದೇ ಸೂತ್ರವನ್ನು ಪುನಃ ಕೇಳಿದರೆ ಟ, ಠ, ಡ, ಢ, ಣ... ಶೀಘ್ರವಾಗಿ ಬಂದಿದ್ದು ಎಲ್ಲಿಗೆ ಹೋಯಿತು? ಇದು ಅನಿತ್ಯ ಫಲದ ಪರಿಣಾಮ.

ದೇವರಿಗೆ ಕೈ ಮುಗಿದಾಕ್ಷಣ - ನಮ್ಮ ಮನೋಭಿಲಾಷೆ ಈಡೇರದಿದ್ದಲ್ಲಿ ನಮಗೆ ದೇವರ ಮೇಲೆ ಅವಿಶ್ವಾಸ ಉಂಟಾಗುತ್ತದೆ. ಇದು ಅನಿತ್ಯ ಫಲದ ಇನ್ನೊಂದು ಮುಖ.

ಪ್ರಕೃತಿ - ಯಾವುದನ್ನು ಮನುಷ್ಯನ ಸರ್ವತೋಮುಖ ಅಭಿವೃದ್ಧಿಗಾಗಿ ಕರುಣಿಸುತ್ತದೆಯೋ ಅದನ್ನು ಮನುಷ್ಯ ಶ್ರದ್ಧೆಯಿಂದ ಸ್ವೀಕರಿಸುವುದಿಲ್ಲ. ಯಾಕೆಂದರೆ ಅವನು 'ಅನಿತ್ಯ ಫಲ'ಕ್ಕೆ ಬಲಿಯಾಗಿದ್ದಾನೆ. ಓರ್ವ ಪಾಶ್ಚಾತ್ಯ ಲೇಖಕ ಹೇಳುತ್ತಾನೆ -

ಅನಿತ್ಯ ಫಲವನ್ನು ಬಯಸುವವನು ಮಿತಿಮೀರಿದಾಗ ಮೂರ್ಖನಾಗುತ್ತಾನೆ. ಇದರಿಂದ ಬಂಗಾರವಾಗಬೇಕಾದ ಅವನ ಜೀವನ ಅಂಗಾರವಾಗುವುದು ನಿಶ್ಚಿತ.

ಸಕಾಮ ಭಕ್ತಿಯಿಂದ ಸತ್ಯನಾರಾಯಣ ವ್ರತ ಮಾಡುವವನು 'ಅನಿತ್ಯಫಲ'ವನ್ನು ಬಯಸಿಯೇ. ಅದನ್ನು ಮಾಡಿಸುವ ಪುರೋಹಿತರು ಪಡೆಯುವ ದಕ್ಷಿಣೆ, ಅಕ್ಕಿ, ಕಾಯಿ ಮುಂತಾದವುಗಳೆಲ್ಲ ಅನಿತ್ಯ ಫಲಗಳೇ.

ನಮ್ಮ ಪೂರ್ವಜರನ್ನು ವರ್ಷದಲ್ಲಿ ಒಂದು ದಿನವಾದರೂ ಶ್ರದ್ಧೆಯಿಂದ ಸ್ಮರಿಸಬೇಕೆಂಬ ಮೂಲತತ್ವದಿಂದ 'ಶ್ರಾದ್ಧ'ದ ವಿಧಿ ಜಾರಿಯಲ್ಲಿ ಬಂದಿದೆ. ಆದರೆ ಈಗ ಅದು ಶ್ರದ್ಧಾರಹಿತವಾದ ಅನಿತ್ಯಫಲವನ್ನು ನಿರೀಕ್ಷಿಸುವತ್ತ ಸಾಗಿದೆ.

ಅನಿತ್ಯ ಫಲವನ್ನು ಬಯಸಬಾರದೆಂದು ಯಾರೂ ಹೇಳುವುದಿಲ್ಲ. ಆದರೆ ಅದರ ಮುಂದಿರುವ 'ನಿತ್ಯಫಲ'ಕ್ಕೆ ಅದು ನಾಂದಿಯಾಗಬೇಕೆಂಬುದೇ ಅದರಲ್ಲಿ ಅಂತರ್ಗತವಾದ ನಿಜಾಂಶ.

ದಾಸರ ಪದವೊಂದು ನೆನಪಾಗುತ್ತದೆ.

ಮನವ ಶೋಧಿಸಬೇಕು ನಿಚ್ಚ।

ನೀ ದಿನ ದಿನ ಮಾಡುವ ಪಾಪ ಪುಣ್ಯದ ವೆಚ್ಚ।

ಪ್ರತಿದಿನ - ಪ್ರತಿಕ್ಷಣ, ನಮ್ಮ ಮನಸ್ಸನ್ನು ಶೋಧಿಸುತ್ತಿರಬೇಕು. ಯಾಕೆಂದರೆ ಅದು ಅನಿತ್ಯ ಫಲದೆಡೆಗೆ ನಮ್ಮನ್ನು ಸದಾ ಎಳೆಯುತ್ತಲೇ ಇರುತ್ತದೆ. ಅದರ ಜಗ್ಗಾಟದಲ್ಲಿ ನಾವು ಅದಕ್ಕೆ ಮಣಿಯಕೂಡದು. ಬದಲಾಗಿ ಅದನ್ನು ವಿಮುಖಗೊಳಿಸಬೇಕು. ಆಗ ಅದೇ ಮನಸ್ಸು ಬದಲಾಗಿ, ನಮ್ಮನ್ನು ನಿತ್ಯಫಲದೆಡೆಗೆ ಒಯ್ಯುತ್ತದೆ.

ಒಂದೇ ಮನಸ್ಸು ಧನುಸ್ಸಾಗಿ ನಮ್ಮನ್ನು ಮುಕ್ತಿಯೆಡೆಗೂ ಒಯ್ಯಬಹುದು. ಅಥವಾ ಬಂಧನದಲ್ಲಿ ಸಿಲುಕುವಂತೆ ಮಾಡಿ, ಅನಿತ್ಯಫಲದಲ್ಲೇ ಕೊಳೆಯುವಂತೆಯೂ ಮಾಡಬಹುದು. ಇದನ್ನೇ ಮಹಾಭಾರತದಲ್ಲಿ **"ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋ"** ಎಂದು ನಿರೂಪಿಸಲಾಗಿದೆ.

ಓರ್ವ ಪಾಶ್ಚಾತ್ಯ ಬರಹಗಾರ - Mind has it's own place; within itself it can change hell into heaven and heaven into hell" ಎಂದು ಮನಸ್ಸಿನ ದ್ವಿಮುಖ ಸ್ವಭಾವವನ್ನು ಮನೋಜ್ಞವಾಗಿ ನಿರೂಪಿಸುತ್ತಾನೆ.

ಅನಿತ್ಯ ಫಲದ ದಾಸರಾಗಿಯೋ, ಇಂದಿನ ರಾಜಕಾರಣಿಗಳು ಈ ದೇಶದ ಸಾಂಸ್ಕೃತಿಕ ಮೌಲ್ಯವನ್ನು ಮೂರಾಬಟ್ಟೆ ಮಾಡುತ್ತಿದ್ದಾರೆ.

ಅನಿತ್ಯ ಫಲಕ್ಕೆ ಗುಲಾಮರಾಗಿರುವ, ಕೆಲವು ಸಾಹಿತಿಗಳೂ ಸಹ, ಈ ದೇಶದ ಐತಿಹಾಸಿಕ ಸಂಗತಿಗಳನ್ನು ತಿರುಚುವ ರಾಜಕಾರಣಿಗಳನ್ನು ಮನಸಾರೆ ಹೊಗಳುತ್ತಾರೆ. ಇದೆಂಥಹ ವಿಪರ್ಯಾಸ! ಅನಿತ್ಯಫಲದ ಪ್ರಭಾವವೇ ಹಾಗಿದೆ!

ನಾಳೆಯನ್ನು ನೋಡಿದವರಿಲ್ಲ - ಇಂದು ಬಂದಿದೆ ಸುಖವು - ಅನ್ನುವ ಕೀಳುಮಟ್ಟದ ಮನೋಭಾವನೆ ಅವರದು!

ಅನಿತ್ಯ ಫಲದ ಪ್ರಭಾವವು ಎಂತಹ ದಾಹವನ್ನು ಹುಟ್ಟಿಸುತ್ತಿದೆಯೆಂದರೆ - ಪ್ರಜಾಪ್ರಭುತ್ವ ಕ್ರಿಮಿನಲ್ ಮೊಕದ್ದಮೆಯಲ್ಲಿರುವವರನ್ನು ಮಂತ್ರಿಸ್ಥಾನದಲ್ಲಿಟ್ಟು ಪೂಜಿಸುತ್ತಾರೆ.

ನಿಷ್ಪಕ್ಷಪಾತವಾಗಿ, ನ್ಯಾಯದಾನ ಮಾಡಬೇಕಾದ ನ್ಯಾಯಾಲಯದ ನ್ಯಾಯಾಧೀಶರೂ ಸಹ ಕಳಂಕಿತರಾಗಿರುವುದು ಅನಿತ್ಯ ಫಲದ ಪರಮಾವಧಿ.

ಅನಿತ್ಯದಿಂದ ನಿತ್ಯದೆಡೆಗೆ ಸಾಗಬೇಕಾದುದು ಮನುಷ್ಯ ಜೀವನದ ಪರಮೋದ್ದೇಶ. ಆದರೆ ಇಂದು ಮನುಷ್ಯರೂಪದಲ್ಲಿರುವವರು ಅನಿತ್ಯದೆಡೆಗೆ ಸಾಗುತ್ತಿರುವುದು ಪ್ರತಿನಿತ್ಯದ ಜಾಯಮಾನವಾಗಿದೆ.

ಆದುದರಿಂದ ಇಂದು ಅನೇಕರು ದಾನ - ಧರ್ಮ - ಭಜನೆ - ಸಂಕೀರ್ತನೆ ಮಾಡುತ್ತಿದ್ದರೂ ಓರ್ವ ವ್ಯಕ್ತಿಯ ಮನಸ್ಸಿನಲ್ಲಾಗಲಿ ಅಥವಾ ಜನ ಮಾನಸದಲ್ಲಿ ನೆಮ್ಮದಿ - ಶಾಂತಿ - ಸಮಾಧಾನಗಳಿಲ್ಲ. 'ಮಾನ'ವಿಲ್ಲದವರೂ 'ಬಹುಮಾನ' ಬಯಸುವವರಾಗಿರುವ ಮಾನವ ಸಮಾಜದಲ್ಲಿ ಪುರಸ್ಕಾರ - ಸತ್ಕಾರ ಸಮಾರಂಭಗಳೆಲ್ಲ ಸಾಮಾನ್ಯವಾಗಿ ಅಮಾನ್ಯರಿಗೇ ಮೀಸಲಾಗಿವೆ. ಲೋಕಮಾನ್ಯರಾಗಿರುವ ಅನೇಕರು ಇಂದು ಅದನ್ನೇನೂ ಬಯಸದೆ ತಮ್ಮ ಪಾಡಿಗೆ ತಾವಿರುವುದನ್ನು ನಾವಿಂದು ಧಾರಾಳವಾಗಿ ಕಾಣಬಹುದು.

ಸ್ವಲ್ಪ ದಿನಗಳ ಹಿಂದೆ ಹಿರಿಯ ಸಾಹಿತಿಗಳೊಂದಿಗೆ ನಾನು ತಿರುಗಾಟಕ್ಕೆ ಹೋದಾಗ,



ಅವರ ಪರಿಚಯದ ಅಂಗಡಿ ಮಾಲಿಕನೋರ್ವನು 'ಬನ್ನಿ ಸರ್, ನಮಸ್ಕಾರ ಒಂದು ಬಾಳೆಹಣ್ಣನ್ನಾದರೂ ತಿಂದು ಹೋಗಿ' ಎಂದಾಗ, ನನ್ನೊಡನೆ ಚಲಿಸುತ್ತಿದ್ದ ಆ ಹಿರಿಯ ಜೀವ. 'ತಮ್ಮಾ ಈ ಬಾಳೇ, ಹಣ್ಣಾಗಿರುವಾಗ, ಬಾಳೆ ಹಣ್ಣು ನನಗೇಕಪ್ಪಾ?' ಎಂದಾಗ, ನಾನು ಹಾಗೂ ಅಂಗಡಿ ಮಾಲಿಕ, ಮರು ಮಾತನಾಡದೇ ಪ್ರಸ್ತುತ ನಡೆಯುತ್ತಿರುವ ವಿದ್ಯಮಾನಗಳ ಪುನರ್ ಮೌಲ್ಯ ಮಾಪನ ಮಾಡುತ್ತಿದ್ದೆವು.

'ಅನಿತ್ಯಫಲ' ಬಯಸದೆ ಆ ನನ್ನ ಹಿರಿಯ ಸಾಹಿತಿ - ಸ್ನೇಹಿತರು ತಾನು ಬಯಸಿದ 'ನಿತ್ಯಫಲ'ವನ್ನು ಬಾಳೇ - ಹಣ್ಣಾದಾಗ ಎಂದು ಸಾಂಕೇತಿಕ ಹೇಳಿದ್ದು ತೀವ್ರ ಕುತೂಹಲಕಾರಿಯಾದ ಸಂಗತಿಯಾಗಿತ್ತು.

ಸರಕಾರ ನಿಯೋಜಿಸಿದ ಬಹುಮಾನವನ್ನು ಪಡೆದು, ಪ್ರಜೆಗಳ ಎಂಜಲನ್ನು ತಿನ್ನುವವರ, ಅಮಾನುಷ ಕೃತಿಗಳನ್ನು ಮುಚ್ಚಿಟ್ಟು ಅವರನ್ನು ಹೊಗಳುತ್ತಿರುವುದಕ್ಕಿಂತ, ಪ್ರಶಸ್ತಿಯನ್ನು ಬಯಸದಿರುವುದೇ ಲೇಸೆಂದು ತೀರ್ಮಾನಿಸಿದ ಆ ಹಿರಿಯ ಸಾಹಿತಿ ನಿಜಕ್ಕೂ 'ನಿತ್ಯಫಲ' ಬಯಸಿದವರು.

ಯಾವುದರಿಂದ ಇಹ - ಪರದಲ್ಲಿ, ಸದ್‌ವಸ್ತುವಾಗಿ ಇರಲು ಸಾಧ್ಯವೋ ಯಾವುದು ನಿರಂತರವಾಗಿ, ನಿರಾತಂಕವಾಗಿ, ನಮ್ಮನ್ನು ನಿತ್ಯಾನಂದದಲ್ಲಿಡಬಲ್ಲದೋ, ಯಾವುದು ನಮ್ಮ ಸಂಗಡ ಶರೀರದ ಅನುಪಸ್ಥಿತಿಯಲ್ಲೂ ಇರಬಲ್ಲದೋ ಅದೇ ನಿತ್ಯಫಲ.

ನಿತ್ಯಫಲವನ್ನು ಪಡೆದ ಅನೇಕ ಜೀವಾತ್ಮಗಳು ನಮ್ಮ ಮಧ್ಯದಲ್ಲಿ ನಮ್ಮ ಸುತ್ತಲೂ ಆವರಿಸಿಕೊಂಡಿವೆ. ಪ್ರಹ್ಲಾದ, ಧರ್ಮರಾಜ, ನಳ, ದಮಯಂತಿ, ಅಹಲ್ಯಾ, ದ್ರೌಪದಿ, ಅಭಿಮನ್ಯು, ದಧೀಚಿ, ನಚಿಕೇತ, ರಾಮ, ವಿಭೀಷಣ, ಜನಕ, ಆಂಜನೇಯ, ಅಕ್ರೂರ ಹೀಗೆ ಬರೆಯುತ್ತ ಹೋದರೆ ಅನಂತವಾದೀತು.

ನಿತ್ಯಫಲವನ್ನು ಬಯಸಿದ ಪ್ರಹ್ಲಾದ ಹೇಳುತ್ತಾನೆ.

ನಾಥ ಯೋನಿ ಸಹಸ್ರೇಷು, ಯೇಷ ಯೇಷು ವ್ರಜಾ ಮ್ಯಯಂ।

ತೇಷು ತೇಷ್ವಚಲಾ ಭಕ್ತಿ ರಚ್ಯುತಾಸ್ತು ಸದಾತ್ವಯಿ ॥

ಶರೀರವಿಲ್ಲದ ಸ್ಥಿತಿಯಲ್ಲೂ ಅಸ್ತಿತ್ವ ಹೊಂದಬಹುದಾದ ಪರಿಣಾಮವೇ ನಿತ್ಯಫಲ.

ಸ್ಥಾಪನೆ : 1977 ದೂರವಾಣಿ : 2521607

**ಜನತಾ ಕೋ - ಆಪರೇಟಿವ್ ಬ್ಯಾಂಕ್ ಲಿ. ಉಡುಪಿ**

★ ಸಂಜೆ ಮತ್ತು ಭಾನುವಾರ ಬ್ಯಾಂಕಿಂಗ್ ಸೇವೆ

★ ಠೇವಣಿಗಳಿಗೆ 1% ಅಧಿಕ ಬಡ್ಡಿ

**ಸ್ನೇಹಮಯ ಸೌಹಾರ್ದ ಸೇವೆಯೇ ಬ್ಯಾಂಕಿನ ಧ್ಯೇಯ**



# ಧರ್ಮದ ಎರಡು ಮುಖಗಳು

ಸಗ್ರಿ ರಾಘವೇಂದ್ರ ಉಪಾಧ್ಯಾಯ

ಧರ್ಮ, ಭಕ್ತಿ ಮುಂತಾದ ಮೌಲ್ಯಗಳನ್ನು ಪ್ರತಿಪಾದಿಸುವ ಧಾರ್ಮಿಕ ಗ್ರಂಥವನ್ನಾಗಿ ಮಹಾಭಾರತವನ್ನು ಪರಿಗಣಿಸುವವರಿದ್ದಾರೆ - 'ಮನ್ವಾದಿ ಕೇಚಿದ್ ಬ್ರುವತೇ... ಭಾರತಂ ಪರಿಚಕ್ಷತೇ'

ಶರಪಂಜರಶಾಯಿ ಭೀಷ್ಮರ ಉಪದೇಶವೇ ಮುಂತಾದ ಬೇರೆ ಬೇರೆ ಸಂದರ್ಭಗಳಲ್ಲಿ ವರ್ಣಾಶ್ರಮಧರ್ಮಾದಿಗಳ ಪ್ರತಿಪಾದನೆ ಒಂದು ಬಗೆಯಲ್ಲಾದರೆ, ಧರ್ಮಾದಿ ಪ್ರತಿನಿಧಿಗಳೆಂದು ಪರಿಗಣಿತರಾದ ಯುಧಿಷ್ಠಿರಾದಿಗಳ ನಡತೆಯಿಂದ ಸಾಂಕೇತಿಕವಾಗಿ ಧರ್ಮಾದಿಗಳ ಪ್ರತಿಪಾದನೆ ಮತ್ತೊಂದು ಬಗೆಯಲ್ಲಿ ನಡೆದಿದೆ.

'ಧರ್ಮೋ ಭಕ್ತ್ಯಾದಿದಶಕಃ... ವಿದುರ್ಬುಧಾಃ' ಎಂದು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ (2-140) ನೀಡಿರುವ ಮಾರ್ಗದರ್ಶನದಂತೆ ಮಹಾಭಾರತದಲ್ಲಿ ಯುಧಿಷ್ಠಿರ ಧರ್ಮಕ್ಕೆ ಸಂಕೇತ. ಯುಧಿಷ್ಠಿರನಂತೆಯೇ ಯಮಧರ್ಮನ ಮತ್ತೊಂದು ಅವತಾರ ವಿದುರನನ್ನೂ ಧರ್ಮಕ್ಕೆ ಸಂಕೇತನನ್ನಾಗಿ ಇಟ್ಟುಕೊಳ್ಳಬಹುದು.

ಹೀಗೆ ಮಹಾಭಾರತದಲ್ಲಿ ಯುಧಿಷ್ಠಿರ ಮತ್ತು ವಿದುರ ಇವರಿಬ್ಬರು ಧರ್ಮದ ಸಂಕೇತವಾಗಿ ಪ್ರತಿನಿಧಿಸುವರು.

## ಯುಧಿಷ್ಠಿರ ಮತ್ತು ವಿದುರ :

ಯುಧಿಷ್ಠಿರ ಮತ್ತು ವಿದುರ ಇವರಿಬ್ಬರೂ ಯಮದೇವನ ಅವತಾರವೇ ಆಗಿರುವವರಾದರೂ, ಧರ್ಮಕ್ಕೆ ಸಂಕೇತರಾಗಿರುವವರಾದರೂ, ಅವರು ಸಂಕೇತಿಸುವ ಧರ್ಮಗಳಲ್ಲಿ ಪರಸ್ಪರವಾಗಿ ತುಂಬ ಆಂತರ್ಯವಿದೆ. ಯುಧಿಷ್ಠಿರನು 'ದಾಕ್ಷಿಣ್ಯ ಧರ್ಮ'ವನ್ನು ಪ್ರತಿನಿಧಿಸಿದರೆ, ವಿದುರನು 'ನೈಷ್ಠುರ್ಯ ಧರ್ಮ'ವನ್ನು ಪ್ರತಿನಿಧಿಸುವನು. 'ದಾಕ್ಷಿಣ್ಯಧರ್ಮ' ಧರ್ಮದ ಒಂದು ಮುಖವಾದರೆ 'ನೈಷ್ಠುರ್ಯ ಧರ್ಮ' ಧರ್ಮದ ಮತ್ತೊಂದು ಮುಖ. ಅನುಷ್ಠಾನದಲ್ಲಿ ಸಾಕಷ್ಟು ರಿಯಾಯತಿ ತೋರಿಸಿ ಅನುಷ್ಠಾತೃವಿಗೆ ಆಚರಣೆಯಲ್ಲಿ ತುಂಬ ಸೌಲಭ್ಯವನ್ನು ಕಲ್ಪಿಸಿಕೊಡುವ ಧರ್ಮ 'ದಾಕ್ಷಿಣ್ಯ ಧರ್ಮ' ಎನಿಸಿದರೆ, ಹತ್ತಾರು ವಿಧಿನಿಷೇಧಗಳ ಸಂಕೋಲೆಯಲ್ಲಿ ಬಂಧಿಸಿ, ಯಾವೊಂದು ವಿಧಿಯನ್ನು, ನಿಷೇಧವನ್ನೂ ಉಲ್ಲಂಘಿಸಲು ಅವಕಾಶ ನೀಡದೆ ತುಂಬ ಪರಿಶ್ರಮದಿಂದಷ್ಟೇ ಅನುಷ್ಠಾನಾರ್ಹ ಎನಿಸುವ ಧರ್ಮ 'ನೈಷ್ಠುರ್ಯ ಧರ್ಮ' ಎನಿಸುವುದು. 'ಹರಿಸ್ಮರಣೆ' 'ಕರ್ಮಸಮರ್ಪಣೆ' ಇತ್ಯಾದಿಗಳು ದಾಕ್ಷಿಣ್ಯ ಧರ್ಮದ ವ್ಯಾಪ್ತಿಗೆ ಸೇರುವವು. 'ಏಕಾದಶೀ ವ್ರತಾಚರಣೆ' 'ವಿಷ್ಣುಪಂಚಕ ವ್ರತಾಚರಣೆ' ಮುಂತಾದವು. ನೈಷ್ಠುರ್ಯಧರ್ಮಕ್ಕೆ

ವೇದಾಂತ ಉಪನ್ಯಾಸಕರು, ಸಂಸ್ಕೃತ ಕಾಲೇಜು, ಉಡುಪಿ



ಸೇರುವವು. ಇಷ್ಟೇ ಅಲ್ಲ, ಒಂದೇ ಧರ್ಮದ ಒಂದು ಮುಖ 'ದಾಕ್ಷಿಣ್ಯ ಧರ್ಮ' ಎನಿಸಿದರೆ, ಹತ್ತಾರು ವಿಧಿನಿಷೇಧಗಳ ಸಂಕೋಲೆಯಲ್ಲಿ ಬಂಧಿಸಿ, ಯಾವೊಂದು ವಿಧಿಯನ್ನೂ, ನಿಷೇಧವನ್ನೂ ಉಲ್ಲಂಘಿಸಲು ಅವಕಾಶ ನೀಡದೆ ತುಂಬ ಪರಿಶ್ರಮದಿಂದಷ್ಟೇ ಅನುಷ್ಠಾನಾರ್ಹ ಎನಿಸುವ ಧರ್ಮ 'ನೈಷ್ಠುರ್ಯ ಧರ್ಮ' ಎನಿಸುವುದು. 'ಹರಿಸ್ಮರಣೆ' 'ಕರ್ಮಸಮರ್ಪಣೆ' ಇತ್ಯಾದಿಗಳು ದಾಕ್ಷಿಣ್ಯಧರ್ಮದ ವ್ಯಾಪ್ತಿಗೆ ಸೇರುವವು. 'ಏಕಾದಶೀ ವ್ರತಾಚರಣೆ' 'ವಿಷ್ಣು ಪಂಚಕವ್ರತಾಚರಣೆ' ಮುಂತಾದವು ನೈಷ್ಠುರ್ಯ ಧರ್ಮಕ್ಕೆ ಸೇರುವವು. ಇಷ್ಟೇ ಅಲ್ಲ, ಒಂದೇ ಧರ್ಮದ ಒಂದು ಮುಖ ದಾಕ್ಷಿಣ್ಯ ಧರ್ಮ ಎನಿಸಿದರೆ, ಮತ್ತೊಂದು ಮುಖ ನೈಷ್ಠುರ್ಯ ಧರ್ಮ, ಎನಿಸುವುದುಂಟು. ಸ್ನಾನಧರ್ಮದಲ್ಲಿ ಹತ್ತಾರು ವಿಧಿನಿಷೇಧಗಳ ಸಂಕೋಲೆಯಲ್ಲಿ ಬಂಧಿಸಿ, ಯಾವೊಂದು ವಿಧಿಯನ್ನೂ, ನಿಷೇಧವನ್ನೂ ಉಲ್ಲಂಘಿಸಲು ಅವಕಾಶ ನೀಡದೆ ತುಂಬ ಪರಿಶ್ರಮದಿಂದಷ್ಟೇ ಅನುಷ್ಠಾನಾರ್ಹ ಎನಿಸುವ ಧರ್ಮ 'ನೈಷ್ಠುರ್ಯ ಧರ್ಮ' ಎನಿಸುವುದು. 'ಹರಿಸ್ಮರಣೆ' 'ಕರ್ಮಸಮರ್ಪಣೆ' ಇತ್ಯಾದಿಗಳು ದಾಕ್ಷಿಣ್ಯ ಧರ್ಮದ ವ್ಯಾಪ್ತಿಗೆ ಸೇರುವವು. 'ಏಕಾದಶೀ ವ್ರತಾಚರಣೆ' 'ವಿಷ್ಣುಪಂಚಕ ವ್ರತಾಚರಣೆ' ಮುಂತಾದವು ನೈಷ್ಠುರ್ಯ ಧರ್ಮಕ್ಕೆ ಸೇರುವವು. ಇಷ್ಟೇ ಅಲ್ಲ, ಒಂದೇ ಧರ್ಮದ ಒಂದು ಮುಖ 'ದಾಕ್ಷಿಣ್ಯ ಧರ್ಮ' ಎನಿಸಿದರೆ, ಮತ್ತೊಂದು ಮುಖ 'ನೈಷ್ಠುರ್ಯಧರ್ಮ' ಎನಿಸುವುದುಂಟು. ಸ್ನಾನ ಧರ್ಮದಲ್ಲಿ ಹತ್ತಾರು ವಿಧಿ ನಿಷೇಧಗಳನ್ನೊಳಗೊಂಡ ಭಾಗವು ನೈಷ್ಠುರ್ಯ ಧರ್ಮ ಎನಿಸಿದರೆ, 'ಅತಿನೀಲಘನಶ್ಯಾಮಂ... ತೇನ ಸ್ನಾತೋ ಭವಾಮ್ಯಹಮ್'- ಎಂಬುದಾಗಿ ಪುಂಡರೀಕಾಕ್ಷನ ಸ್ಮರಣೆ ಮಾತ್ರದಿಂದ ಆಗುವ ಸ್ನಾನ 'ದಾಕ್ಷಿಣ್ಯಧರ್ಮ'ದ ವ್ಯಾಪ್ತಿಗೆ ಒಳಪಡುವುದು. ಸ್ತ್ರೀಧರ್ಮದಲ್ಲಿ ಪತಿಯ ಸೇವೆಯಿಂದಲೇ ಅವನು ನಡೆಸುವ ಧರ್ಮದ ಅರ್ಧಪಾಲು ಫಲ ಪತ್ನಿಗೆ ದೊರಕುವುದೆಂಬ ಅಂಶ 'ದಾಕ್ಷಿಣ್ಯಧರ್ಮ'ದ ವ್ಯಾಪ್ತಿಗೆ ಸೇರಿದರೆ, ರಜಸ್ವಲಾಧರ್ಮದ, ವಿಧವಾಧರ್ಮದ ನಿಷ್ಠುರತೆಯಿಂದಾಗಿ ಆ ಧರ್ಮಗಳು 'ನೈಷ್ಠುರ್ಯಧರ್ಮ'ಕ್ಕೆ ಸೇರುವವು.

ಹೀಗೆಯೇ ಪ್ರತಿಯೊಂದು ಧರ್ಮದಲ್ಲೂ ದಾಕ್ಷಿಣ್ಯ ಧರ್ಮದ ಒಂದು ಮುಖವೂ, ನೈಷ್ಠುರ್ಯಧರ್ಮದ ಮತ್ತೊಂದು ಮುಖವೂ ಸೇರಿಕೊಂಡಿರುವುದು.

ಯುಧಿಷ್ಠಿರನಿಗೆ ತುಂಬ ಅಪಕಾರವನ್ನೆಸಗಿದವನು ದುರ್ಯೋಧನ. ಅಂತಹ ದುರ್ಯೋಧನನನ್ನು ಭೀಮಸೇನ ಗದಾಯುದ್ಧದಲ್ಲಿ ದಂಡಿಸುತ್ತಿದ್ದಾಗಲೂ ದುರ್ಯೋಧನನ ಬಗ್ಗೆ ಅನುಕಂಪೆಯನ್ನು ತೋರುವಷ್ಟು ಮೃದುಸ್ವಭಾವದ ಯುಧಿಷ್ಠಿರನಿಂದ ಮಹಾಭಾರತದ ಉದ್ದಕ್ಕೂ ಹೀಗೆಯೇ 'ದಾಕ್ಷಿಣ್ಯ ಧರ್ಮ' ಸಂಕೇತಿಸಲ್ಪಟ್ಟಿದೆ.

ಧೃತರಾಷ್ಟ್ರ ವಿದುರನ ಖಾಸಾ ಅಣ್ಣ. ಸಿಂಹಾಸನವನ್ನು ಏರಿದ ರಾಜ ಕೂಡಾ. ಆದರೂ ಧೃತರಾಷ್ಟ್ರನಿಗೆ ಮೊದಲ ಮಗ ದುರ್ಯೋಧನ ಹುಟ್ಟಿದಾಗ ಸಂಭವಿಸಿದ ಅಪಶಕುನಗಳನ್ನು ಗಮನಿಸಿ ಕುರುವಂಶದ ಶ್ರೇಯಸ್ಸಿಗಾಗಿ ಆ ಕ್ಷಣದಲ್ಲಿಯೇ ದುರ್ಯೋಧನನನ್ನು ತ್ಯಜಿಸಬೇಕೆಂದು ನಿಷ್ಠುರವಾಗಿ ನಿರ್ದಾಕ್ಷಿಣ್ಯವಾಗಿ ಹೇಳುವಷ್ಟು ಧರ್ಮದ ವಿಷಯದಲ್ಲಿ ನಿಷ್ಠುರನಿಲುವಿನ ವಿದುರನಿಂದ ಮಹಾಭಾರತದ ಉದ್ದಕ್ಕೂ ಹೀಗೆಯೇ 'ನೈಷ್ಠುರ್ಯಧರ್ಮ' ಪ್ರತಿನಿಧಿಸಲ್ಪಟ್ಟಿದೆ. ★

# ಸ್ವಾಮಿ ವಿವೇಕಾನಂದರ ಹಾಸ್ಯಪ್ರಜ್ಞೆ

**ಯು. ಎಸ್. ಶ್ರೀನಿವಾಸ ರಾವ್**

ಸ್ವಾಮಿ ವಿವೇಕಾನಂದರು ಆಗಿನ್ನೂ 29-30 ವಯಸ್ಸಿನ ಯುವಕರು. ಅವರು ಪಾಶ್ಚಾತ್ಯ ದೇಶಗಳಲ್ಲಿ ಭಾರತದ ಹಿರಿಮೆ ಬಗ್ಗೆ ಉಪನ್ಯಾಸಗಳನ್ನು ನೀಡುತ್ತಿದ್ದರು. ಅವರ ಉಪನ್ಯಾಸದಲ್ಲಿ ಅವರ ಸ್ವಾಭಿಮಾನ, ರಾಷ್ಟ್ರಭಕ್ತಿ, ಅಗಾಧ ಪಾಂಡಿತ್ಯದ ಜೊತೆಗೆ ಅವರಲ್ಲಿದ್ದ ಹಾಸ್ಯ ಪ್ರಜ್ಞೆ ಕೂಡ ಎದ್ದು ಕಾಣುತ್ತಿತ್ತು. ಅಲ್ಲಿಯ ಜನರು ಅವರನ್ನು ಭಾರತದ ಬಗ್ಗೆ, ಅವರ ಬಗ್ಗೆ ಕುತೂಹಲ ಪ್ರಶ್ನೆಗಳನ್ನು ಕೇಳುತ್ತಿದ್ದರು. ಅದಕ್ಕೆ ಸ್ವಾಮೀಜಿ ಕೆಲವೊಮ್ಮೆ ಹಾಸ್ಯಮಯ ಉತ್ತರ ಕೊಡುತ್ತಿದ್ದರು. ಕ್ರೈಸ್ತ ಮಿಷನರಿಗಳು ಅಮೇರಿಕಾದಲ್ಲಿ ಭಾರತದ ಬಗ್ಗೆ ಮಾಡುತ್ತಿದ್ದ ಅಪಪ್ರಚಾರದಿಂದ ಅಮೇರಿಕನ್ನರಿಗೆ ಭಾರತೀಯರೆಂದರೆ ಒಂದು ಅನಾಗರಿಕ ಜನಾಂಗ ಎಂದೇ ಕಲ್ಪನೆಯಿತ್ತು. ಆದರೆ ಸ್ವಾಮಿ ವಿವೇಕಾನಂದರ ಮುಂದೆ ಯಾರೇ ಆಗಲಿ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಭಾರತವನ್ನು ಹೀಯಾಳಿಸಿ ಮಾತಾಡಿದರೆ ತಮ್ಮ ಮಾತಿನ ಮೊನಚಿನ ಚುರುಕು ಮುಟ್ಟಿಸದೆ ಬಿಡುತ್ತಿರಲಿಲ್ಲ.

ಒಮ್ಮೆ ಒಬ್ಬ ಆಂಗ್ಲ ಮಹಿಳೆ 'ಸ್ವಾಮೀಜಿ, ನೀವು ಇಷ್ಟೊಂದು ನಿಮ್ಮ ತಾಯ್ನಾಡಿನ ಬಗ್ಗೆ ಅಭಿಮಾನ ಇರುವವರು ನಮ್ಮ ದೇಶದ ಬೂಟ್ಸು ಧರಿಸಿದಿರಲ್ಲಾ! ಇದು ಸರಿಯೇ?' ಎಂದು ಕೇಳಿದಾಗ ತಕ್ಷಣ ಸ್ವಾಮಿಜಿಯ ಬಾಯಿಯಿಂದ ಬಾಣದಂತೆ ಉತ್ತರ ಬಂತು - 'ನಮ್ಮ ದೇಶದಲ್ಲಿ ಆಂಗ್ಲರಿಗೆ ಯಾವ ಸ್ಥಾನವಿದೆ ಎಂಬುದನ್ನು ತೋರಿಸುವುದಕ್ಕೆ!'

ಸ್ವಾಮಿ ವಿವೇಕಾನಂದರು ಅಮೇರಿಕೆಯಲ್ಲಿರುವಾಗ ಅನೇಕರು ಅಲ್ಲಿಯವರು ಅವರು ಬೌದ್ಧ ಸನ್ಯಾಸಿ ಎಂದು ಭಾವಿಸಿದ್ದರು. ಬೌದ್ಧರನ್ನು ಇಂಗ್ಲೀಷ್‌ನಲ್ಲಿ 'Buddhist' (ಬುದ್ಧಿಸ್ಟ್) ಎಂದು ಕರೆಯುತ್ತಾರೆ. ಓರ್ವ ಮಹಿಳೆ ಸ್ವಾಮೀಜಿಯವರನ್ನು ನೋಡಿ ಅವರು ಬೌದ್ಧರಿರಬೇಕೆಂದು ಭಾವಿಸಿ, ಆಕೆ 'Buddhist' ಎಂಬ ಪದವನ್ನು ಸರಿಯಾಗಿ ಉಚ್ಚರಿಸಲು ಬಾರದೆ ಅವರನ್ನು ಕೇಳಿದಳು "ಸ್ವಾಮೀಜಿ, ನೀವು ಬಡಿಸ್ಟರೇ (Buddist)? ಎಂದು ( Bud ಎಂದರೆ ಮೊಗ್ಗು). ಸ್ವಾಮೀಜಿ ತುಂಟ ನಗೆ ಬೀರುತ್ತಾ ಉತ್ತರಿಸಿದರು 'ಇಲ್ಲ ನಾನು Flowerist' (ಅಂದರೆ ಹೂವು ಮಾರುವವನು.)

ಸ್ವಾಮೀಜಿ ಅಮೇರಿಕೆಯಲ್ಲಿರುವಾಗ ನಡೆದ ಒಂದು ಘಟನೆ. ಅವರ ಪ್ರೀತಿಯ ಅಮೇರಿಕನ್ ಶಿಷ್ಯನೊಬ್ಬ ಅವರ ಕಾಲಬೆರಳುಗಳ ಉಗುರನ್ನು ತೆಗೆಯುತ್ತಿದ್ದ. ಇದೇ ಸಂದರ್ಭದಲ್ಲಿಯೇ ಪರಸ್ಪರ ಸಂಭಾಷಣೆಯೂ ನಡೆಯುತ್ತಿತ್ತು. ಅಂದು ಸ್ವಾಮೀಜಿ ತುಂಬಾ ಉಲ್ಲಾಸದಿಂದ ಇದ್ದಂತೆ ಶಿಷ್ಯನಿಗೆ ಕಂಡು ಬಂದದ್ದರಿಂದ ಒಂದು ಹಾಸ್ಯ ಚಟಾಕಿ ಹಾರಿಸುವ ಮನಸ್ಸಾಯಿತು ಶಿಷ್ಯನಿಗೆ. ಅವನು ಮುಗುಳು ನಗುತ್ತ ಸ್ವಾಮೀಜಿಯವರ ಕಡೆ ತಿರುಗಿ ಕೇಳಿದ 'ಸ್ವಾಮೀಜಿ, ನಾವು ಅಮೇರಿಕನ್ನರು ಯಾವ ಕೆಲಸವನ್ನೂ ಪುಕ್ಕಟೆ ಮಾಡುವುದಿಲ್ಲ. ಈಗ ನಿಮ್ಮ ಕಾಲುಗುರು ತೆಗೆದದ್ದಕ್ಕೆ ನನಗೆ ನೀವು ಏನು ಕೊಡುವಿರಿ?

ಸ್ವಾಮೀಜಿ ಕೂಡ ಮುಗುಳು ನಗುತ್ತಾ ಉತ್ತರಿಸಿದರು - "ನಾನು ಭಾರತೀಯ ಸ್ವಾಮಿ, ಭಾರತೀಯ ಸ್ವಾಮಿಗಳ, ಸಾಧುಗಳ ಪಾದ ಮುಟ್ಟಿದರೆ ಕಾಣಿಕೆ ಕೊಡಬೇಕು" ಎಂದಾಗ ಶಿಷ್ಯ ಹಾಗೂ ಅಲ್ಲಿದ್ದ ಇತರರು ಹೊಟ್ಟೆ ಹುಣ್ಣಾಗುವಂತೆ ನಕ್ಕರು.

ಆಗ ಮತ್ತೊಬ್ಬ ಅಲ್ಲಿಯೇ ಇದ್ದ ಶಿಷ್ಯ "ಸ್ವಾಮೀಜಿ ಭಾರತದಲ್ಲಿ ಯುವತಿಯರನ್ನು ಮುದುಕರಿಗೆ ವಿವಾಹ ಮಾಡಿಕೊಡುತ್ತಾರಂತೆ ಹೌದೇ" ಎಂದು ತುಂಟತನದ ಪ್ರಶ್ನೆ ಕೇಳಿದಾಗ ಅಷ್ಟೇ ತುಂಟತನದ ಉತ್ತರ ಕೊಟ್ಟರು ಸ್ವಾಮೀಜಿ - "ಹೌದು ನನ್ನಂತಹ ಯುವಕರೆಲ್ಲಾ ದೇಶ ಸೇವೆಗೆ, ಈಶ ಸೇವೆಗೆ ಸನ್ಯಾಸಿಯಾಗಿ ಬಿಡುತ್ತಾರೆ. ಆಗ ಯುವತಿಯರು ಇನ್ನು ಉಳಿದ ಮುದುಕರನ್ನೇ ಮದುವೆಯಾಗಬೇಕು" ಎಂದಾಗ ಶಿಷ್ಯರೆಲ್ಲಾ ನಗೆಗಡಲಲ್ಲಿ ಮುಳುಗಿ ಸ್ವಾಮಿ ವಿವೇಕಾನಂದರ ಹಾಸ್ಯ ಪ್ರಜ್ಞೆಗೆ ಮೆಚ್ಚಿ ತಲೆದೂಗಿದರು.

**938, 'ಆಶೀರ್ವಾದ್' ಬಿ. ಎಸ್.ಕೆ. 3ನೇ ಹಂತ, 7ನೇ ಬ್ಲಾಕ್, ಕಾಳಿದಾಸ ನಗರ, ಹೊಸ್ಕೆರೆ ಹಳ್ಳಿ, ಬೆಂಗಳೂರು – 560 085**

NANDAKI

Ph. : 2480248 (5 lines)
Mobile : 9844009894 (Amar)
Tele Fax : 2125099 /2126420
Email : nandaki@vsnl.net

**Investments & Holdings (P) Ltd.**
**ENGINEERS & DEVELOPERS (P) Ltd.**

1st floor, CFC Building Annexe, #14/3,
Nrupathunga Road, Bangalore - 560 001

*Contact us for advice on your*
**Investments (Mutual Funds, RBI Bonds, Infrastructure Bonds etc.)**
**Insurance (Life Insurance & General Insurance)**
**Home Loans**
**Construction of Flats & Houses**

# ಭಕ್ತರಿಗಾಗಿ ಭಾರ ಹೊತ್ತ ಭಗವಂತ

**ರಮಣ ಬಾಯಿರಿ, ಅಂಬಲಪಾಡಿ**

ಭಗವಂತನ ಅನಂತ ಸ್ತೋತ್ರ ಸಾಹಿತ್ಯದಲ್ಲಿ ವಿಷ್ಣುನಾಮಾವಳಿಗೊಂದು ವಿಶಿಷ್ಟವಾದ ನೆಲೆ ಇದೆ. ಈ ಸಾವಿರ ನಾಮಗಳು ವೇದಗಳಿಗೆ ವ್ಯಾಖ್ಯಾನ ರೂಪವಾದುವು ಕೂಡಾ. ಇವು ಮೂಡಿ ಬಂದ ಸಂದರ್ಭವೂ ರೋಚಕ. ಮಹಾಭಾರತ ಯುದ್ಧ ಮುಗಿದಿತ್ತು. ದುರ್ಯೋಧನನ ದುಷ್ಟ ಅನ್ನ ಭಕ್ಷಣದಿಂದುಂಟಾದ ರಕ್ತವು ದೇಹವನ್ನು ಚುಚ್ಚುತ್ತಿದ್ದ ಬಾಣಗಳ ಗಾಯದ ಮೂಲಕ ಹರಿದು ಹೋಗಿ ಆತನೊಂದಿಗಿನ ಲೌಕಿಕ - ಭಾವನಾತ್ಮಕ ಸಂಬಂಧವು ಕಡಿದು ಹೋಗಿ, ತಾನು ಪರಿಶುದ್ಧನಾದೆನೆಂದು ಎಣಿಸಿ, ಶರಶಯ್ಯೆಯಲ್ಲಿ ಭಗವಂತನನ್ನು ನೆನೆಯುತ್ತಾ ಮಲಗಿಕೊಂಡು ಭೀಷ್ಮರು ಪ್ರಾಣೋತ್ಕ್ರಮಣ ಸ್ಥಿತಿಯಲ್ಲಿದ್ದ ಕ್ಷಣಗಳು. ಆ ವೇಳೆಯಲ್ಲಿ ಯುದ್ಧದಲ್ಲಾದ ಸಾವು ನೋವುಗಳಿಂದ ತಪ್ತನಾದ ಯುಧಿಷ್ಠಿರನೊಂದಿಗೆ ಶ್ರೀಕೃಷ್ಣ ಅಲ್ಲಿಗೆ ಬಂದ. ಭೀಷ್ಮರ ಹೃದಯದಲ್ಲಿದ್ದುಕೊಂಡು, ಅವರ ಮುಖದಿಂದ ಯುಧಿಷ್ಠಿರನ ಸಮ್ಮುಖದಲ್ಲಿ ಆತನಿಗೆ ಸಾಂತ್ವನ ನೀಡಲು ವಸ್ತುತಃ ಶ್ರೀಕೃಷ್ಣನೇ ನುಡಿಸಿದ ಸ್ತುತಿಯೇ ವಿಷ್ಣುವಿನ ಸಹಸ್ರನಾಮಗಳು. ಹೀಗೆ 'ಸಾವಿರದ' ನಾಮಗಳ ಪಠಣ ಮುಕ್ತಿಗೆ ಸೋಪಾನ. ಶ್ರೀ ಮಧ್ವಾಚಾರ್ಯರು ಈ ಸಹಸ್ರನಾಮಾವಳಿಯ ಪ್ರತಿಯೊಂದಕ್ಕೂ ಕನಿಷ್ಠ ನೂರು ಅರ್ಥಗಳಿವೆ ಎಂದು ತಾನು ತಿಳಿದು ಉಲ್ಲೇಖಿಸಿದ್ದಾರೆ. ಇನ್ನೊಂದು ವೈಶಿಷ್ಟ್ಯವೆಂದರೆ, ಸಹಸ್ರನಾಮಗಳುಳ್ಳವನಾಗಿರುವ ಜೊತೆಗೆ, ಅಂತಹ ಒಂದೊಂದು ನಾಮಕ್ಕೂ ವಿಭಿನ್ನವಾದ ರೂಪವುಳ್ಳವನು. ಸಹಸ್ರಕ್ಕೆ ಅನಂತವೆಂಬ ಭಾವಾರ್ಥವಿರುವುದರಿಂದ, ಭಗವಂತನು ಅನಂತ ನಾಮ - ರೂಪಧಾರಿಯಾಗಿದ್ದಾನೆ.

ಪ್ರಕೃತ, ನಾಮಾವಳಿಯ 854ನೇ 'ಭಾರಭತ್' ಎಂಬ ನಾಮವು ಭಾರ ಹೊತ್ತವನು, ಧರಿಸಿದವನು, ವಹಿಸಿದವನು ಮುಂತಾದ ಅರ್ಥವುಳ್ಳದ್ದಾಗಿದೆ. ಶ್ರೀ ವಿಷ್ಣುವು ಮುಖ್ಯವಾಗಿ ಯಾವ ಸಂದರ್ಭಗಳಲ್ಲಿ ಹೇಗೆ ಎಂತಹ ಭಾರವನ್ನು ಭರಿಸಿದ ಎಂಬುದರ ಸ್ಥೂಲವಾದ ಪ್ರಮೇಯವನ್ನು ಸಂಗ್ರಹಿಸುವ ಪ್ರಯತ್ನವಿದು.

★ ಅನನ್ಯವಾಗಿ ತನ್ನನ್ನೇ ಚಿಂತನೆಯ ಮೂಲಕ ಉಪಾಸನೆ ಮಾಡುವವರ ಯೋಗಕ್ಷೇಮ ಅರ್ಥಾತ್ ಮುಕ್ತಿಯನ್ನು ಕೊಡುವ ಭಾರವನ್ನು ಹೊರುತ್ತೇನೆ ಎಂಬುದಾಗಿ ಗೀತೆಯಲ್ಲಿ ಶ್ರೀಕೃಷ್ಣ ಅರ್ಜುನನಿಗೆ ವಚನವಿತ್ತವನಾಗಿ, ಆತನು ಭಾರಭೃತ್.

★ ರಸಾತಲದಲ್ಲಿ ಶೇಷಾತ್ಮಕನಾಗಿ ಬ್ರಹ್ಮಾಂಡವನ್ನು ಅನಂತ ನಾಮಕನಾದ ಭಗವಂತ ಹೊತ್ತುಕೊಂಡು ಆಧಾರಭೂತನಾದುದರಿಂದ ಭಾರಭೃತ್.

ಸಂದೀಪ ನಗರ, ಉಡುಪಿ – 576 103



★ ಕ್ಷೀರಸಾಗರ ಮಥನ ಕಾಲದಲ್ಲಿ ಮುಳುಗುತ್ತಿದ್ದ ಮಂದರ ಪರ್ವತವನ್ನು ಕೂರ್ಮರೂಪೀ ಭಗವಂತ ಉದ್ಧರಿಸಿದವನಾದುದರಿಂದ ಭಾರಭೃತ್.

★ ತ್ರೇತಾಯುಗದಲ್ಲಿ ಶ್ರೀರಾಮ ಸೀತಾ ಸ್ವಯಂವರಕ್ಕೆ ಸಂಬಂಧಪಟ್ಟಂತೆ ಇತರರಿಗೆ ಭಾರವಾಗಿದ್ದ ಹರ ಧನುಸ್ಸನ್ನು ಲೀಲಾಜಾಲವಾಗಿ ಎತ್ತಿ ಮುರಿದನು 'ಭಾರಭೃತ್'.

★ ತನ್ನನ್ನೂ ಓರ್ವ ಗೋಪಾಲಕನೆಂದು ಭ್ರಮಿಸಿಕೊಂಡಿದ್ದ ತನ್ನ ಸಂಗಡಿಗರಿಗೆ ತನ್ನ ವೈಶಿಷ್ಟ್ಯದ ಒಂದಂಶವನ್ನು ಪರಿಚಯಿಸಲು ಮತ್ತು ಇಂದ್ರನ ಮಮಕಾರವನ್ನು ಪರಿಸಮಾಪ್ತಿಗೊಳಿಸಲೋಸುಗ, ಗೋವರ್ಧನಗಿರಿಯ ಪೂಜೆಯನ್ನು ತಾನು ಸ್ವೀಕರಿಸುತ್ತಾ ಅದನ್ನು ಎತ್ತಿ ಧಾರಾಕಾರವಾದ ಮಳೆಯಿಂದ ಗೋಪಾಲಕರನ್ನು ರಕ್ಷಿಸಿದವ - 'ಭಾರಭೃತ್'.

★ ದೈತ್ಯ ಹಿರಣ್ಯಾಕ್ಷ ಹರಿದ್ವೇಷದಿಂದ ಭೂಮಿಯನ್ನು ಅದರ ಕಕ್ಷೆಯಿಂದ ತಪ್ಪಿಸಿ ಸಮುದ್ರದಲ್ಲಿ ಮುಳುಗಿಸಿಟ್ಟಾಗ, ವಿಷ್ಣು ವರಾಹರೂಪ ಧರಿಸಿ, ಭೂಮಿಯನ್ನು ತನ್ನ ಕೋರೆದಾಡೆಯಿಂದ ಎತ್ತಿ ಸ್ವಸ್ಥಾನದಲ್ಲಿ ಇಟ್ಟಿದ್ದರಿಂದ 'ಭಾರಭೃತ್'.

★ ಬ್ರಹ್ಮದೇವರ ವರಬಲದಿಂದ ಅವಧ್ಯನಾಗಿರುವೆನೆಂಬ ಅಹಂಕಾರ ಪಡುತ್ತಾ ಹರಿದ್ವೇಷವನ್ನು ಬೆಳೆಸಿಕೊಂಡು ಪ್ರಹ್ಲಾದಾದಿ ಸುಜೀವಿಗಳನ್ನು ಹಿಂಸಿಸುತ್ತಿದ್ದ ದೈತ್ಯ ಹಿರಣ್ಯಕಶಿಪುವನ್ನು ಭಗವಂತ, ನರಸಿಂಹ ರೂಪದಿಂದ, ತನ್ನ ಭಕ್ತರ ಮಾತುಗಳನ್ನೆಲ್ಲ ಸತ್ಯವನ್ನಾಗಿಸಿ, ಹೊಸ್ತಿಲಲ್ಲಿ ಆಸೀನನಾಗಿ, ದೈತ್ಯನನ್ನು ತನ್ನ ತೊಡೆಯಲ್ಲಿ ಧರಿಸಿ ಉಗುರಿನಿಂದ ಸಂಹರಿಸಿದವನಾದುದರಿಂದ 'ಭಾರಭೃತ್'.

★ ಯಮಳಾರ್ಜುನರೆಂಬ ಇಬ್ಬರು ವೃಕ್ಷ ರೂಪದಲ್ಲಿದ್ದ ದೈತ್ಯರನ್ನು ಬಾಲಕನಾದ ಶ್ರೀಕೃಷ್ಣ ಭಾರವಾದ ಮರದ ಒರಳೊಂದನ್ನು ಎಳೆದುಕೊಂಡು ಆ ವೃಕ್ಷಗಳನ್ನು ಕೆಡವಿದವನಾದ್ದರಿಂದ 'ಭಾರಭೃತ್'.

★ ಶ್ರೀಕೃಷ್ಣ ತುಲಾಭಾರದ ಪ್ರಸಂಗದಲ್ಲಿ ಲಕ್ಷ್ಮೀದೇವಿಯು ಭಕ್ತಿಯಿಂದ ತಕ್ಕಡಿಯ ಒಂದು ಪಾತ್ರೆಯಲ್ಲಿ ಒಂದು ದಳ ತುಳಸಿಯನ್ನು ಇಟ್ಟಾಗ ಅದಕ್ಕೆ ತನ್ನ ಭಾರವನ್ನು ಕೊಟ್ಟೂ ಮತ್ತು

*With Best Compliments from :*

*Ph.: 2365931, 2216327 (O)*
*2216326, 2247066 (R)*

**SHARMA ENTERPRISES**

***Distributors of Karthikeya Papers & Boards Ltd.***

**Kubsad Galli, HUBLI -580 028**

*Dealers in Papers & Boards, Wedding Cards,*
*Mfg. of Students Note Books & Envelopes*

ಧರಿಸಿ ಸಮನಾಗಿಸಿದವ 'ಭಾರಭೃತ್'.

★ ಗೋಪಿಕಾ ಕನ್ಯೆಯರಲ್ಲಿ ರಾಧೆ ಎಂಬವಳು ಕೃಷ್ಣನಿಗೆ ಅತ್ಯಂತ ಪ್ರಿಯಳಾಗಿದ್ದು, ಅವಳನ್ನು ಒಮ್ಮೆ ಎತ್ತಿಕೊಂಡೂ ಹೋದನೆಂಬುದಾಗಿ ಇತರ ಗೋಪಿಯರಿಗೆ ಮೋಹ ಬರಿಸಿದ ಕೃಷ್ಣ 'ಭಾರಭೃತ್'.

★ ದೈತ್ಯರಿಗೆ ಅವರವರ ಅಪೇಕ್ಷೆಯಂತೆ ಬ್ರಹ್ಮಾದಿದೇವತೆಗಳು ಅವಧ್ಯತ್ವವೇ ಮೊದಲಾದವರಗಳನ್ನು ಕೊಡುವವರು. ಅದರ ಪರಿಣಾಮವಾಗಿ ದೈತ್ಯರು ಲೋಕ ಪೀಡಕರಾದಾಗ ಸಜ್ಜನರ ಪ್ರಾರ್ಥನೆಯ ಮೇರೆಗೆ ವಿಷ್ಣುವು ಅಂತಹ ದೇವತೆಗಳ ವರಗಳನ್ನೂ ಸತ್ಯವಾಗಿಸುತ್ತ, ದೈತ್ಯರು ಅವುಗಳ ದುರ್ಲಾಭ ಪಡೆಯಲು ವಿಫಲರಾಗುವಂತೆಯೂ ಮಾಡುವ ಭಾರವನ್ನು ಹೊತ್ತವನು. ಆದ್ದರಿಂದ 'ಭಾರಭೃತ್'

★ ಗರುಡನು ವಿಷ್ಣುವನ್ನು ಹೊರುವ ವಾಹನನಾದಾಗ, ಹನುಮಂತನು ಗಂಧಮಾದನ ಗಿರಿಯನ್ನು ಹಿಮಾಲಯದಿಂದ ಲಂಕೆಗೆ ಹೊತ್ತು ತಂದಾಗ, ವೇಂಕಟಾಚಲಕ್ಕೆ ಹಿಂದೆ ಶೇಷಾಚಲವೆಂಬ ಹೆಸರು ಬಂದ ಕಥೆಗನುಗುಣವಾಗಿ ಶೇಷನು ಸುತ್ತಿಕೊಂಡ ಆನಂದ ಪರ್ವತವನ್ನು ವಾಯುದೇವನು ಕಿತ್ತು ಯೋಜನಗಳಷ್ಟು ದೂರ ಬಿಸಾಡಿದಾಗ ಗಂಗಾವತರಣದ ಸಂದರ್ಭದಲ್ಲಿ ಸುರಲೋಕದಿಂದ ಗಂಗೆ ಅತ್ಯಂತ ರಭಸದಿಂದ ಧರೆಗೆ ಧುಮುಕುವಾಗ ಶಿವನು ಆ ರಭಸವನ್ನು ತಡೆದಾಗ, ಹೀಗೆ ಇನ್ನೂ ಇಂತಹ ಅನೇಕಾನೇಕ ಪ್ರಸಂಗಗಳಲ್ಲಿ ಮತ್ತು ಇತರ ಯಾರಾದರೂ ಯಾವ ಭಾರವನ್ನಾದರೂ ಸದಾ ತಾನೇ ಅವರಿಗೆ ಶಕ್ತಿ ನೀಡಿ, ಪರೋಕ್ಷವಾಗಿ ಭಾರ ಹೊರುವವನು ವಿಷ್ಣು. ಆದ್ದರಿಂದ 'ಭಾರಭೃತ್'.

ಇಲ್ಲಿ ತಿಳಿದವರು ಗಮನಿಸುವ ಮುಖ್ಯ ಪ್ರಮೇಯವೆಂದರೆ, ಪರಮಾತ್ಮನು ಅಣುವಿಗಿಂತ ಅಣು - ಮಹತ್ತಿಗಿಂತ ಮಹತ್ತಾಗಿದ್ದಾನೆ. ಹಾಗೆಯೇ ಭಾರಕ್ಕಿಂತಲೂ ಭಾರ. ಹಗುರಕ್ಕಿಂತ ಹಗುರ. ಲೋಕದ ದೃಷ್ಟಿಯಿಂದ ಕಂಡು ಬರುವ ಭಾರ ಭಗವಂತನಿಗೆ ಸಲ್ಲದು. ಜಗನ್ನಾಟಕ ಸೂತ್ರಧಾರನಾದವನಿಗೆ, ತಾನು ಭಾರ ಹೊತ್ತಂತೆ ನಟಿಸುವುದು, ಪರರಿಗೆ ಭಾರ ಹೊರಿಸುವ ಶಕ್ತಿ ನೀಡುವುದೆಲ್ಲ ಆತನ ಇತರ ಅನೇಕ ಲೀಲೆಗಳಂತೆ ಕೇವಲ ಕ್ರೀಡಾತ್ಮಕ. ಹಲವರಿಗೆ ಭ್ರಾಂತಿ - ಮೋಹಕಾರಕವೂ ಆದೀತು.


## ವಧು ಬೇಕಾಗಿದ್ದಾಳೆ

**ಬೆಂಗಳೂರಿನಲ್ಲಿ ಹೋಟೇಲ್ ನಡೆಸುತ್ತಿರುವ ಪೂರ್ವಾಷಾಢ ನಕ್ಷತ್ರ, ಹರಿತ್ಸಾ ಗೋತ್ರದ ಎಸ್. ಎಸ್. ಎಲ್. ಸಿ. ತನಕ ಓದಿರುವ 5ಅಡಿ 4 ಇಂಚು ಎತ್ತರದ 20-9-1969ರ ಧನುರಾಶಿಯಲ್ಲಿ ಹುಟ್ಟಿರುವ ಮಾಧ್ವ ಬ್ರಾಹ್ಮಣ ವರನಿಗೆ ಒಳ್ಳೆಯ ಮನೆತನದ ತ್ರಿಮತಸ್ಥ ಬ್ರಾಹ್ಮಣ ಕನ್ಯೆ ಬೇಕಾಗಿದ್ದಾಳೆ. ಆಸಕ್ತರು ಈ ಕೆಳಗಿನ ದೂರವಾಣಿಗಳನ್ನು ಸಂಪರ್ಕಿಸಬಹುದು.**

ದೂರವಾಣಿ : 0820-2544103, 5520859
0820-2521272 (ಮಧ್ಯಾಹ್ನ 3 ರಿಂದ 6)



# ಭಕ್ತಿ ಪರವಶತೆ

**ವಾಸುದೇವ ಕಾಣೆಮಾರ್**

'ನಾರದ ಭಕ್ತಿ ಸೂತ್ರ'ದಲ್ಲಿ ಒಂದು ಮಾತಿದೆ - 'ಯತ್ ಜ್ಞಾತ್ವಾ ಮತ್ತೋ ಭವತಿ, ಸ್ತಬ್ಧೋ ಭವತಿ, ಆತ್ಮಾರಾಮೋ ಭವತಿ' ಹೀಗೆಂದರೆ ಭಕ್ತಿಭಾವವು ಅತಿಶಯವಾದಾಗ ಒಂದು ಭಾವೋದ್ರೇಕವು ಕಾಣಿಸಿಕೊಳ್ಳುತ್ತದೆ ಎಂದು ಅರ್ಥ. ಆಗ ನಮ್ಮಲ್ಲಿಯ ಬೌದ್ಧಿಕ ಸ್ವಭಾವಗಳು ತೀವ್ರವಾಗಿ ಒಂದು 'ಹುಚ್ಚು' ಕಾಣಿಸುತ್ತದೆ. ಅದು ಭಕ್ತಿಯ ಉನ್ಮಾದ. ಭಗವಂತನ ಅನುಸಂಧಾನವು ಸಫಲಗೊಳ್ಳುತ್ತಿರುವಾಗ ಪರಮಾರ್ಥದಲ್ಲಿ ಮತ್ತು ಪಾರಲೌಕಿಕವಾದೊಂದು ಆನಂದದಲ್ಲಿ ತಲ್ಲೀನವಾಗುತ್ತದೆ ಮನೋವ್ಯಾಪಾರ. ಅದರಲ್ಲಿ ಮನಸ್ಸು, ಚಿತ್ತ, ಬುದ್ಧಿ, ಅಹಂಕಾರಗಳು ಮಾತ್ರವಲ್ಲ ಆತ್ಮವೂ ಪರಮಾತ್ಮನಲ್ಲಿ ಸಾನ್ನಿಧ್ಯ ಇದ್ದಕಿದ್ದಂತೆ ಎಂದರೆ ಇಹಸ್ಥಿತಿಯಲ್ಲೇ ಜೀವನಿಗೆ ಅನುಭವವಾಗುತ್ತದೆ. ಆಗ ಭಗವಂತನನ್ನು ಹೊರತು ಉಳಿದ ಪದಾರ್ಥಗಳಲ್ಲಿ ಅಸಂತುಷ್ಟಿಯ ಮುಜುಗರವಾಗುತ್ತಿದ್ದಂತೆ ಸಾಂಸಾರಿಕ, ಪ್ರಾಪಂಚಿಕ ಮತ್ತು ಆದಿಭೌತಿಕ ವ್ಯವಹಾರಗಳಿಂದ ಸ್ವಲ್ಪ ಬಿಡುಗಡೆಯಾಗುತ್ತದೆ. ಇದನ್ನೇ 'ಏಕರತಿ ವಿಚಿಕಿತ್ಸಾ' ಎಂದು ಮುಂಡಕೋಪನಿಷತ್ತಿನಲ್ಲಿ ತಿಳಿಸಿ ಹೇಳಿದೆ (2-2-5). ಆ ಉಪನಿಷತ್ತು ಹೇಳುತ್ತದೆ ಹೀಗೆ- 'ಅವನನ್ನೇ ಧ್ಯಾನಿಸು, ಅವನನ್ನು ಮಾತ್ರವೇ ಧ್ಯಾನಿಸು. ಉಳಿದ ವ್ಯರ್ಥವಾದ ಮಾತು ಶಬ್ದಗಳನ್ನೆಲ್ಲ ತ್ಯಜಿಸು'

ಋಷಿ ಮುನಿಗಳ ಜೀವನದಲ್ಲಿ ಈ ಪರವಶ ಸ್ಥಿತಿಗೇ ಪ್ರಾಧಾನ್ಯ ಹೆಚ್ಚು, ಸಮಸ್ತ ಭವ ಬಂಧನಗಳನ್ನೆಲ್ಲ ಒಮ್ಮೆ ಬಿಟ್ಟು ಅವರು ಭಗವಂತನನ್ನು ಭಕ್ತಿಯಿಂದ ಪ್ರೀತಿಸಲು ಪ್ರಾರಂಭಿಸುವಾಗ ಅವರಿಗೆ ಪರಮಾತ್ಮನು ಎಲ್ಲೆಲ್ಲೂ ಬಾಹ್ಯದ ಮತ್ತು ಅಂತರ್ಯದ ಕಣಕಣಗಳಲ್ಲೂ ಕಾಣಿಸುವ ದರ್ಶನ ಸಿಗುತ್ತದೆ. ಆಗ ಅವರು ಭಗವಂತನನ್ನು ಬಹಳವಾಗಿ ಪ್ರೀತಿಸುತ್ತಾರೆ. ಈ ಸ್ಥಿತಿಗೆ ಭಕ್ತರು ಗಾಢ ಭಕ್ತಿಯೆನ್ನುತ್ತಾರೆ. ಇದನ್ನೇ ಯೋಗಸಾಧಕರು ನಿರ್ವಿಕಲ್ಪ ಸಮಾಧಿಯೆನ್ನುತ್ತಾರೆ. ಜ್ಞಾನಿಗಳು ಇದನ್ನೇ ಬ್ರಹ್ಮಸ್ಥಿತಿಯೆಂದೂ ಅನ್ನುತ್ತಾರೆ. ಮಹಮ್ಮದಿಯ ಸಂತ ಸೂಫಿಗಳು ಇದನ್ನು ಫನಾಫಿಲ್ಲಾ ಎನ್ನುವುದುಂಟು. ಇದೇ ವಿದೇಹಾವಸ್ಥೆ ತುರೀಯಾವಸ್ಥೆ, ಉನ್ಮನ, ಅಲಿಪ್ತತೆ ಮತ್ತು ತನ್ಮಯಾವಸ್ಥೆ (trance)

ದೇವೋಪಾಸನೆಯನ್ನು ನಿತ್ಯಾಹ್ನಿಕ, ಪೂಜೆ, ಯಜ್ಞ, ಪ್ರಾರ್ಥನೆ ಇತ್ಯಾದಿಗಳಿಂದ ಮಾಡುತ್ತಾ ಹೋದಾಗ ಆ ಅಭ್ಯಾಸವು ತೀವ್ರವಾದಾಗ ದೇವನ ಮುಂದೆ ಭಕ್ತನು ತೆಗೆದು ಬಿಸಾಡಿದಂತಾಗುವುದೂ ಉಂಟು. ಆಗ ಜೀವನದ ನಿತ್ಯ ವ್ಯವಹಾರದಲ್ಲಿರುವ ಆತನು ತಾನು ನೀರಿನಿಂದ ತೆಗೆದು ನೆಲಕ್ಕೆ ಮೇಲೆಸೆದು ಬಿದ್ದ ಕಪ್ಪೆಯಂತೆ ಚಡಪಡಿಸುತ್ತ (ಕಪ್ಪೆಯು

7 B, 'ಶಾಂತಿ ನಿಕೇತನ', 19 ಎಲ್. ಜೆ. ರೋಡ್, ಮುಂಬೈ - 400 016



ನೀರಲ್ಲೂ ನೆಲದಲ್ಲೂ ಇರಬಹುದಲ್ಲವೇ?) ಒಮ್ಮೆಗೆ ಬದಲಾಯಿಸುವಾಗ ಸತ್ತು ಹುಟ್ಟಿ ಬಂದಂತೆ ದುಃಖವನ್ನೂ ಸಂತೋಷವನ್ನೂ ಪಡುತ್ತಾನಂತೆ. ಇಂತಹುದು ಉಚ್ಚತಮ ದೇವಭಕ್ತರಿಗೇ ಸಾಧ್ಯ. ಅವರಿಗಾಗ ಸ್ಮೃತಿ ತಪ್ಪುವ ತನ್ಮಯಾವಸ್ಥೆ ಬರುತ್ತದೆ. ಹೀಗೆ ಸೂರ್ಯನ ಕಡೆಗೆ ಹಗಲೆಲ್ಲಾ ಮುಖ ತೋರಿವ ಸೂರ್ಯಕಾಂತಿ ಹೂವಾಗಲಿ, ಮಗುವಿನ ಬಳಿ ಕುಳಿತು ಮನೆವಾರ್ತೆಯ ಕರೆ ಬಿದ್ದಾಗ ಕೂಡಲೇ ಮನಸ್ಸನ್ನು ಬೇರೆಕಡೆ ತಿರುಗಿಸುವ ತಾಯಿಯಾಗಲಿ ಒಂದು ದೆಸೆಯಲ್ಲಿ ಆಕರ್ಷಿತರಾಗುವಂತೆ ಭಕ್ತಿ ಪರವಶತೆಯಲ್ಲಿ ದೇವನೆಡೆಗೆ ಆಕರ್ಷಿತರಾಗುವರು ಅವರು.

ತನ್ಮಯಾವಸ್ಥೆಯಲ್ಲಿ ಒಂದು ದಿವ್ಯ ರೂಪವು ಕಣ್ಣಿಗೆ ಕಟ್ಟಿದಂತಾದಾಗ ಇಂದ್ರಿಯ ಗೋಚರವಾದಂತಹ ಅನುಭವವನ್ನು ಆತ್ಮವು ಅನುಭವಿಸುತ್ತದೆ. ಅದೇ ಆತ್ಮಾರಾಮತೆ. ದೇಹದ ಎಚ್ಚರ ಬಿದ್ದು, ಪೂರ್ಣ ಮರವೆಯುಂಟಾಗಿ ಕೆಲ ಹೊತ್ತಾದರೂ ನಿಂತಲ್ಲೇ ಮರಗಟ್ಟಿ ಹೋದಂತಾಗುತ್ತದೆ. ಇದು ವಾತದ (arthritis) ಊತದಂತಲ್ಲ. ಆಗ ಮೈಕೈ ಅಲ್ಲಾಡಿಸುವುದಕ್ಕಾಗುವುದಿದ್ದರೂ ಅದಕ್ಕೆ ಸಂಕಲ್ಪವೇ ಇರುವುದಿಲ್ಲ. ಇಂತಹ ಅವಸ್ಥೆಗೆ ತಲುಪಿದ ಯೋಗಿಗಳ ರಕ್ತಾಭಿಸರಣ ನಿಂತಂತೆ ಇರುವುದನ್ನು ಸುತ್ತಮುತ್ತಲಿನ ಜನರೆಲ್ಲ ನೋಡಿದಾಗ ಇದು ಅಪಸ್ಮಾರ ರೋಗವಿರಬಹುದೆಂದು ಭಾವಿಸಬಹುದು. ಆದರೆ ಹಾಗಲ್ಲ. ಮತ್ತೆ ವಿಸ್ಮೃತಿ (ತಿಳಿವು ತೆರೆ ದೇಳುವುದು) ಆದಾಗ ಅವರ ಸ್ಥಿತಿ ಎಲ್ಲ ಮೊದಲಿನಂತೆಯೇ ಇರುತ್ತದೆ.

ಮನುಷ್ಯನು ಸಾಮಾನ್ಯ ನರಪ್ರಾಣಿಯಾಗಿರದೆ ದಿವ್ಯದೃಷ್ಟಿಯನ್ನು ತನ್ಮಯಾವಸ್ಥೆಯಲ್ಲಿ ಪಡೆದು ತನ್ನ ಸಮಸ್ಯೆಗಳಿಗೆ ಸಮಾಧಾನ ಹುಡುಕುತ್ತಾನಲ್ಲದೆ, ಕೇವಲ ಶಿರೋಸ್ಥಿತ ಮೆದುಳಿನ ವಿಚಾರ ಶಕ್ತಿಯಿಂದಲ್ಲ.

ಎಷ್ಟೇ ಸಾಧಕರಿಗೆ ಕಿವಿಯಿಂದ ಕೇಳುವ ಅಥವಾ ಕಣ್ಣಿನಿಂದ ಕಾಣುವ ದೃಶ್ಯವೆಲ್ಲಾ ಇದು ದೇವರು ಮಾಡುವುದೆಂದು ಅಂತರಾತ್ಮನ ಅತಿ ಜಾಗ್ರತ ಮನವು (super conscious mind) ಹೇಳುತ್ತದೆ. ಇದು ಅರ್ಧ ಜಾಗ್ರತ ಮನದಿಂದ ಆಗುವ ನಿದ್ರೆ, ಕನಸು, ಮೂರ್ಛೆ, ಉದ್ವೇಗ, ಉನ್ಮಾದ, ಚಿಂತೆಗಳಂತಹದಲ್ಲ, ಇದು ಸಾಧಾರಣ ಅಂತಃಕರಣ ಶಕ್ತಿಗಳಿಗೂ ಮೀರಿರುವ ಉಚ್ಚ ಅನುಭಾವ ಸ್ವರೂಪದ ಹಂತವಾಗಿರುತ್ತದೆ.

ಕೆಲವರಿಗೆ ಒಂದೊಂದು ಮಂತ್ರ ಶ್ಲೋಕ ಅಥವಾ ನಾಮಸ್ಮರಣೆ ದೇವ ಕೀರ್ತನೆ ಮಾಡುವಷ್ಟರಲ್ಲಿ ತನ್ಮಯಾವಸ್ಥೆ ಬರುವುದುಂಟು. ಬರೇ ವಿಚಾರ - ಚಿಂತನ - ವಾದ - ಚಿಂತೆಗಳಿಂದ ತನ್ಮಯಾವಸ್ಥೆ ಬರುವುದೆಂದು ಸುಳ್ಳು. ತನ್ಮಯಾವಸ್ಥೆ ತಾತ್ಕಾಲಿಕವಾದುದು.

ಭಾವಸಮಾಧಿಯು ಬೇಡವೆಂದಾಗ ತನ್ಮಯಾವಸ್ಥೆಯಲ್ಲಿ ತಾನು ಏನಾದರೂ ಆಗಬೇಕೆಂದು ಬಗೆದರೆ ಹಾಗೇ ಆಗುವುದುಂಟೆಂದು ಯೋಗಶಾಸ್ತ್ರ ಹೇಳುತ್ತದೆ. ಅಣಿಮಾ - ಗರಿಮಾದಂತಹ ಅಷ್ಟಸಿದ್ಧಿಗಳು, ಪರಕಾಯ ಪ್ರವೇಶ, ದೇವರ ಬಲವನ್ನು ಹೊಂದುವಿಕೆ ಇತ್ಯಾದಿ ಆಗುವುದು ನಿಜ.

ತನ್ಮಯಾವಸ್ಥೆಯು ಭಾವಗಳು ಬೀಗಿ ಹೊರಸೂಸುವ ಭಾವೋದ್ರೇಕವಲ್ಲ. ಭಾವೋದ್ರೇಕದಿಂದ ಕಾಮಕ್ರೋಧಾದಿ ಅರಿಷಡ್ವರ್ಗಗಳೂ, ಈರ್ಷ್ಯಾ, ನಿಂದಾ, ವಿಧಿತ್ಸಾ, ಪುರುಷ ಕಾಠಿಣ್ಯ, ಪರಾಸುತಾ ವ್ಯರ್ಥಶೋಕ ಎಂಬ ಷಟ್ ದೋಷಗಳೂ ಸಂಜನಿಸುವವು. ಹಾಗಾಗಬಾರದು. ಹಾಗಾದರೆ ಅವುಗಳನ್ನು ನಿಗ್ರಹಿಸಲೇಬೇಕು. ನಿಗ್ರಹಿಸಲಿಕ್ಕೆ ಸಾಧ್ಯ. ಆದರೆ ಭಕ್ತಿ ಭಾವದಲ್ಲಿ ಬರುವ ತನ್ಮಯತಾ ಸಾಧನೆಯನ್ನು ಪ್ರತಿದಿನವೂ ಜೋಪಾನದಿಂದ ಕಾದುಕೊಳ್ಳಲಿಕ್ಕಾಗುತ್ತದೆ. ಅನಂತರ ಅನಂತವನ್ನು ಸಮೀಪಿಸಿದಂತೆ ಒಂದು ತೃಪ್ತಿ ಮತ್ತು ಶಾಂತಿ ಜೀವಕರಿಗೆ ಕಾಣಿಸುತ್ತದೆ. ಈ ತನ್ಮಯತೆಯನ್ನು ಯಾವ ಮೋಹಿನೀ ಶಕ್ತಿಯೂ ಬಿಡಿಸಲಿಕ್ಕೆ ಸಾಧ್ಯವಿಲ್ಲ. ಆತ್ಮ ಶಕ್ತಿಯೇ ತನ್ಮಯತೆಗೆ ಒಡ್ಡಿ, ಅದೇ ಜೀವಕರನ್ನು ಅದರ ಹಿಡಿತದಿಂದ ಬಿಡಿಸುತ್ತದೆ. ಈ ತನ್ಮಯತೆಯ ಒಂದು ಝಳಕು, ಕ್ಷಣಿಕ ಕಾಂತಿ. ಇದು ಕೆಲಗಾಲಮಾತ್ರ. ಮೋಕ್ಷದಿಂದಲೇ ಆತ್ಮ - ಪರಮಾತ್ಮರ ಐಕ್ಯ ಸಾಧ್ಯವಲ್ಲದೆ ಜೀವನದಲ್ಲಿ ಸಾಧ್ಯವಿಲ್ಲ.

ಭಕ್ತಿಯನ್ನು ಕೆಲವು ವೇಳೆ ಸಂಗೀತ, ನೃತ್ಯ, ಧೂಪ, ಸುಗಂಧ ಇತ್ಯಾದಿ ಪ್ರೇರಣೆಗಳಿಂದ ಉದ್ರೇಕಿಸಬಹುದು. ಆದರೆ ಯಾರು ಇಂತಹ ಬಾಹ್ಯ ಸಾಧನಗಳಿಂದ ಪರವಶರಾಗುವರೋ ಅವರು ಆ ಪರವಶತೆ ತನ್ನಿಂದ ತಾನೆ ಉಕ್ಕಿ ಇಳಿದ ತಕ್ಷಣ ತುಂಬಾ ಕೆಳಮಟ್ಟಕ್ಕೆ ಬಂದಂತೆ ಅನುಭವ ಪಡೆಯುವರು. ಅತೀಂದ್ರಿಯ ಸ್ಥಿತಿಯಿಂದ ಇಂದ್ರಿಯ ಲಂಪಟತೆಗೆ ಧೊಪ್ಪನೆ ಬಿದ್ದಂತಾದಾಗ ಸುಖವು ಎತ್ತಣದು? ಇದನ್ನು ಬಿಟ್ಟು ನಿರ್ವಿಕಾರವಾದ ದಿವ್ಯ ಕಲೆ ಮತ್ತು ಭೂತ ಮಾನವ ಸೇವೆಯಲ್ಲಿ ನಿರತರಾದಾಗ ನಮ್ಮಲ್ಲಿರುವ ಭಾವವನ್ನು ವ್ಯಕ್ತಗೊಳಿಸುವುದಕ್ಕೆ ಕಲಾತ್ಮಕವಾದ ಆವಿರ್ಭಾವವು ಒಳ್ಳೆಯದಾರಿ.

ವರ್ಡ್ಸ್‌ವರ್ತ್ ಎಂಬ ಇಂಗ್ಲೀಷ್ ಕವಿ ಟಿಂಟರ್ನ್ ಅಬೇ ಪಂಕ್ತಿಗಳು ಎಂಬ ಕವಿತೆಯಲ್ಲಿ ತನ್ನ ದೇಹವು ಜಡವಾಗಿ ಆತ್ಮ ಜಾಗೃತಿಯಾಗಿರುವ ಸ್ಥಿತಿಗೆ ಹೋದಾಗ ಸಕಲ ವಿಶ್ವವೂ ತನ್ನದೆಂದು ಕೊಂಡೆ ಎಂದು ತನಗಾದ ತನ್ಮಯ ಭಾವವನ್ನು ವಿವರಿಸಿದ್ದಾನೆ.

ಭಕ್ತನು ದೇವನಿಗೆ ಹೀಗೆಂದು ಕೋರುತ್ತಾನೆ - 'ಪ್ರಭು! ನನಗೆ ಐಶ್ವರ್ಯ, ಅಧಿಕಾರ, ಕೀರ್ತಿ, ಸ್ನೇಹಸುಖ, ಕಾವ್ಯಕಲೆ, ಸ್ವಾತಂತ್ರ್ಯ ಏನೊಂದೂ ಇರದಿದ್ದರೂ ನಡೆದೀತು. ಆದರೆ ನೀನು ಮಾತ್ರ ನನ್ನಿಂದ ದೂರವಾಗಿರಬೇಡ! ನಾನು ನಿನ್ನಂತೆ ಮಧುರ ಸಕ್ಕರೆಯಾಗಲು ಬಯಸದೆ, ಆ ಸಕ್ಕರೆಯ ರುಚಿ ಮಾತ್ರ ಸವಿಯಲು ಬಯಸುತ್ತೇನೆ'. ಇಂತಹ ಪ್ರಾರ್ಥನೆಗೆ ಫಲವೇ ಭಕ್ತಿಪರವಶತೆ.

ಭಕ್ತನೊಬ್ಬನನ್ನು ಜನರು ತಲೆಗೆಟ್ಟ ಹುಚ್ಚನೆಂದಾಗ ಅವನು ಹೀಗೆಂದನಂತೆ - ಹೌದು, ನನಗೆ ದೇವರನ್ನು ಸಮೀಪಿಸುವ ಹುಚ್ಚು, ನಿಮಗೆಲ್ಲಾ ಒಂದೊಂದು ಬೇರೆ ಹುಚ್ಚು ಇರುವುದನ್ನು ನೋಡಿದಾಗ ಜಗತ್ತು ಹುಚ್ಚರಾಸ್ಪತ್ರೆ. ನಾನು ಮನೋಸ್ಥಿಮಿತದಲ್ಲಿರುವಂತೆ ಮಾತ್ರ ಕಾಣಿಸುತ್ತದೆ ಎಂದನಂತೆ.

ಭಕ್ತಿಯು ಅತಿರೇಕವಾದಲ್ಲಿ ಭಕ್ತರು ತಮ್ಮನ್ನೆಂದೂ ಪತಿತರೆಂದು ತಿಳಿಯುವುದಿಲ್ಲ.



ಏಕೆಂದರೆ ಅವರ ವಿನಯದಲ್ಲೂ ಅವರ ಆತ್ಮವಿಶ್ವಾಸವು ಅವರನ್ನು ತಾವು ಶ್ರೇಷ್ಠರೆಂದೇ ಬಗೆಯುವಂತೆ ಮಾಡುತ್ತದೆ. ಅಂಧಶ್ರದ್ಧೆ, ಭಾವುಕತೆ ಮತ್ತು ಹಿಸ್ಟಿರಿಕ್ ಪ್ರೇಮೋನ್ಮಾದವು ಅವರಲ್ಲಿ ಇರುವುದೇ ಇಲ್ಲ.

ಪುರಂದರದಾಸರಾದಿ ಎಲ್ಲ ಹರಿದಾಸರೂ ದೇವರನ್ನು ತನ್ಮಯ ಭಕ್ತಿಯಿಂದ ಕಂಡಿದ್ದಾರೆ, ತಿಳಿದಿದ್ದಾರೆ. 'ನಿಗಮಾಗೋಚರ ನೀನೆ, ನಿತ್ಯವಂದ್ಯನೂ ನೀನೆ' ಎಂದರೂ 'ಶ್ರೀಕೃಷ್ಣ ಮೂರ್ತಿ ಕಣ್ಣಮುಂದೆ ನಿಂತಿದಂತಿದೆ' ಎಂದು ಸಾರಿದ್ದಾರೆ. ಶಿವಯೋಗಿನಿ ಮಹಾದೇವಿಯಕ್ಕ ಹೇಳುತ್ತಾಳೆ 'ದೇವ ನನ್ನಲ್ಲದೆ ಅನ್ಯಕ್ಕೆ ಎಳಸದು ನನ್ನ ಮನ. ಪರಿಮಳವಿಲ್ಲದ ಪುಷ್ಪಕ್ಕೆ ಎಳಸದು. ಭ್ರಮರ. ಇರುಳು ಹಗಲು ಶಿವನ ತಳಮಳಿಸಿ ಕಂಡು ಮರೆದೊರ ಗಿದೇನಯ್ಯಾ ಅವನೊಲುಮೆ ತೊಟ್ಟು ಹಸಿವು ತೃಷೆ ನಿದ್ರೆಯ ಮರೆದೆನಯ್ಯ! ರಾಮಕೃಷ್ಣ ಪರಮಹಂಸರು ತಮ್ಮ ದೇವಿ ಮಾತೆಯನ್ನು ಧ್ಯಾನಿಸುತ್ತ ದಿನವಿಡೀ ಕಳೆದಾಗ ಅವರಿಗೆ 'ದಕ್ಷಿಣೇಶ್ವರದ ಹುಚ್ಚ' ಎಂಬ ಹೆಸರೇ ಅಂಟಿಕೊಂಡಿತು. ಹೀಗೆಯೇ ಭಕ್ತಿಪರವಶರಾದವರ ಅವಸ್ಥೆಗೆ ಸಾವಿರಾರು ಉದಾಹರಣೆಗಳಿರುತ್ತವೆ. ಮೀರಾ, ತುಲಸೀದಾಸ, ಗೋರಾಕುಂಬಾರ ಇತ್ಯಾದಿ ಇತ್ಯಾದಿ.

ಮಾನವನಿಗಿಂತ ವಿಕಾಸಕ್ರಮದಲ್ಲಿ ಅಲ್ಪವೆನಿಸುವ ಪ್ರಾಣಿಗಳಿಗೆ ಮಾನವನಿಗಿರದ ಕೆಲವು ಸಾಮರ್ಥ್ಯಗಳಿರುತ್ತವೆ. ಅತೀಂದ್ರಿಯ ಶಕ್ತಿಗಳವು. ಒಂದು ನಾಯಿಗೆ ಮನೆಯೊಳಗೆ ರಾತ್ರಿ ಬಿದ್ದ ಸಾಸಿವೆ ಕಾಳಿನ ಶಬ್ದ ಕೇಳಿಸುತ್ತದೆ. ಇರುವೆಗೆ ಮರದ ತುದಿಯ ಎಲೆಯ ಮೇಲೆ ಬಿದ್ದ ಜೇನಿನ ತೊಟ್ಟು ವಾಸನಾಶಕ್ತಿಯಿಂದ ತಿಳಿಯುತ್ತದೆ. ಗಿಡುಗಪಕ್ಷಿಗೆ ಎತ್ತರದಲ್ಲಿ ತಾನು ಆಕಾಶದಲ್ಲಿ ಹಾರುವಾಗಲೂ ನೆಲದಲ್ಲಿ ಸತ್ತು ಬಿದ್ದ ಇಲಿಯು ಕಾಣಿಸುವಂತಹ ದೃಷ್ಟಿ ಶಕ್ತಿಯಿದೆ. ಕುರುಡರಿಗೆ ಸ್ಪರ್ಶಜ್ಞಾನವಿರುತ್ತದೆ. ಹಂಸಪಕ್ಷಿಗೆ ನೀರು ಮತ್ತು ಹಾಲನ್ನು ಪ್ರತ್ಯೇಕಿಸುವ ರಸನಾಶಕ್ತಿಯಿದೆ. ಎಷ್ಟೋ ಪ್ರಾಣಿಗಳಿಗೆ ಮುಂದೆ ಬರುವ ಮಳೆ ಭೂಕಂಪ ಎಲ್ಲವೂ ಅಲ್ಪಕಾಲದಲ್ಲಿ ತಿಳಿಯುತ್ತದಂತೆ. ಆದರೆ ಶ್ರೇಷ್ಠನಾದ ಮಾನವನಿಗೆ ವಿಚಾರಶಕ್ತಿ ಮಾತ್ರವಿದೆ. ಆದರೆ ಅದು ಎಷ್ಟಕ್ಕೂ ಸಾಲದು. ಸಂಶೋಧನಾ ದೃಷ್ಟಿಯಿಂದ ಯಂತ್ರೋಪಯೋಗಿತ ಕಂಡರೂ ಸಾಲದು. ಭಕ್ತಿ ಪರವಶನಾಗಿ ತನ್ಮಯನಾಗುವ ಶಕ್ತಿಯೊಂದಿದ್ದರೆ ಸಾಕು. ಅದರಿಂದ ವ್ಯಕ್ತಿ ಅತ್ಯದ್ಭುತವನ್ನು ಸಾಧಿಸಬಹುದು. ದೇವಸಾನ್ನಿಧ್ಯಕ್ಕಿಂತ ಮಿಗಿಲಾದುದು ಇನ್ನೊಂದು ಉಂಟೇ? ಹಾಗಾದಾಗ ಎಲ್ಲವನ್ನೂ ಅನುಭವಿಸಿದಂತೆಯೇ.

**ಸುಗುಣಮಾಲಾ ಅಭಿಮಾನಿ ಗ್ರಾಹಕರಲ್ಲಿ ವಿನಂತಿ.**

**ನಮ್ಮೊಡನೆ ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬ್ರ ಸೂಚಿಸಿಯೇ ವ್ಯವಹರಿಸಬೇಕಾಗಿ ಅಪೇಕ್ಷೆ. ಎಂ. ಓ. ಕಳುಹಿಸುವಾಗ ಎಂ.ಓ. ಸಂದೇಶ ಕೂಪನ್‌ನಲ್ಲಿ ನಿಮ್ಮ ವಿಳಾಸವನ್ನು ಕಡ್ಡಾಯವಾಗಿ ಬರೆದು ತಿಳಿಸಿ ಸಹಕರಿಸಿರಿ.**

**-ಸಂಚಾಲಕ**



# ಪರಮಾತ್ಮನಿಗೆ ಪ್ರಿಯನಾರು?

**ನಿಡುವಜೆ ರಾಮ ಭಟ್**



**ಅನನ್ಯಾಶ್ಚಿಂತಯಂತೋ ಮಾಂ ಯೇ**
**ಜನಾಃ ಪರ್ಯುಪಾಸತೇ ।**
**ತೇಷಾಂ ನಿತ್ಯಾಭಿಯುಕ್ತಾನಾಂ**
**ಯೋಗಕ್ಷೇಮಂ ವಹಾಮ್ಯಹಮ್ ॥**

"ಯಾರು ಅನನ್ಯ ಭಕ್ತಿಯಿಂದ ನನ್ನನ್ನೇ ನೆನೆಯುತ್ತಾ ನನ್ನ ಗುಣದ ಗರಿಮೆಯನ್ನು ಉಪಾಸನೆ ಮಾಡುವರೋ ಎಲ್ಲ ಬಗೆಯಿಂದಲೂ ನನ್ನನ್ನೇ ನಂಬಿರುವ ಅವರ ಯೋಗಕ್ಷೇಮದ ಹೊಣೆಯನ್ನು ನಾನು ಹೊರುತ್ತೇನೆ". ಇದು ಭಗವದ್ಗೀತೆಯಲ್ಲಿ ಭಗವಾನ್ ಶ್ರೀಕೃಷ್ಣ ನೀಡಿದ ಆಶ್ವಾಸನೆ.

'ಸಂಕಟ ಬಂದಾಗ ವೆಂಕಟರಮಣ' ಎಂಬಂತೆ ನಮಗೆಲ್ಲ ಭಗವಂತನ ನೆನಪಾಗುವುದು ಕಷ್ಟ ಬಂದಾಗಲೇ. ಅದಕ್ಕಾಗಿಯೇ ಮಹಾಮಾತೆ ಕುಂತೀದೇವಿ 'ನನಗೆ ಸದಾ ಕಷ್ಟವನ್ನೇ ಕೊಡುತ್ತಿರು ಪರಮಾತ್ಮ' ಎಂದು ಶ್ರೀಕೃಷ್ಣನಲ್ಲಿ ಬೇಡಿಕೊಂಡಳು. ರೋಗ ಬಂದ ಮೇಲೆ ವೈದ್ಯನನ್ನು ಕಾಣುವ ಬದಲು ರೋಗ ಬರದಂತೆ ಮುಂಜಾಗ್ರತೆ ವಹಿಸುವುದೇ ಜಾಣತನ ಎಂಬ ಮಾತಿದೆ. ಅದೇ ರೀತಿ ಸಂಕಟ ಬಂದಾಗಲಷ್ಟೇ ಪರಮಾತ್ಮನ ಮೊರೆ ಹೋಗುವುದಕ್ಕಿಂತಲೂ ಸದಾ ಪರಮಾತ್ಮನ ಚಿಂತನೆಯಲ್ಲೇ ಇರುವುದು ಒಳಿತಲ್ಲವೇ?

ಭಗವದ್ಗೀತೆಯು 18 ಅಧ್ಯಾಯಗಳಲ್ಲಿ ಸುವರ್ಣಾಕ್ಷರಗಳಿಂದ ಕೂಡಿದೆ ಎಂದು ವರ್ಣಿಸಬಹುದು. ಭಗವಂತನ ಈ ನಲ್ನುಡಿಯು ಸರ್ವಮಾನ್ಯವಾದುದು. ಕುರುಕ್ಷೇತ್ರ ಯುದ್ಧದಲ್ಲಿ ಅರ್ಜುನನನ್ನು ನೆಪವಾಗಿಟ್ಟುಕೊಂಡು ಬೋಧಿಸಿದ ಗೀತೆ ಸರ್ವರಿಗೂ ಪರಮಾತ್ಮನ ಪರಮ ಸಂದೇಶವಾಗಿದೆ. ಅರ್ಜುನ ಅನೇಕ ಸಂದೇಹಗಳನ್ನು ಭಗವಂತನ ಮುಂದಿಟ್ಟ. ಆ ಸಂದೇಹಗಳನ್ನು ಪರಿಹರಿಸುವಲ್ಲಿ ಇರುವ 'ಸಂದೇಶ'ಗಳು ಯಾವುದೇ ಜಾತಿ - ಮತ ಭೇದವಿಲ್ಲದೆ ವಿಶ್ವಮಾನ್ಯವೆನಿಸಿವೆ. ಅರ್ಜುನನು ಶ್ರೀಕೃಷ್ಣನಲ್ಲಿ ಭಕ್ತಿ ಮತ್ತು ಕರ್ಮ ಮುಖೇನ ನಿನ್ನನ್ನು ಪೂಜಿಸುವವರು ಉತ್ತಮರೋ, ಇಲ್ಲಾ ಅವ್ಯಕ್ತವಾದ ಸತ್ಯವನ್ನೇ ಧ್ಯಾನಿಸುತ್ತಾ ತಪಸ್ಸು ಮಾಡುವವರು ಉತ್ತಮರೋ ಎಂದು ಪ್ರಶ್ನಿಸುತ್ತಾನೆ. ಅದಕ್ಕೆ ಶ್ರೀಕೃಷ್ಣನು ಮನಸ್ಸನ್ನು ತನ್ನಲ್ಲೇ ಸಂಪೂರ್ಣವಾಗಿ ಕೇಂದ್ರೀಕರಿಸಿ ಅನನ್ಯವಾದ ಶ್ರದ್ಧಾಭಕ್ತಿಗಳಿಂದ ತನ್ನನ್ನು ಪೂಜಿಸುವವರೇ

**'ಪ್ರಶಾಂತಿ ನಿಲಯ', ಗುಂಡಿಬೈಲು, ಉಡುಪಿ – 576 102. ಫೋನ್ : 2535907**



ಶ್ರೇಷ್ಠರೆಂದು ಉತ್ತರಿಸುತ್ತಾನೆ.

ಪುರುಷೋತ್ತಮನಿಗೆ ಪ್ರಿಯನಾರು? ಎಂಬ ಅರ್ಜುನನ ಪ್ರಶ್ನೆಗೆ ಶ್ರೀಕೃಷ್ಣ ಉತ್ತರಿಸುತ್ತಾ 'ಯಾರು ಎಲ್ಲ ಜೀವಿಗಳಿಗೆ ಸ್ನೇಹಿತನೋ, ನಿರಹಂಕಾರಿಯೋ, ಸುಖದುಃಖಗಳಲ್ಲಿ ಸಮಚಿತ್ತನೋ, ಕ್ಷಮಾಶೀಲನೋ, ಸದಾ ತೃಪ್ತನೋ, ಸಂತುಷ್ಟನೋ, ಆತ್ಮ ಸಂಯಮಿಯೋ, ದೃಢಚಿತ್ತದಿಂದ ಭಕ್ತಿ ಸೇವೆಯಲ್ಲಿ ನಿರತನೋ, ತನ್ನ ಮನಸ್ಸನ್ನು ಬುದ್ಧಿಯನ್ನೂ ನನ್ನಲ್ಲಿ ನಿಲ್ಲಿಸಿರುವನೋ ಅಂತಹ ಭಕ್ತನು ನನಗೆ ಬಹಳ ಪ್ರಿಯನು' ಎನ್ನುತ್ತಾನೆ.

'ಯಾರು ಲಾಭದಿಂದ ಹರ್ಷಿಸುವುದಿಲ್ಲವೋ, ನಷ್ಟದಿಂದ ದುಃಖಿಸುವುದಿಲ್ಲವೋ ಅಂತಹವನು ನನಗೆ ಪ್ರಿಯನು' ಎನ್ನುತ್ತಾನೆ ಭಗವಂತ. ಇಲ್ಲಿ ಒಬ್ಬ ವೃತ್ತಿಯಿಂದ ವ್ಯಾಪಾರವನ್ನು ಕೈಗೊಂಡವನಿಗೆ ಹಿತನುಡಿಗಳಿರುವುದನ್ನು ಗಮನಿಸಬಹುದು. ಸಾಮಾನ್ಯವಾಗಿ ಲಾಭ ಬಂದಾಗ ಸಂತಸ ಪಡುವುದೂ, ನಷ್ಟವಾದಾಗ ದುಃಖ ಪಡುವುದು ಸರ್ವೇಸಾಮಾನ್ಯವಾಗಿದೆ. ಲಾಭ ಬಂದಾಗಲೂ ಭಗವಂತನಿಚ್ಛೆ, ನಷ್ಟ ಬಂದಾಗಲೂ ಆತನಿಚ್ಛೆ ಎಂದುಕೊಂಡು ಸಮಾಧಾನಪಟ್ಟುಕೊಳ್ಳಬೇಕೇ ಹೊರತು ತಲೆಮೇಲೆ ಕೈಹೊತ್ತು ಕುಳಿತರೆ ಪ್ರಯೋಜನವಿಲ್ಲ. ಬದಲಾಗಿ ನಿನ್ನೆ ಲಾಭವಾಗಿದೆ, ನಾಳೆ ಲಾಭವಾಗಬಹುದು, ಇಂದಿನ ನಷ್ಟಕ್ಕಾಗಿ ಸಂಕಟಪಡುವುದರಲ್ಲಿ ಅರ್ಥವಿಲ್ಲ 'ಎಲ್ಲ ಭಗವಂತನಿಗೇ ಅರ್ಪಿತ' ಎಂದು ಭಾವಿಸುವುದರಿಂದ ಮನಸ್ಸು ತಳಮಳಗೊಳ್ಳುವುದಿಲ್ಲ.

ಕೃಷ್ಣನು ಅರ್ಜುನನಿಗೆ 'ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ' ಎಂದಿದ್ದಾನೆ. ಅರ್ಥಾತ್ ಸುಖ-ದುಃಖಗಗಳನ್ನು, ಗಳಿಕೆ - ಇಳಿಕೆಗಳನ್ನು, ಗೆಲುವು - ಸೋಲುಗಳನ್ನು ಒಂದೇ ನಿಟ್ಟಿನಿಂದ ಕಂಡುಕೊ ಎಂಬ ಸಮಾಧಾನದ ಬುದ್ಧಿಮಾತನ್ನು ಹೇಳಿರುವುದು ನಮಗೆಲ್ಲರಿಗೂ ಅನ್ವಯಿಸುತ್ತದೆ.

ಅರ್ಜುನನ ಪ್ರಶ್ನೆಗೆ ಕೃಷ್ಣನು ಉತ್ತರಿಸುತ್ತಾ, 'ಯಾವಾತನು ತನ್ನ ಮನಸ್ಸನ್ನು ನನ್ನಲ್ಲೇ ಕೇಂದ್ರೀಕರಿಸುತ್ತಾನೋ ಮತ್ತು ಶ್ರದ್ಧಾಭಕ್ತಿಗಳಿಂದ ನನ್ನನ್ನು ಪೂಜಿಸುತ್ತಾನೋ ಅವನೇ ಅತ್ಯಂತ ಪರಿಪೂರ್ಣನು' ಎಂದಿದ್ದಾನೆ. ಇಂತಹ ಪ್ರಜ್ಞೆ ಉಳ್ಳವರು ತನ್ನ ಕಾರ್ಯಗಳನ್ನು ಭಗವಂತನ ಸೇವೆ ಎಂದು ಭಾವಿಸುತ್ತಾರೆ. ನಾವು ನಮ್ಮ ದಿನನಿತ್ಯದ ಕರ್ತವ್ಯದಲ್ಲಿ ತೊಡಗಿದ್ದಾಗಲೂ ಪ್ರತಿಯೊಂದು ಕ್ಷಣವೂ, ಪ್ರತಿ ಕೆಲಸದಲ್ಲೂ ಕೃಷ್ಣಪ್ರಜ್ಞೆಯನ್ನು ಇಟ್ಟುಕೊಂಡಾಗ ಅಲ್ಲಿ ಯಾವುದೇ ಉದಾಸೀನತೆ, ಮೋಸ - ವಂಚನೆಗಳಿಗೆ ಅವಕಾಶವಿರುವುದಿಲ್ಲ. ಭಗವಂತನಿಗಾಗಿ ಕೆಲಸ ಮಾಡುತ್ತೇನೆ, ಇದು ಅವನ ಸೇವೆ ಎಂದು ಭಾವಿಸಿದಾಗ ತಪ್ಪುಗಳು ಆಗುವುದಿಲ್ಲ. ತಪ್ಪು ಮಾಡಿದಲ್ಲಿ ಆ ಪರಮಾತ್ಮ ನೋಡುತ್ತಾನೆ ಎಂಬ ಭಾವನೆ ಮೂಡುತ್ತದೆ. ಅಲ್ಲದೆ ಆತನ ಪ್ರಜ್ಞೆಯಲ್ಲಿರುವಾತನಿಗೆ ತಪ್ಪು ಮಾಡುವ ಯೋಚನೆಗಳೇ ಮೂಡುವುದಿಲ್ಲ. ಈ ಬೋಧನೆಯನ್ನು ಮನನ ಮಾಡಿಕೊಂಡಾಗ ನಮ್ಮ ಯಾವತ್ತೂ ಕಾರ್ಯದಲ್ಲಿ ಯಶಸ್ಸನ್ನು ಗಳಿಸಲು ಸಾಧ್ಯವಾಗುತ್ತದೆ. ಭಗವಂತನ ನೆಪದಲ್ಲೇ ಮಾಡುವ ಕಾರ್ಯಗಳು ಅವನ ಸೇವೆ ಎನಿಸುತ್ತವೆ. ಅಂತಹ ವ್ಯಕ್ತಿ ಕೃಷ್ಣನಿಗೆ ಪ್ರಿಯನು.

ಅದೇ ರೀತಿ ನಮ್ಮ ವೃತ್ತಿಯಿಂದ ಸಿಗುವ ಪ್ರತಿಫಲದ ಬಗ್ಗೆಯೂ ಗೀತೆಯಲ್ಲಿ ಹೇಳುವಂತೆ ದುಡಿಮೆಯಿಂದ ಸಿಗುವ ಹಣ (ಸಂಪಾದನೆ)ವೇ ಪ್ರಾಮುಖ್ಯವಲ್ಲ. ಕರ್ತವ್ಯದಲ್ಲಿ ಪ್ರಾಮಾಣಿಕತೆ, ಶ್ರದ್ಧೆ ಇರಬೇಕು. ಆ ಮೂಲಕ ಸಿಗುವ ಸಂಪಾದನೆಯಲ್ಲಿ ತೃಪ್ತಿ ಹೊಂದಬೇಕು.

ಅಂತೆಯೇ ಮಾನ - ಅಪಮಾನ, ಕೀರ್ತಿ - ಅಪಕೀರ್ತಿ, ಮಿತ್ರ - ಶತ್ರು, ಶೀತ - ಉಷ್ಣಗಳಲ್ಲಿ ಸಮಚಿತ್ತನಾಗಿರುವವನ ಬಗ್ಗೆ ಹೇಳಲಾಗಿದೆ. ಭಕ್ತನು ಯಾವಾಗಲೂ ಕೆಟ್ಟವರ ಸಹವಾಸದಿಂದ ದೂರವಿರುತ್ತಾನೆ. ಕೆಲವೊಮ್ಮೆ ಜನ ನಮ್ಮನ್ನು ಮೆಚ್ಚಿ ಹೊಗಳುತ್ತಾರೆ. ಇನ್ನು ಕೆಲವೊಮ್ಮೆ ತೆಗಳುತ್ತಾರೆ. ಆದರೆ ಸದಾ ಕೃಷ್ಣ ಪ್ರಜ್ಞೆ ಇರುವಾತ ಇದರ ಬಗ್ಗೆ ಚಿಂತಿಸುವುದಿಲ್ಲ. ಎಲ್ಲವೂ ಆತನಿಚ್ಛೆ, ಅವನಿಗೇ ಅರ್ಪಿತ ಎಂದುಕೊಂಡು ಮೌನವಾಗಿದ್ದಲ್ಲಿ ಮಾನಸಿಕ ತಳಮಳಕ್ಕೆ ಅವಕಾಶವಿರುವುದಿಲ್ಲ. ಇಲ್ಲವಾದರೆ ಮಿತ್ರನ ಬಗ್ಗೆ ಪ್ರೀತಿಯೂ, ಶತ್ರುವಿನ ಬಗ್ಗೆ ಸದಾ ಸೇಡಿನ ಮನೋಭಾವವೂ ತುಂಬಿರುತ್ತದೆ. ಅಪಮಾನವಾದಾಗ ತೀವ್ರವಾಗಿ ಕಳೆಗುಂದುತ್ತಾನೆ. ಪ್ರತಿಯೊಂದು ಸೋಲಿನ ಸಂದರ್ಭಗಳಲ್ಲಿ ಅಧೀರನಾಗುತ್ತಾನೆ. ಆದರೆ ಅವೆಲ್ಲವುಗಳಿಗೆ ಹೊರತಾಗಿ ಎರಡೂ ಪರ-ವಿರೋಧ ಸನ್ನಿವೇಶಗಳಲ್ಲಿ ಸಮಭಾವದಿಂದಿರುವಾತ ಗೆಲುವನ್ನು ಕಾಣುತ್ತಾನೆ. ಇಂತಹ ಭಕ್ತನು ನನಗೆ ಪ್ರಿಯನು ಎನ್ನುತ್ತಾನೆ ಭಗವಂತ.

ಹೀಗೆ "ಯಾರು ಈ ಭಕ್ತಿ ಸೇವೆಯ ಅಮೃತ ಮಾರ್ಗವನ್ನು ಹಿಡಿದು ಶ್ರದ್ಧೆಯಿಂದ ನನ್ನನ್ನೇ ಪರಮ ಗುರಿಯನ್ನಾಗಿ ಮಾಡಿಕೊಳ್ಳುವರೋ ಅವರು ನನಗೆ ಬಹಳ ಪ್ರಿಯರು" ಎಂದ ಶ್ರೀಕೃಷ್ಣ "ನಹಿ ಕಲ್ಯಾಣಕೃತ್ ಕಶ್ಚಿದ್ ದುರ್ಗತಿಂ ತಾತ ಗಚ್ಛತಿ" ಎಂದಿದ್ದಾನೆ. ಅರ್ಥಾತ್ "ಒಳಿತನ್ನು ಮಾಡುವವನು ಎಂದೂ ಕೇಡನ್ನು ಪಡೆಯುವುದಿಲ್ಲ" ಎಂಬ ಭರವಸೆಯನ್ನು ನೀಡಿದ್ದಾನೆ. ಈ ನಿಟ್ಟಿನಲ್ಲಿ ಸದಾ ಇತರರಿಗೆ ಒಳ್ಳೆಯದನ್ನು ಮಾಡುವಾತ, ಒಳ್ಳೆಯದನ್ನು ಬಯಸುವಾತ ತಾನೂ ಒಳ್ಳೆಯದನ್ನೇ ಹೊಂದುತ್ತಾನೆ.

ಭಗವಂತನ ಪೂಜೆಗೂ ಇಂಥದೇ ಆಗಬೇಕೆಂಬ ನಿಯಮವಿಲ್ಲ. ಅದನ್ನೇ "ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ" ಎಂದಿದ್ದಾನೆ. 'ಯಾರು ಎಲೆಯನ್ನೋ, ಹೂವನ್ನೋ ಹಣ್ಣನ್ನೋ, ನೀರನ್ನೋ ಭಕ್ತಿಯಿಂದ ನನಗೆ ನೀಡುತ್ತಾರೋ, ಆ ಭಕ್ತಿಯ ಕೊಡುಗೆಯನ್ನು ನಾನು ಪ್ರೀತಿಯಿಂದ ಸ್ವೀಕರಿಸುತ್ತೇನೆ' ಎನ್ನುವ ಶ್ರೀಕೃಷ್ಣ ಪರಮಾತ್ಮನಿಗೆ ಭಕ್ತಿಯೇ ಅನನ್ಯ ಕೊಡುಗೆ ಹೊರತು, ಅನ್ಯ ವಸ್ತುಗಳು ಶೂನ್ಯವೆನಿಸುತ್ತವೆ. ನಿಷ್ಕಲ್ಮಶ ಮನಸ್ಸಿನ ಅನನ್ಯ ಶ್ರದ್ಧಾ, ಭಕ್ತಿಯ ಪೂಜೆಯಿಂದ ಭಗವಂತ ತೃಪ್ತನಾಗುತ್ತಾನೆ. ಅಂತಹ ಭಕ್ತನೇ ಪರಮ ಪುರುಷೋತ್ತಮನಿಗೆ ಪ್ರಿಯನು. ಇದೇ ಗೀತೆಯ ಸಂದೇಶ.


-: ಶುಭಾಶಯಗಳೊಂದಿಗೆ :-

| ಸದಾನಂದ ಶೇಟ್ ಜುವೆಲ್ಲರ್ಸ್ | ನ್ಯೂ ಸದಾನಂದ ಶೇಟ್ ಜುವೆಲ್ಲರ್ಸ್ |
| --- | --- |
| ಬಡಗುಪೇಟೆ, ಉಡುಪಿ - 576 101. | ಎಸ್.ಎಂ.ಎಸ್.ಪಿ. ಕಾಂಪ್ಲೆಕ್ಸ್, ಉಡುಪಿ. |
| ಫೋನ್: 2522667; 2522668 | ಫೋನ್ : 2522866 |

# ಸುಗುಣಾಂತರಂಗ

ಸಂಪುಟ : 19 ಧನುರ್ಮಾಸ ಸಂಚಿಕೆ : 12 ಡಿಸೆಂಬರ್ 2004

## ಸುಗುಣ ಬಳಗ

**ಸಂಸ್ಥಾಪಕರು :**
ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು
**ನಿರ್ದೇಶಕ** : ಬನ್ನಂಜೆ ಗೋವಿಂದಾಚಾರ್ಯ
**ಸಂಪಾದಕ** : ಎಂ. ರಾಧಾಕೃಷ್ಣರಾವ್
**ಪ್ರಕಾಶಕ** : ಪ್ರಸನ್ನಾಚಾರ್ಯ
**ಮುದ್ರಕ** : ಬಿ.ಜಿ. ಸುಬ್ಬರಾವ್
**ಸಲಹಾ ಮಂಡಳಿ**
ಬನ್ನಂಜೆ ರಾಮಾಚಾರ್ಯ
ಮಳಗಿ ಜಯತೀರ್ಥಾಚಾರ್ಯ
ಡಾ। ಯು. ಪಿ. ಉಪಾಧ್ಯಾಯ
ಬಿಂದು ಮಾಧವಾಚಾರ್ಯ ನಾಗಸಂಪಿಗೆ
ಸಗ್ರಿ ರಾಘವೇಂದ್ರ ಉಪಾಧ್ಯಾಯ
ಡಾ। ಎನ್. ವೆಂಕಟೇಶ ರಾವ್
ಚಿಪ್ಪಗಿರಿ ನಾಗೇಂದ್ರಾಚಾರ್ಯ
ಗಂಜೀಫಾ ರಘುಪತಿ ಭಟ್
ಕಡೆಕಾರು ಶ್ರೀಶ ಭಟ್
ಉಡುಪಿ ರಾಮನಾಥಾಚಾರ್ಯ
ಬಿ. ಜಿ. ರವಿಕುಮಾರ್

**ಸಂಪರ್ಕವಿಳಾಸ :**
ಸಂಚಾಲಕ, ಸುಗುಣಮಾಲಾ ಮಾಸಪತ್ರಿಕೆ
ರಥಬೀದಿ, ಉಡುಪಿ - 576 101, ಉಡುಪಿ ಜಿಲ್ಲೆ, ಕರ್ನಾಟಕ
ದೂರವಾಣಿ : **(0820) 2522222, 2531047**
Tel Fax : 0820-2521272
E-Mail:mprasannaacharya@yahoo.com
Website:http://WWW.shreeputhige.org

**ಚಂದಾವಿವರ**
**ವಾರ್ಷಿಕ : ರೂ. 80/-   15 ವರ್ಷ ರೂ. 1000/-**
**ಜಾಹೀರಾತು ವಿವರ :**
ಅರ್ಧ ಪುಟಕ್ಕೆ ರೂ. **750/-**  ಒಂದು ಪುಟಕ್ಕೆ ರೂ. **1500/-**

**ಮುಖಪುಟ ಲೇಖನ** 4
ಗೋವತ್ಸ

**ಮರ್ಮಮೀಮಾಂಸೆ** 5
ಸುಶ್ರೀ

**ಶ್ರೀ ಸುಧಾ ಸುವಚನ** ಲೇಖಾಂಕ - 33 41
ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು.

**ಪರಮಾತ್ಮನಿಗೆ ಪ್ರಿಯನಾರು?** 14
ನಿಡುವಜೆ ರಾಮಭಟ್

**ಅನಿತ್ಯ ಫಲ** 17
ಮ. ಗೋ. ಹೆಗಡೆ

**ಇಂದುಮತಿಯ ಸ್ವಯಂವರ** 21
ಡಾ। ಎನ್. ಕೆ. ಉದಯಶಂಕರ್

**ಮರಣ ಒಂದು ಜಿಜ್ಞಾಸೆ – ೩** 25
ಎಸ್. ಪಿ. ಶ್ರೀನಿವಾಸ ಭಟ್ಟಜಿ

**ಧರ್ಮದ ಎರಡು ಮುಖಗಳು** 31
ಸಗ್ರಿ ರಾಘವೇಂದ್ರ ಉಪಾಧ್ಯಾಯ

**ಭಕ್ತಿ ಪರವಶತೆ** 33
ವಾಸುದೇವ ಕಾಣೆಮಾರ್

**ಅಹಂಕಾರಿ ಇಂಜಿನಿಯರನ ಕತೆ** 37
ಡಾ। ಜೀವಿ ಕುಲಕರ್ಣಿ

**ಇನ್ನಿತರ ಲೇಖನಗಳು ಒಳಪುಟಗಳಲ್ಲಿ**

## 2005 ಜನವರಿ ತಿಂಗಳ ವಿಶೇಷಗಳು

1 2005ನೇ ಇಸವಿ ಆರಂಭ
6 ಸ್ಮಾರ್ತೈಕಾದಶೀ
7 ವೈಷ್ಣವ ಏಕಾದಶಿ
8 ಉಡುಪಿ ಸಪ್ತೋತ್ಸವಾರಂಭ
10 ಸೋಮವತೀ ಅಮಾವಾಸ್ಯ ಎಳ್ಳಮಾವಾಸ್ಯೆ
13 ಮಕರ ಸಂಕ್ರಮಣಃ, ಉಡುಪಿ ಮೂರು ರಥೋತ್ಸವ
14 ಉಡುಪಿ ಚೂರ್ಣೋತ್ಸವಃ
18 ಸೌರ ಮಧ್ವನವಮಿ
20 ಸರ್ವೈಕಾದಶಿ
21 ವೈಷ್ಣವಾನಾಂ ಅತಿರಿಕ್ತೋಪವಾಸ
25 ಪೂರ್ಣಿಮಾ
27 ಕೊಡವೂರು ಶಂಕರನಾರಾಯಣ ರಥ
29 ಸಂಕಷ್ಟ ಚತುರ್ಥಿ ಚಂ. ಉ. ಘಂ. 9–47

# ಅಹಂಕಾರಿ ಇಂಜಿನಿಯರನ ಕತೆ

ಡಾ। ಜೀವಿ ಕುಲಕರ್ಣಿ

ಐ. ಐ. ಟಿ. ಕಾನ್ಪುರದಿಂದ ರ್‍ಯಾಂಕ್ ಪಡೆದ ಇಂಜಿಯರಿಂಗ್ ಮಿಶ್ರಾ ತನ್ನ ಜೀವನದಲ್ಲಿ ವಿಫಲತೆಯ ಅನುಭವ ಪಡೆಯತೊಡಗಿದ. ನಾಲ್ಕು ವರ್ಷಗಳಲ್ಲಿ ಎಂಟು ಕಂಪೆನಿ ಬದಲು ಮಾಡಿದ್ದ. ಅವನ ಬಯೋ-ಡೇಟಾ ನೋಡಿ, ಅವನ ಬುದ್ಧಿವಂತಿಕೆ ಅರಿತು, ಯಾವುದೇ ಕಂಪೆನಿ ಅವನಿಗೆ ಕೆಲಸ ಕೊಡಲು ಮುಂದೆ ಬರುತ್ತಿತ್ತು. ಅನಂತರ ಅವನು ತನ್ನ ಮೇಲಧಿಕಾರಿಗಳಲ್ಲಿ ತಪ್ಪು ಕಂಡು ಹಿಡಿಯಲು ಪ್ರಾರಂಭಿಸುತ್ತಿದ್ದ. ತನ್ನ ಇತರ ಸಹೋದ್ಯೋಗಿಗಳ ತಪ್ಪು ಹುಡುಕಿ ಜಗಳವಾಡುತ್ತಿದ್ದ. ನೌಕರಿ ಮುಂದುವರಿಸುವುದು ಅಸಾಧ್ಯವಾದಾಗ ಮಿತ್ರರಿಗಿಂತ ವೈರಿಗಳೇ ಹೆಚ್ಚಾದಾಗ ಮತ್ತೊಂದು ಕೆಲಸ ಹುಡುಕುತ್ತಿದ್ದ.

ಅವನು ಒಮ್ಮೆ ಗುರೂಜಿ ಬಳಿ ಬಂದ. ತನ್ನ ಜಾತಕ ತೋರಿಸಿದ. ಅವರು ಅವನ ಬಗ್ಗೆ ಎಲ್ಲ ಸಂಗತಿ ಸರಿ ಹೇಳಿದರು. ಅವನ ಬುದ್ಧಿ ಮತ್ತೆ, ಕಾರ್ಯತತ್ಪರತೆ, ಬ್ರಿಲಿಯಂಟ್ ಅಕ್ಯಾಡೆಮಿಕ್ ರೆಕಾರ್ಡ್, ಪಡೆದ ಗೋಲ್ಡ್ ಮೆಡಲ್ ಬಗ್ಗೆ ಹೇಳಿದಾಗ ಅವನಿಗೆ ಅಚ್ಚರಿಯಾಯ್ತು. ಸಂತೋಷವಾಯ್ತು. ಅವನ ಜಾತಕದ ಪ್ರಕಾರ ಅವನು ಹಟಮಾರಿಯಾಗಿದ್ದ. ಗರ್ವಿಷ್ಟನೂ ಆಗಿದ್ದ. ಗುರೂಜಿ ಹೇಳಿದರು, “ನೀನು ನಾಲ್ಕು ವರ್ಷದಲ್ಲಿ 8 ಕಂಪೆನಿ ಬದಲಾಯಿಸಿರುವಿ”. ಅವನು ‘ಹಾಂ’ ಎಂದು ಒಪ್ಪಿದ. “ಪ್ರಾರಂಭದಲ್ಲಿ ನಿನಗೆ ಕಂಪೆನಿ ಚೆನ್ನಾಗಿದೆ ಎನಿಸುತ್ತದೆ. ನಿನಗೆ ನಂತರ ಅಲ್ಲಿಯ ದೋಷಗಳು ಕಾಣುತ್ತವೆ. ನಿನ್ನ ಬಾಸ್‌ನ ದೋಷ ಅವನ ಮುಖದ ಮೇಲೆ ಹೇಳುವೆ. ಸಹ ಕಾರ್ಯಕರ್ತರ ದೋಷ ತೋರಿಸಿ ಅನೇಕ ವೈರಿಗಳನ್ನು ನಿರ್ಮಿಸುವೆ. ಅಲ್ಲಿ ಕೆಲಸ ಮಾಡುವುದು ದುಸ್ಸಹವಾದಾಗ ಮತ್ತೊಂದು ನೌಕರಿ ನೋಡುವೆ. ಈಗ ನಿನ್ನ ಬಗ್ಗೆ ನಿನಗೇ ಬೇಸರವಾಗಿದೆ. ಅದಕ್ಕೆ ಮಾರ್ಗದರ್ಶನ ಪಡೆಯಲು ಇಲ್ಲಿ ಬಂದಿರುವೆ”.

ನಂತರ ಮಿಶ್ರಾ, “ನನಗೆ ಸ್ಥಾಯಿ ಕೆಲಸವಿಲ್ಲವೆ? ನನಗೆ ಕೆಲಸದಲ್ಲಿ ಮುಂಬಡ್ತಿ ಇಲ್ಲವೇ?” ಆಗ ಗುರೂಜಿ ಹೇಳಿದರು, “ಇದೆ. ನಿನಗೆ ಕೆಲಸದಲ್ಲಿ ಬಡ್ತಿ ಇದೆ. ಪ್ರಗತಿ ಇದೆ. ಆದರೆ ನಾನು ಹೇಳಿದ್ದನ್ನು ನೀನು ಮಾಡಬೇಕು”. ಆಗ ಮಿಶ್ರಾ ಹೇಳಿದ, “ನಾನು ಪೂಜಾ ಪಾಠ ಮಾಡುತ್ತೇನೆ. ‘ಹನುಮಾನ್ ಚಾಲಿಸ್’ ಓದುತ್ತೇನೆ. ಮತ್ತೇನಾದರೂ ಮಾಡುವುದಿದ್ದರೆ ಹೇಳಿ. ಹೋಮ, ಹವನ ಮಾಡಿಸಬೇಕೇ? ನವಗ್ರಹದ ಹರಳಿನ ಉಂಗುರ ಹಾಕಬೇಕೇ?”. ಆಗ ಗುರೂಜಿ ಹೇಳಿದರು. “ನಿನ್ನ ವಿಷಯದಲ್ಲಿ ಹೇಳುವುದಾದರೆ ಹೋಮ - ಹವನದಿಂದ ಏನೂ ಆಗುವುದಿಲ್ಲ. ಉಂಗುರ ಹಾಕಿದರೆ ಏನು ಪ್ರಯೋಜನ? ನಿಮ್ಮಿಂದ ದುಡ್ಡ ಪಡೆಯಲು ಕೆಲವು ಸ್ವಾರ್ಥಿಗಳು ಹಾಗೆಲ್ಲ ಹೇಳುತ್ತಾರೆ”. ಆಗ ಮಿಶ್ರಾ ಅಂದ, “ನಾನೇನು ಮಾಡಲಿ ಹೇಳಿರಿ. ನಾನು ಅನೇಕ ಜ್ಯೋತಿಷಿಗಳನ್ನು, ಮಾಂತ್ರಿಕರನ್ನು ಕಂಡಿರುವೆ. ಆದರೆ ಅತೀತದ ಬಗ್ಗೆ ನಿಮ್ಮಷ್ಟು

8-A/15, ಜವಾಹರ್ ಸೊಸೈಟಿ, ಗೋವಿಂದ ನಗರ, ಬೋರಿವ್ಲಿ (ಪಶ್ಚಿಮ) ಮುಂಬೈ – 400 092



ನಿಖರವಾಗಿ, ಸ್ಪಷ್ಟವಾಗಿ ಯಾರೂ ಹೇಳಿರಲಿಲ್ಲ. ನೀವು ಹೇಳಿದ್ದು ನಾನು ಮಾಡುವೆ”

ನಂತರ ಗುರೂಜಿ ಹೇಳಿದರು. “ನಾನು ಹೇಳುವುದು ಬಹಳ ಸರಳವಾದ ಪೂಜೆ. ಅರ್ಧ ನಿಮಿಷ ಕೂಡ ಬೇಕಾಗುವುದಿಲ್ಲ. ಆದರೆ ನೀನು ನನಗೆ ಮರು ಪ್ರಶ್ನೆ ಕೇಳಬಾರದು. ನಾನು ಹೇಳಿದ್ದನ್ನು ತಪ್ಪದೇ ಪರಿಪಾಲಿಸುವುದಾಗಿ ವಚನ ಕೊಡಬೇಕು. ನಂತರ ಮಿಶ್ರಾ ಗುರೂಜಿಯವರ ಕೈ ಮೇಲೆ ತನ್ನ ಕೈಯಿಟ್ಟು ಪ್ರಮಾಣ ಮಾಡಿದ. ಗುರೂಜಿ ಹೇಳಿದರು, ನಮ್ಮಲ್ಲಿ ಮಾತೃದೇವೋಭವ, ಪಿತೃದೇವೋಭವ, ಆಚಾರ್ಯದೇವೋಭವ” ಎಂದು ಹೇಳಲಾಗಿದೆ. ಇದನ್ನು ನಾವು ಆಚರಣೆಯಲ್ಲಿ ತರಬೇಕು.

“ನೀನೊಂದು ಕೆಲಸ ಮಾಡು. ನಿನ್ನ ತಂದೆ ತಾಯಿ ಹಾಸಿಗೆಯಿಂದ ಏಳುವುದಕ್ಕೆ ಪೂರ್ವದಲ್ಲಿ ನೀನು ತಪ್ಪದೇ ಏಳಬೇಕು. ಅವರಿಬ್ಬರ ಪಾದಸ್ಪರ್ಶ ಮಾಡಿ ನಿನ್ನ ಕೈಬೆರಳನ್ನು ಕಣ್ಣಿಗೆ ದಿನಾಲೂ ಹಚ್ಚಿಕೊಳ್ಳಬೇಕು” ಮಿಶ್ರಾ, “ಆದರೆ...” ಎಂದು ಪ್ರಶ್ನೆ ಕೇಳಲು ಮುಂದಾದ. ಆಗ ಗುರೂಜಿ ಹೇಳಿದರು. “No more questions” ನೀನು ನನಗೆ ವಚನ ಕೊಟ್ಟಿರುವೆ ಒಂದು ತಿಂಗಳ ಮೇಲೆ ಬಂದು ನನ್ನನ್ನು ಭೇಟಿಯಾಗಿ ನಿನ್ನ ಪ್ರಗತಿಯ ಬಗ್ಗೆ ಹೇಳು.

ಹದಿನೈದು ದಿನಗಳ ಮೇಲೆ... ಗುರೂಜಿಯವರನ್ನು ಕಾಣಲು ಒಬ್ಬ ಮುದುಕ, ಒಬ್ಬ ಮುದುಕಿ ಬಂದರು. “ತಾವೇ ಗುರೂಜಿ ಏನು?” ಎಂದು ಕೇಳಿದರು. ಇವರು ‘ಹಾಂ’ ಎಂದಾಗ ಇಬ್ಬರು ಇವರ ಪಾದಸ್ಪರ್ಶ ಮಾಡಿ ಸಾಷ್ಟಾಂಗ ನಮಸ್ಕಾರ ಹಾಕಿದರು. “ನೀವು ಯಾರು?” ಎಂದು ಕೇಳಿದಾಗ, “ನಾವು ನಿಮ್ಮ ಕಡೆ ಮಿಶ್ರಾ ಎಂಬ ಇಂಜಿನಿಯರ್ ಬಂದಿದ್ದನಲ್ಲ ಅವನ ತಂದೆ ತಾಯಿ” ಎಂದರು.

ಮಿಶ್ರಾ ತನ್ನ ತಂದೆ ತಾಯಿಗೆ ಆದರ ಮಾಡುತ್ತಿರಲಿಲ್ಲ. ಬಾಯಿಗೆ ಬಂದಂತೆ ಬೈಯುತ್ತಿದ್ದ. ಊಟ - ತಿನಿಸಿನಲ್ಲಿ ಸಣ್ಣ ತಪ್ಪಾದರೆ ಕಡ್ಡಿಯಿಂದ ಗುಡ್ಡ ಮಾಡಿ ಆಕಾಶ ಪಾತಾಳ ಒಂದಾಗುವಂತೆ ಒದರುತ್ತಿದ್ದ. ಕೆಲಸಲ ತಾಟು ತಾಯಿಯ ಮುಖದ ಮೇಲೆ ಎಸೆಯುತ್ತಿದ್ದ. ತನ್ನ ಆಫೀಸಿನಲ್ಲಿಯ ವೈಫಲ್ಯ ಆಶಾಭಂಗ (frustration) ತಂದೆ ತಾಯಿಯ ಮೇಲೆ ತೆಗೆಯುತ್ತಿದ್ದ. ಅವನೊಂದಿಗೆ ಮಾತಾಡಲು ಕೂಡಾ ಅವರಿಗೆ ಭಯ. ‘ರಾತ್ರಿ ಊಟಕ್ಕೆ ಬರುತ್ತೀಯಾ?’ ಎಂದು ಕೂಡ ಕೇಳುವಂತಿಲ್ಲ. ಅವನು ಬರುತ್ತಾನೆಂದು ಅಡುಗೆ ಇಟ್ಟರೆ ‘ಊಟ ಆಗಿದೆ’ ಎನ್ನುತ್ತಿದ್ದ. ಅವನು ಬರಲಿಕ್ಕಿಲ್ಲವೆಂದು ಊಟ ಇಡದಿದ್ದರೆ ‘ಮುಂಜಾನೆಯಿಂದ ಉಪವಾಸ ಇದ್ದೇನೆ, ಅಡುಗೆ ಇಲ್ಲವೇ’ ಎಂದು ಚೀರಾಡುತ್ತಿದ್ದ. ‘ನನ್ನನ್ನು ಏಕೆ ಹಡೆದಿರಿ?’ ಎನ್ನುತ್ತಿದ್ದ. ‘ಮದುವೆಯಾಗುವೆಯಾ? ಕನ್ಯಾ ಪಕ್ಷದವರು ಪೀಡಿಸುತ್ತಿದ್ದಾರೆ’ ಎಂದರೆ “ನನ್ನ ಮದುವೆಯ ಚಿಂತೆ ನಿಮಗೇಕೆ?” ಎಂದು ಕಡ್ಡಿ ಮುರಿದಂತೆ ಮಾತಾಡುತ್ತಿದ್ದ. ಒಬ್ಬನೇ ಮಗ ಎಂದು ಅವರಿಗೆ ಅವನ ಮೇಲೆ ಎಲ್ಲ ಆಶೋತ್ತರ ಇದ್ದವು. ಆದರೆ ಅವನಿಂದ ನೋವಿನ ವಿನಾ, ಅವಮಾನದ ವಿನಾ ಏನೂ ದೊರೆಯುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಅವರು ಮಗನಲ್ಲಿ ನಾಟಕೀಯ ಬದಲಾವಣೆ ಕಂಡರು. ಯಾವಾಗಲೂ ಲೇಟಾಗಿ ಏಳುತ್ತಿದ್ದವ ಬೇಗ ಏಳಲು ಶುರುಮಾಡಿದ್ದ. ‘ಚಹ’ ಮಾಡಿ, ಆರಿದೆ ಎಂದು ಎರಡೆರಡು ಸಾರಿ ಬಿಸಿ ಮಾಡಿದರೂ ಕುಡಿಯದೇ ಇರುವ ಮಗ ಇಂದು ತನ್ನ ಚಹ ತಾನೇ ಮಾಡಿಕೊಂಡದ್ದು ಕಂಡರೆ ಅವರಿಗೆ ಅಚ್ಚರಿ. ಕೆಲ ಸಲ

ತಂದೆ ತಾಯಿಯರನ್ನು ಚಹ ಮಾಡಿ ಕುಡಿಯಲು ಆಮಂತ್ರಿಸುತ್ತಿದ್ದ.

ಎಲ್ಲಕ್ಕಿಂತ ಆಶ್ಚರ್ಯದ ವಿಷಯವೆಂದರೆ ಅವನು ಕೋಪಿಸುತ್ತಿರಲಿಲ್ಲ. ಬೈಯುವುದು ಮಾಯವಾಗಿತ್ತು. ಜಗತ್ತಿನ ಏಳನೆಯ ಅಚ್ಚರಿ ಎಂದರೆ ಅವನು ತಂದೆ ತಾಯಿಗಳ ಪಾದ ಸ್ಪರ್ಶ ಮಾಡುತ್ತಿದ್ದ. "ನೀನು ಯಾಕೆ ಪಾದ ಸ್ಪರ್ಶ ಮಾಡುವಿ?" ಎಂದು ಕೇಳಲು ಅವರಿಗೆ ಧೈರ್ಯವಿರಲಿಲ್ಲ. ಒಂದು ದಿನ ಧೈರ್ಯಮಾಡಿ ತಂದೆ ಕೇಳಿಯೇ ಬಿಟ್ಟ. "ಮುನ್ನಾ, ನೀನು ಮುಂಜಾನೆ ನಮ್ಮಿಬ್ಬರ ಪಾದ ಸ್ಪರ್ಶ ಮಾಡುತ್ತಿಯಲ್ಲ, ಅದರ ಬಗ್ಗೆ ಕೇಳಬೇಕಾಗಿತ್ತು."

"ನಗುತ್ತ ಅದೋ, ಚಿಂತೆ ಮಾಡಬೇಡಿ. ನಾನೇನು ಕೆಟ್ಟಕೆಲಸ ಮಾಡುತ್ತಿಲ್ಲವಲ್ಲ" ಎಂದನು. ಆಗ ತಾಯಿ ಅಂದಳು. "ಇಲ್ಲ ಮಗ, ಒಳ್ಳೆ ಕೆಲಸ ಮಾಡ್ತಾ ಇದ್ದೀ. ನಿನ್ನನ್ನು ನಾವು ಸದಾ ಹರಸುತ್ತೇವೆ. ಈ ಬದಲಾವಣೆ ನಿನ್ನಲ್ಲಿ ಹೇಗೆ ಆಯಿತು ಕೇಳಿದರೆ, ನಿನಗೆ ಕೋಪಬರುವುದಿಲ್ಲ ತಾನೇ?" ಆಗ ಮಿಶ್ರಾ ಅಂದ. "ಕೋಪವೆಲ್ಲಿಯದು ತಾಯಿ, ಒಬ್ಬ ಗುರೂಜಿ ಭೆಟ್ಟಿಯಾಗಿದ್ದರು. ಅವರು ನನಗೆ ಈ ರೀತಿ ತಂದೆ ತಾಯಿಯ ಪೂಜೆ ಸಲ್ಲಿಸಲು ಹೇಳಿದ್ದಾರೆ" ಎಂದ.

ಮತ್ತೆ ಕೆಲ ದಿನ ಕಳೆದವು. ತಂದೆ ಧೈರ್ಯ ತಂದುಕೊಂಡು ಕೇಳಿದ. "ಆ ಗುರೂಜಿ ಅಂದೆಯಲ್ಲ, ಅವರಾರು, ಅವರ ವಿಳಾಸವೇನು?" ಮಗ ವಿಳಾಸ ಹೇಳಿದ. ಆದ್ದರಿಂದ ಅವರಿಬ್ಬರು ಗುರೂಜಿಯನ್ನು ಭೇಟಿಯಾಗಿ ತಮ್ಮ ಕೃತಜ್ಞತೆ ತಿಳಿಸಲು ಬಂದಿದ್ದರು.

ಆಫೀಸಿನಲ್ಲಿ ವಾತಾವರಣ ಬದಲಾಗಿತ್ತು. ಹಿಂದೆ ಎರಡು ಗಂಟೆಯಲ್ಲಿ ತನ್ನ ಟೇಬಲ್ ಮೇಲಿನ ಕೆಲಸ ಮುಗಿಸಿ ಇತರರ ತಪ್ಪು ತೆಗೆಯುವುದರಲ್ಲಿ ಕಾಲ ಕಳೆಯುತ್ತಿದ್ದ. ಈಗ ಹಾಗಿಲ್ಲ. ಒಮ್ಮೆ ಅವನ ಸಹ ಕೆಲಸಗಾರ ತೊಂದರೆಯಲ್ಲಿದ್ದ. ಮ್ಯಾನೇಜರರು ಕೆಲವು ಸ್ಟೇಟ್‌ಮೆಂಟ್ ಅಂದೇ ತಯಾರಿಸಲು ಮೆಮೋ ಕೊಟ್ಟಿದ್ದರು. ಅವನ ಜೊತೆಗೆ ಕುಳಿತು ಎಲ್ಲ ಕೆಲಸ ಮಾಡಿ ಕೊಟ್ಟ. ಇವನು ಸಹಾಯ ಮಾಡಿದ ವಿಷಯ ಮ್ಯಾನೇಜರ್‌ಗೆ ತಿಳಿಯಿತು. ಇವನನ್ನು ಕರೆದು ಮೆಚ್ಚುಗೆ ವ್ಯಕ್ತ ಪಡಿಸಿದಾಗ ಹೇಳಿದ್ದ, "ನಮ್ಮ ಆಫೀಸು ಅಂದರೆ ಒಂದು ಫ್ಯಾಮಿಲಿ ಇದ್ದಂತೆ. ಒಬ್ಬರು ಇನ್ನೊಬ್ಬರಿಗೆ ಸಹಾಯ ಮಾಡಬೇಕು. ಒಟ್ಟು ಕೆಲಸ ನಿಲ್ಲದಂತೆ ನೋಡುವುದು ನಮ್ಮೆಲ್ಲರ ಕರ್ತವ್ಯ" ಎಂದು.

ಮರುದಿನ ಮ್ಯಾನೇಜರ್ ಇವನನ್ನು ಕರೆದು ಹೇಳಿದ "I like your spirit and commitment for work" ಎಂದ. ಇವನ ಸಹಾಯ ತನ್ನ ಕೆಲಸದಲ್ಲೂ ಬಯಸಿದ. ದೆಹಲಿಯಲ್ಲಿ ಒಂದು ಮೀಟಿಂಗ್‌ಗೆ ತನ್ನ ಪರವಾಗಿ ಅಟೆಂಡ್ ಆಗಲು ಹೇಳಿದಾಗ ಇವನು ಮಾಡಿದ ಸಂವಾದ ಚಾತುರ್ಯ ಕಂಡು ಕಂಪೆನಿಯ ಡೈರೆಕ್ಟರರೆಲ್ಲ ಬಹಳೇ ಮೆಚ್ಚಿದರು. ಇವನನ್ನು ಅಸಿಸ್ಟೆಂಟ್ ಮ್ಯಾನೇಜರ್ ಹುದ್ದೆಗೆ ಅರ್ಹನೆಂದು ತೀರ್ಮಾನಿಸಿದರು.

ಕೆಲವು ತಿಂಗಳಲ್ಲಿ ಅವನ ಪ್ರಗತಿ ಕಂಡು ತಂದೆ ತಾಯಿಗೆ ಎಲ್ಲಿಲ್ಲದ ಸಂತೋಷ. ಕಂಪೆನಿ ಕ್ವಾರ್ಟರ್ಸ್, ಕಾರ್ ಹಾಗೂ ಡ್ರೈವರ್ ಅನುಕೂಲತೆ ಒದಗಿಸಲಾಯ್ತು. ಮದುವೆಯ ಪ್ರಸ್ತಾಪ ತೆಗೆದಾಗ, "ಜಾತಕ ಒಯ್ದು ಗುರೂಜಿಗೆ ತೋರಿಸಿರಿ. ಅವರು ಪಾಸು ಮಾಡಿದ ಹುಡುಗಿಯನ್ನೇ



ನಾನು ಪಾಸು ಮಾಡುವೆ" ಎಂದ. ಅವನ ಮದುವೆಯೂ ಆಯಿತು. ಅವರ ಫ್ಯಾಮಿಲಿ ಫೋಟೋ ತೆಗೆದಾಗ ಗುರೂಜಿಯವರನ್ನು ಮಧ್ಯದಲ್ಲಿ ಕುಳ್ಳಿರಿಸಲಾಗಿತ್ತು.

ಈ ಕತೆ ನಡೆದಾಗ ಹಂತ ಹಂತದಲ್ಲಿ ನನಗೆ ಗುರೂಜಿ ವಿಷಯ ಹೇಳುತ್ತಿದ್ದರು. ನಾನು ಅವರಿಗೆ ಹೇಳಿದೆ. "ನೀವು ಅವನಿಗೆ ತಂದೆ ತಾಯಿಯ ಪಾದಸ್ಪರ್ಶ ಮಾಡಲು ಹೇಳಿದ್ದು ಮನೋವೈಜ್ಞಾನಿಕ ರೀತಿಯಿಂದ ಕೂಡ ಮಹತ್ವದ್ದಾಗಿದೆ. ಪ್ರತಿಯೊಬ್ಬನಲ್ಲಿ PCA ಎಂದರೆ Parent, Child, Adult ಸುಪ್ತವಾಗಿರುತ್ತದೆ. ಯಾರು ತಂದೆ ತಾಯಿಗೆ ಧಿಕ್ಕರಿಸುತ್ತಾರೋ ಅವರು ತಮ್ಮ ಮೇಲಿನ ಅಧಿಕಾರಿಗಳಿಗೂ ಗೌರವ ನೀಡುವುದಿಲ್ಲ. ಜಗತ್ತಿನ ಅತ್ಯುಚ್ಚ ಅಧಿಕಾರಿ ದೇವರಿಗೂ ತಲೆಬಾಗುವುದಿಲ್ಲ".

"ನೀವು ಅವನ ಅಹಂಕಾರವನ್ನೇ ಮೊದಲು ಕಿತ್ತು ಹಾಕಿದಿರಿ. ಅದರಿಂದ ಅವನು ತನ್ನ ಹೆಚ್ಚಿನ ಶಕ್ತಿ - ಸಾಮರ್ಥ್ಯ ವಿಧಾಯಕ ಕೆಲಸದಲ್ಲಿ ಬಳಸತೊಡಗಿದ. ಅಧಿಕಾರಿಗಳಿಗೆ ವಿಧೇಯನಾದ, ಸಹೋದ್ಯೋಗಿಗಳ 'ಆಪತ್‌ಬಾಂಧವ'ನಾದ. ಇದರಿಂದ ಅವನ ಜೀವನದಲ್ಲಿ ನಾಟಕೀಯ ಬದಲಾವಣೆಯಾಯ್ತು. ನೀವು ಒಬ್ಬ ಹಿರಿಯ ಮನೋವಿಜ್ಞಾನಿ ಮಾಡುವ ಕೆಲಸ ಮಾಡಿದ್ದೀರಿ". ಆಗ ಗುರೂಜಿ ಅಂದರು. "ನನಗೆ ಇದೆಲ್ಲ ಗೊತ್ತಿಲ್ಲ. ಸಮಸ್ಯೆ ಎದುರು ಬಂದಾಗ ನನಗೆ ಅದರ ಪರಿಹಾರವೂ ಹೊಳೆಯುತ್ತದೆ. ಅದು ಹೇಗೆ ನಾನು ಹೇಳಲಾರೆ. ಅದು ಗುರುವಿನ ಕೃಪೆ ಇಷ್ಟೇ ಹೇಳಬಲ್ಲೆ". ಆಗ ನಾನೆಂದೆ. "ಅದು ಸರಿ, ಇದರಿಂದ ನಾಲ್ಕು ಜನರಿಗೆ ಒಳ್ಳೆಯದಾಗುತ್ತದಲ್ಲ ಅದೇ ಸಂತೋಷದ ಸಂಗತಿ". ★


**ಪರಮಪೂಜ್ಯ ಶ್ರೀ ಪಲಿಮಾರು ಮಠಾಧೀಶರಾದ**

**ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರೊಂದಿಗೆ**

**ದಕ್ಷಿಣ ಭಾರತ ತೀರ್ಥಕ್ಷೇತ್ರ ಪ್ರವಾಸ**

**ಜನವರಿ 21ರಿಂದ ಜನವರಿ 30, 2005ರ ತನಕ (10 ದಿನಗಳು)**

**ಸೀಟು 1ಕ್ಕೆ : ಹೈಟೆಕ್ ರೂ. 6,000/- ; ಸೆಮಿಲಕ್ಸುರಿ ರೂ. 4,500/-**

**ಇಂದೇ ಅಡ್ವಾನ್ಸ್ 3ಸಾವಿರ, ಒಂದೂವರೆ ಸಾವಿರ ಕೊಟ್ಟು ತಮ್ಮ ಸೀಟುಗಳನ್ನು ಕಾದಿರಿಸಿರಿ.**
**(ಊಟ ವಸತಿ ಎಲ್ಲಾ ಸೇರಿ)**

**ಸಂದರ್ಶಿಸುವ ಸ್ಥಳಗಳು : ಘಟಿಕಾಚಲ, ಕಂಚಿ, ತಿರುವಣ್ಣಾಮಲೈ, ತಿರುಕ್ಕೊಯಿಲೂರು, ವೃದ್ಧಾಚಲಂ, ಶ್ರೀಮುಷ್ಣಂ, ಚಿದಂಬರಂ, ಕುಂಭಕೋಣಂ, ತಂಜಾವೂರು, ಶ್ರೀರಂಗಂ, ಅಳಗರಕ್ಕೊಯಿಲ್, ಮಧುರೈ, ನವಪಾಷಾಣಂ, ದರ್ಭಶಯನಮ್, ರಾಮೇಶ್ವರಮ್, ತಿರುನಲ್ವೇಲಿ, ತೋತಾದ್ರಿ, ನಾಗರಕೋಯಿಲ್, ಶುಚೀಂದ್ರಮ್, ಕನ್ಯಾಕುಮಾರಿ, ತಿರುವನಂತಪುರಮ್, ಗುರುವಾಯೂರು ಮುಂತಾದ ಕ್ಷೇತ್ರಗಳು.**

ಹೆಚ್ಚಿನ ವಿವರಗಳಿಗೆ : **ಬಿ. ಮಧುಸೂದನ ಆಚಾರ್ಯ**, ಶ್ರೀ ಪಲಿಮಾರು ಮಠ, ಉಡುಪಿ - 1

**ದೂರವಾಣಿ : 2529740, 2527395 (ಆಫೀಸು) 2542425 (ಮನೆ)**

*ಸಂಘಟಕರ ತೀರ್ಮಾನವೇ ಅಂತಿಮ*

*Our pranamas at the feet of*
**SRI SRI SUGUNENDRA THIRTHA SWAMIJI**

***For any of your Return tickets or PTA'S please contact us for the lowest fares***

- **International Air Ticketing**
- **Domestic Air Ticketing**
- **Package Tours - Worldwide**
- **Passports & Visas**
- **Hotel Reservation - Worldwide**
- **Western Union Money Transfer**
- **Mediclaim Insurance**
- **Foreign Exchange**

Contact : **MR. S. HARISH / MR. M. RAGHU**

**AIR PUSHPAK TOURS (I) PVT. LTD.**

**# 86, Richmond Road, Bangalore - 560 025**

Ph.: 22231661-4 Lines / 22228355-5 Lines FAX : 22244366
Mobile : 9845650456 / 9845650440
Website : www.airpushpak.com E-mail: airpushpak@vsnl.net

- **Airport/Railway Station - Pickups and Drops.**
- **Coach Tours / Railway Reservations**
- **Hotel Reservations - World Wide**
- **Domestic Package Tours**

**DELHI - AGRA - JAIPUR - GOA - KERALA**
**KODAIKANAL - OOTY - MYSORE & OTHER PLACES**

**Contact : MR. K. RAJENDRA / MS. LAKSHMI**

**PUSHPAK TRAVELS**

Ph.: 22231661-4 Lines / 22228355-5 Lines FAX : 22244366
Mobile : 9845650444 / 9845650440
Website : www.airpushpak.com E-mail: airpushpak@vsnl.net

**JOB OPPORTUNITIES**

***Required Counter Staff / Accounts Staff***

***Bank retired Can Also Apply to***

**Contact : AIR PUSHPAK TOURS (I) PVT. LTD.**

# 86, Richmond Road, Bangalore - 560 025
Ph.: 22231661 - 4 Lines E-mail : airpushpak@vsnl.net

ಶ್ರೀಮದನುವ್ಯಾಖ್ಯಾನ ಅನುಸಂಧಾನಪೂರ್ವಕ

# ಸುಧಾಸುವಚನ

ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು

ಲೇಖಾಂಕ -33 ಮೊಕ್ಕಾಂ: ಉಡುಪಿ

ಪ್ರದರ್ಶನಾಯ, ಉಪಪಾದನಾಯ ಎಂಬೆರಡು ಪದಗಳ ಆಯ್ಕೆಯ ಹಿಂದಿರುವ ಉದ್ದೇಶವನ್ನು ತಿಳಿದದ್ದಾಯ್ತು. ಇದೀಗ ಮತ್ತೊಮ್ಮೆ ಪೂರ್ವಾವಲೋಕಿಸಿದರೆ ಇದೀಗ ಬರುವ ಪ್ರಶ್ನೆ ನಿಖಿಲ ಗುಣತ್ವ, ನಿರ್ದೋಷತ್ವ ಮೊದಲಾದಗುಣಗಳಲ್ಲಿ ಒಂದು ಇದ್ದರೆ ಮತ್ತೊಂದು ಇದ್ದೇ ಇರುತ್ತದೆ. ಅವುಗಳಲ್ಲಿ ಒಂದನ್ನು ಹೇಳಿದರೆ ಸಾಕು. ಅದು ಬಿಟ್ಟು ಅರ್ಥಾತ್ ಸಿದ್ಧವಾಗುವುದನ್ನು ಹೇಳಿದರೆ ಆರ್ಥಿಕ ಪುನರುಕ್ತಿ ದೋಷವು ಪ್ರಾಪ್ತವಾಗುತ್ತದಲ್ವಾ? ಎಂದು.

ಅದಕ್ಕೆ ಉತ್ತರವಾಗಿ ಸ್ತುತಿಯನ್ನು ಮಾಡುವಾಗ ಪುನರುಕ್ತಿಯು ದೋಷ ಅಲ್ಲ. ಈ ವಿಶೇಷಣಗಳೆಲ್ಲವೂ ಸ್ತುತಿರೂಪವಾಗಿ ಇವೆ. ಸ್ತುತಿಯಲ್ಲಿ ಶಬ್ದ ಪುನರುಕ್ತಿಯೂ ಕೂಡ ದೋಷವಲ್ಲ. ಹೀಗೆ ಇರುವಾಗ ಆರ್ಥಿಕ ಪುನರುಕ್ತಿಯು ದೋಷವಾಗುವುದಾದರೂ ಹೇಗೆ? ಎಂದು ಮಾತು ಬಂತು.

ಇಲ್ಲಿ ಯಾದುಪತ್ಯ ವ್ಯಾಖ್ಯಾನದಲ್ಲಿ ಎಲ್ಲ ವಿಶೇಷಣಗಳಿಗೂ ವಿಶೇಷ್ಯ ಪ್ರಶಂಸೆಯೇ ಅರ್ಥವಾದರೆ ವಿಶೇಷ್ಯ ಪ್ರಶಂಸೆ ಎಂಬ ಒಂದೇ ಅರ್ಥಕ್ಕಾಗಿಯೇ ಇಷ್ಟು ವಿಶೇಷಣಗಳು. ಆದ್ದರಿಂದ ಇವುಗಳಲ್ಲಿ ಆರ್ಥಿಕ ಪುನರುಕ್ತಿ ದೋಷವು ಇದೆ ಎಂದು ಶಂಕೆ ಮಾಡಿ ಅದಕ್ಕೆ ಉತ್ತರವನ್ನು ಕೊಡುತ್ತಾರೆ.

ಏನೆಂದರೆ ಯಾಗದ ಅರ್ಥವಾದ ವಾಕ್ಯಗಳಲ್ಲಿ ತನ್ನಲ್ಲಿ ಎಷ್ಟು ಪದಗಳು ಇದ್ದರೂ ಆ ಪದಗಳಿಗೆ ಬೇರೆ ಬೇರೆ ಅರ್ಥ ವಿವಕ್ಷೆಯಿಲ್ಲ. ಅವು ಎಲ್ಲ ಸೇರಿ ಯಾಗದ ಪ್ರಾಶಸ್ತ್ಯವನ್ನು ಬೋಧಿಸುವುದರಿಂದ ಹೇಗೆ ದೋಷವು ಇಲ್ಲವೋ ಹಾಗೆಯೇ ಇಲ್ಲಿ ಎಲ್ಲ ವಿಶೇಷಣಗಳೂ ಸೇರಿ ವಿಶೇಷ್ಯಪ್ರಶಂಸೆಯನ್ನು ಮಾಡುತ್ತವೆ. ಆದುದರಿಂದ ಪುನರುಕ್ತಿಯು ಇಲ್ಲ ಎಂಬುದಾಗಿ ಸಮಾಧಾನವನ್ನು ಹೇಳಿದ್ದಾರೆ.

ಆಗ ಸುಧಾದಲ್ಲಿ 'ಸ್ತುತಿತ್ವಮೇವ ಸಮಾಧಾನಂ' ಎಂಬುದಕ್ಕೆ ಅರ್ಥವಾದತ್ವವೇ ಸಮಾಧಾನವೆಂದು ಅರ್ಥ. ಈ ರೀತಿ ಯಾದುಪತ್ಯದಲ್ಲಿ ವ್ಯಾಖ್ಯಾನ ಇದೆ.

ಈ ವ್ಯಾಖ್ಯಾನದ ಮೇಲೆ ಒಂದು ಪ್ರಶ್ನೆ ಉಂಟಾಗುತ್ತದೆ. ಅದೇನೆಂದರೆ ಈ ಶ್ಲೋಕದ ಒಂದೊಂದು ವಿಶೇಷಣವೂ ಕೂಡ ವಿಶೇಷ್ಯ ಪ್ರಶಂಸಾರ್ಥವಾಗಿರುವಾಗ ವಿಶೇಷಣ ಸಮುದಾಯಗಳು ವ್ಯರ್ಥ ಎಂದು.

ಇದಕ್ಕೆ ಸಮಾಧಾನ - ಒಂದೊಂದು ವಿಶೇಷಣದಿಂದ ತಿಳಿಯಲ್ಪಡುವ



ಪ್ರಶಂಸೆಗಿಂತ ಎಲ್ಲ ವಿಶೇಷಣಗಳಿಂದ ವಿಲಕ್ಷಣವಾದ ವಿಶೇಷವಾದ ಪ್ರಶಂಸೆಯು ಲಭ್ಯವಾಗುತ್ತದೆ. ಆದುದರಿಂದ ವಿಶೇಷಣ ಸಮುದಾಯವು ವ್ಯರ್ಥವಲ್ಲ. ಶಂಕೆಯನ್ನು ಮಾಡುವವನು ಒಂದೊಂದು ವಿಶೇಷಣದಿಂದ ಲಭ್ಯವಾಗುವ ಪ್ರಶಂಸೆಗಿಂತ ವಿಶೇಷಣ ಸಮುದಾಯದಿಂದ ವಿಲಕ್ಷಣವಾದ ಪ್ರಶಂಸೆಯು ಲಭ್ಯವಾಗುತ್ತದೆಂದು ತಿಳಿಯಲಿಲ್ಲ. ಆದುದರಿಂದ ಆರ್ಥಿಕ ಪುನರುಕ್ತಿಯನ್ನು ಶಂಕಿಸಿದ್ದಾನೆ ಎಂದು.

ಈಗ ವಿಶೇಷ್ಯ ಪ್ರಶಂಸೆಯನ್ನು ಈ ವಿಶೇಷಣಗಳಿಂದಲೇ ಮಾಡಲಿಕ್ಕೇನು ಕಾರಣ ಎಂದು ಉಳಿದಿರುವ ಪ್ರಶ್ನೆ. ಈ ಪ್ರಶ್ನೆಯು ಯುಕ್ತವಲ್ಲ. ಏಕೆಂದರೆ ಯಾವ ವಿಶೇಷಣವನ್ನು ಹೇಳಿದರೂ ಈ ವಿಶೇಷಣವನ್ನೇ ಏಕೆ ಹೇಳಿದ್ದು ಎಂದು ಪ್ರಶ್ನೆಯು ಉಂಟಾಗುತ್ತದೆ. ಆದುದರಿಂದ ಈ ಪ್ರಶ್ನೆಯು ಅಶೋಕ ವೃಕ್ಷದ ಬುಡದಲ್ಲಿಯೇ ಸೀತೆಯನ್ನು ಕೂಡ್ರಿಸಿದ್ದು ಏಕೆ ಎಂದು ಕೇಳಿದಂತೆ. ಬೇರೆ ವೃಕ್ಷದ ಬುಡದಲ್ಲಿ ಕೂಡ್ರಿಸಿದರೆ ಆ ವೃಕ್ಷದ ಬುಡದಲ್ಲಿ ಕೂಡ್ರಿಸಿದ್ದು ಏಕೆ? ಮತ್ತೊಂದು ಪ್ರಪ್ರಶ್ನೆ ಇದ್ದೇ ಇರುತ್ತದೆ. ಯಾವುದಾದರೊಂದು ವೃಕ್ಷದ ಬುಡದಲ್ಲಿ ಕೂಡ್ರಿಸಬೇಕು ಆದ್ದರಿಂದ ಅಶೋಕ ವೃಕ್ಷದ ಬುಡದಲ್ಲಿ ಕೂಡ್ರಿಸಿದ್ದು ಎಂದು ಉತ್ತರ ಕೊಡುವಂತೆ ಯಾವುದಾದರೊಂದು ವಿಶೇಷಣದಿಂದ ವಿಶೇಷ್ಯ ಪ್ರಶಂಸೆಯನ್ನು ಮಾಡಬೇಕು. ಆದ್ದರಿಂದ ಈ ವಿಶೇಷಣದಿಂದ ಪ್ರಶಂಸೆ ಮಾಡಿದ್ದು ಎಂದು ಅಶೋಕವನಿಕಾ ನ್ಯಾಯದಿಂದ ಉತ್ತರವು ಇದೆ.

ಆದರೂ ಶ್ರೀ ಮದಾಚಾರ್ಯರ ವಿಷಯದಲ್ಲಿ ಒಂದು ವಿಶೇಷ. ಏನೆಂದರೆ ಅವರು ಬಹಳ ದೊಡ್ಡವರು ಆದುದರಿಂದ ಅನೇಕ ಪ್ರಯೋಜನಗಳನ್ನು ಇಟ್ಟುಕೊಂಡೇ ಏನನ್ನಾದರೂ ಹೇಳುತ್ತಾರೆ. ಈ ಕಾರಣದಿಂದ ಶ್ರೀ ಮದಾಚಾರ್ಯರು ಈ ವಿಶೇಷಣಗಳನ್ನೇ ಹೇಳಬೇಕಾದರೆ ಏನಾದರೂ ಬೇರೆ ಬೇರೆ ಪ್ರಯೋಜನವು ಇದ್ದೇ ಇರುತ್ತದೆ. ಆದುದರಿಂದ ಈ ಪ್ರಶ್ನೆಯು ಸಂಗತವಾಗುವುದು.

ಈ ರೀತಿ ಸಂಗತವಾದ ಪ್ರಶ್ನೆಯನ್ನು ಮಾಡಿದರೆ ಸಮಾಧಾನವನ್ನು ಸುಧಾದಲ್ಲಿ ಹೇಳುತ್ತಾರೆ. ನಾರಾಯಣನು ಗ್ರಂಥಾದಿಯಲ್ಲಿ ವಂದ್ಯನಾಗಲು ಕಾರಣವೇನು? ನೀವು ಏನಾದರೂ ಕಾರಣವನ್ನು ಹೇಳಿ ನಾರಾಯಣನಿಗೆ ವಂದ್ಯತ್ವವನ್ನು ಕೂಡಿಸಿದರೆ ಇತರ ದೇವತೆಗಳಿಗೆ ಅಂತಹ ಕಾರಣವು ಇಲ್ಲವೋ? ನಾರಾಯಣನಂತೆ ಇತರರೂ ದೇವತೆಗಳಾದುದರಿಂದ ಇತರರಿಗೂ ವಂದ್ಯತ್ವ ಅದೇ ನ್ಯಾಯದಿಂದ ಇರಬಹುದು. ಹೀಗೆ ಇರುವಾಗ ನಾರಾಯಣನಿಗೆ ಮಾತ್ರ ವಂದ್ಯತ್ವವು ಏಕೆ?

ಈ ಪ್ರಶ್ನೆ ಬಂದಾಗ ಉತ್ತರವನ್ನು ಹೇಳಲು ಈ ವಿಶೇಷಣ ಕೇಳಬೇಕು. ಅದೇನೆಂದರೆ ಈ ವಿಶೇಷಣಗಳಿಂದ ವಂದ್ಯತ್ವಯೋಜಕ ಧರ್ಮಗಳು ಮೂರು

ಇವೆ. ವಿಶಿಷ್ಟತ್ವ ಇಷ್ಟತ್ವ ಅಧಿಕೃತತ್ವ ಎಂದು. ಈ ಮೂರು ವಿಶೇಷಣಗಳು ಗ್ರಂಥಾದಿಯಲ್ಲಿ ದೇವತೆಯ ವಂದ್ಯತ್ವವನ್ನು ಕುರಿತು ಪ್ರಯೋಜಕಗಳು ಇತ್ಯಾದಿ. ಈ ಮೂರು ಮಿಳಿವಿತವಾಗಿಯೇ ಪ್ರಯೋಜಕ. ಒಂದೊಂದು ಪ್ರಯೋಜಕವೆಂದು ಹೇಳಿದರೆ ಇಷ್ಟತ್ವವುಳ್ಳವರು ಎಲ್ಲರೂ ವಂದ್ಯತ್ವವುಳ್ಳವರಾಗಬೇಕಾದೀತು. ಗ್ರಂಥಾದಿಯಲ್ಲಿ ವಂದ್ಯತ್ವ ಪ್ರಯೋಜಕವೆಂದು ವಿವಕ್ಷೆ ಮಾಡದೆ ಇದ್ದರೆ ಮಾತಾಪಿತೃಗಳಿಗೆ ನಿತ್ಯ ವಂದ್ಯತ್ವವು ಕೂಡಲಿಕ್ಕಿಲ್ಲ. ಏಕೆಂದರೆ ಅವರಿಗೆ ಅಧಿಕೃತತ್ವವು ಇಲ್ಲ. ಅಧಿಕೃತತ್ವ ಎಂದರೆ ಗ್ರಂಥ ಪ್ರತಿಪಾದ್ಯತ್ವ. ಮಾತಾಪಿತೃಗಳಿಗೆ ಗ್ರಂಥ ಪ್ರತಿಪಾದ್ಯತ್ವವು ಇಲ್ಲ ಎಂದು.

ಗ್ರಂಥಾದಿಯಲ್ಲಿ ವಂದ್ಯತ್ವವನ್ನು ಕುರಿತು ಮೂರು ಪ್ರಯೋಜಕವೆಂದು ಏಕೆ ಹೇಳಬೇಕು ಎಂದು ಪ್ರಶ್ನೆ ಬಂದರೆ ಸುಧಾದಲ್ಲಿ 'ನಹಿ ದೇವತಾವಂದನಂ ವ್ಯಸನಿತಯಾ ಕ್ರಿಯತೇ' ಇತ್ಯಾದಿ ಬಂತು. ದೇವತಾವಂದನವು ಇಂತಹ ವ್ಯಸನಿತಾದಿಂದ ಮಾಡಲ್ಪಡುತ್ತಾ ಇಲ್ಲ. ಗ್ರಂಥವು ನಿರ್ವಿಘ್ನವಾಗಿ ಸಮಾಪ್ತಿಯಾಗುವುದಕ್ಕಾಗಿ. ಆದುದರಿಂದ ಅಂತಹ ಫಲಪ್ರಾಪ್ತಿಯಾಗಬೇಕಾದರೆ ದೇವತೆಯು ವಿಶಿಷ್ಟವಾಗಬೇಕು. ವಿಶಿಷ್ಟತ್ವವು ಸ್ವೇಷ್ಟ ಸಾಧನ ಸಮರ್ಥತ್ವರೂಪವಾದುದರಿಂದ ಅಂತಹ ವಿಶಿಷ್ಟತ್ವವುಳ್ಳ ದೇವತೆಯ ವಂದರಿನಂದ ಅಭೀಷ್ಟ ಫಲಸಿದ್ಧಿಯಾಗುತ್ತದೆ ಎಂದು.

ಗ್ರಂಥವನ್ನು ಬರಿಯತಕ್ಕವರಿಗೆ ವಿಷಯ ಸ್ಫೂರ್ತಿಯು ಬೇಕು. ಅದಕ್ಕಾಗಿ ಗ್ರಂಥ ಪ್ರತಿಪಾದ್ಯ ದೇವತೆಯನ್ನು ನಮಸ್ಕರಿಸಬೇಕು. ಗ್ರಂಥಪ್ರತಿಪಾದ್ಯದೇವತೆಯು ತನ್ನ ವಿಷಯದಲ್ಲಿ ಗ್ರಂಥವನ್ನು ರಚಿಸುತ್ತಾನೆ. ಇವನು ಅದಕ್ಕಾಗಿ ವಂದನವನ್ನು ಮಾಡುತ್ತಾನೆ. ಆದುದರಿಂದ ಇವನಿಗೆ ವಿಷಯ ಸ್ಫೂರ್ತಿಯನ್ನು ಕೊಡಲೇಬೇಕು ಎಂದು ಇಚ್ಛಿಸಿ ಅದನ್ನು ಕೊಡುತ್ತಾರೆ. ಆದುದರಿಂದ ಅಧಿಕೃತತ್ವವು ಗ್ರಂಥಾದಿಯ ವಂದ್ಯತ್ವವನ್ನು ಕುರಿತು ಪ್ರಯೋಜಕವಾಯಿತು.

ವಂದ್ಯತ್ವವನ್ನು ಕುರಿತು ಇಷ್ಟತ್ವವೂ ಪ್ರಯೋಜಕ. ಏಕೆಂದರೆ ತನ್ನ ಇಷ್ಟ ದೇವತೆಯಲ್ಲಿ ಭಕ್ತಿಯು ಇರತ್ತದೆ. ಆದುದರಿಂದ ಆ ದೇವತೆಗೆ ನಮಸ್ಕರಿಸುವಾಗ ಭಕ್ತಿಪೂರ್ವಕವಾಗಿಯೇ ನಮಸ್ಕರಿಸುತ್ತಾನೆ. ಭಕ್ತಿ ಪೂರ್ವಕ ನಮಸ್ಕಾರವೇ ಫಲಪ್ರದ ಆದುದರಿಂದ ಸಫಲವಂದನವನ್ನು ಕುರಿತು ಇಷ್ಟತ್ವವೂ ಪ್ರಯೋಜಕವಾಯಿತು. ಇಷ್ಟು ಉದ್ದೇಶಗಳ ಹಿನ್ನಲೆಯನ್ನು ಗುರುತಿಸಿದಾಗ ಮಾತ್ರ ಈ ವಿಶೇಷಣಗಳ ಸಾರ್ಥಕ್ಯ ತೋರಿಸಲು ಸಾಧ್ಯ.

ಇಲ್ಲಿ ಒಂದು ವಿಚಾರ. ಇಲ್ಲಿ ಸಫಲವಂದನವನ್ನು ಕುರಿತು ವಿಶಿಷ್ಟತ್ವಾದಿಗಳು ಮಿಲಿತವಾಗಿ ಪ್ರಯೋಜಕವೆಂದು ಹೇಳಿದರು. ಆದರೆ ಉತ್ತರ ಗ್ರಂಥದಲ್ಲಿ ಹಂತತರ್ಹಿ ಎಂದು ಧರ್ಮಪ್ರಾಣಾದಿಗಳಿಗೆ ವಂದ್ಯತ್ವವು ಬರಲಿ ಎಂದು



ಆಪಾದಿಸಿದ್ದಾರೆ. ಇಲ್ಲಿ ಆಪಾದಕವನ್ನಾಗಿ ಶಾಸ್ತ್ರ ಪ್ರತಿಪಾದ್ಯತ್ವವನ್ನು ಮಾತ್ರ ಇಟ್ಟುಕೊಂಡಿದ್ದಾರೆ. ಆದರೆ ಧರ್ಮಪ್ರಾಣಾದಿಗಳಲ್ಲಿ ಸರ್ವೋತ್ತಮತ್ವ ರೂಪವಾದ ವಿಶಿಷ್ಟತ್ವವು ಇಲ್ಲ. ಆದರೂ ಅವು ವಿಶಿಷ್ಟದಂತೆ ಹೇಳುವುದಾದರೆ ವಿಶಿಷ್ಟತ್ವಾದಿಗಳು ಒಂದೊಂದೇ ವಂದ್ಯತ್ವ ಪ್ರಯೋಜಕವೆಂದು ಗ್ರಂಥಕಾರರ ಅಭಿಪ್ರಾಯವು ತಿಳಿಯುತ್ತದೆ. ಈ ರೀತಿ ಪೂರ್ವೋತ್ತರ ವಿರೋಧವು ತೋರುತ್ತದೆ ಎಂದು.

ಇದಕ್ಕೆ ಪರಿಹಾರವೇನೆಂದರೆ ಆರಂಭದಲ್ಲಿ ಎರಡು ಪ್ರಶ್ನೆಯನ್ನು ಇಟ್ಟುಕೊಂಡಿದ್ದಾರೆ. ಒಂದು ನಾರಾಯಣನಿಗೆ ವಂದ್ಯತ್ವವು ಏಕೆ ಎಂದು ಇನ್ನೊಂದು ನಾರಾಯಣನಿಗೇನೇ ವಂದ್ಯತ್ವವು ಏಕೆ ಎಂದು. ಇತರ ದೇವತೆಗಳೂ ವಂದ್ಯರಾಗಬಹುದಲ್ಲವೇ ಎಂದು ಈ ಎರಡು ಪ್ರಶ್ನೆಗಳ ಪೈಕಿ ಆದ್ಯ ಪ್ರಶ್ನೆಗೆ ವಿಶಿಷ್ಟತ್ವಾದಿಗಳು ಮೂರು ಮಿಲಿತವಾಗಿ ಪ್ರಯೋಜಕವೆಂದು ತಿಳಿಯಬೇಕು ಎಂದು ಉತ್ತರ. ಎರಡನೇ ಪ್ರಶ್ನೆಗೆ ಉತ್ತರ ರೂಪವಾಗಿ ವಿಶಿಷ್ಟತ್ವಾದಿಗಳಲ್ಲಿ ಒಂದೊಂದರಲ್ಲಿ ಪ್ರಯೋಜಕತ್ವವು ಇದೆ ಎಂದು ಅಭಿಪ್ರಾಯ. ಈಗ ಪೂರ್ವೋತ್ತರ ವಿರೋಧವು ಇಲ್ಲವೇ ಇಲ್ಲ ನೋಡಿ.

ಕಾಶಿಕಾದಲ್ಲಿ ಫಲವಿಶೇಷಸಾಧನ ವಂದ್ಯತ್ವವನ್ನು ಕುರಿತು. ಆ ಧರ್ಮಗಳು ಮಿಲಿತವಾಗಿ ಪ್ರಯೋಜಕ. ಸಾಮಾನ್ಯ ಫಲಸಾಧನ ವಂದ್ಯತ್ವವನ್ನು ಕುರಿತು ಅವುಗಳು ಪ್ರತ್ಯೇಕವಾಗಿ ಪ್ರಯೋಜಕ ಎಂದು ಇದೆ. ಹಾಗೆ ಇಟ್ಟುಕೊಂಡರೆ ವಿಶಿಷ್ಟತ್ವವಿಲ್ಲದವನೂ ಇಷ್ಟತ್ವ ಅಧಿಕೃತತ್ವಗಳು ಇದ್ದರೆ ಗ್ರಂಥದ ಆದಿಯಲ್ಲಿ ವಂದ್ಯನಾಗಬೇಕಾದೀತು.

ವಂದ್ಯತ್ವ ಪ್ರಯೋಜಕ ಈ ಮೂರು ಧರ್ಮಗಳ ಪೈಕಿ ವೈಶಿಷ್ಟ್ಯವನ್ನು ಸಿದ್ಧಮಾಡುವುದಕ್ಕಾಗಿ ನಿಖಿಲಪೂರ್ಣ ಗುಣೈಕದೇಹಂ ನಿರ್ದೋಷಂ ಅಸ್ಮೋದ್ಭವಾದಿದಂ ಎಂಬ ಮೂರು ವಿಶೇಷಣಗಳು. ಇಲ್ಲಿ ವೈಶಿಷ್ಟ್ಯವೆಂದರೆ ಎರಡು ಅರ್ಥ. ವಂದನ ಮಾಡುವರಕ್ಕಿಂತ ಉತ್ತಮತ್ವರೂಪವಾದದ್ದು ಒಂದು. ಇನ್ನೊಂದು ವಂದ್ಯೆತರರಿಗಿಂತ ಅತಿಶಯರೂಪವಾದದ್ದು. ಈ ಎರಡೂ ವೈಶಿಷ್ಟ್ಯಗಳು ಈ ಮೂಲಕ ವಿಶೇಷಣಗಳಿಂದ ಉಪಪಾದಿಸಲ್ಪಡುತ್ತವೆ.

ಉಪಪಾದನೆ ಎಂದರೆ ಸಮರ್ಥನೆ. ನಿಖಿಲಗುಣಪೂರ್ಣತ್ವಾದಿಗಳು ಹೇತುಗಳು. ಅವುಗಳಿಂದ ಸಿದ್ಧವಾಗುವುದು ಉಭಯ ವಿಧ ವೈಶಿಷ್ಟ್ಯ. ಈ ರೀತಿ ಇಟ್ಟುಕೊಂಡಾಗ ತತ್ರವೈಶಿಷ್ಟೋಪಪಾದನಾಯ ಎಂಬಲ್ಲಿ ತತ್ರ ಅಂದರೆ ಮೂಲ ಶ್ಲೋಕದಲ್ಲಿ ಇರುವ ವಿಶೇಷಣಗಳ ಪೈಕಿ ಎಂದು ಅರ್ಥ ಸಂಗತವಾಗುತ್ತದೆ. ಆಗ ವೈಶಿಷ್ಟ್ಯವನ್ನು ಸಮರ್ಥಿಸಲಿಕ್ಕೆ ವಿಶೇಷಣ ತ್ರಯ ಏಕೆ? ನಿಖಿಲಪೂರ್ಣಗುಣೈಕದೇಹಂ ಎಂಬ ಒಂದು ವಿಶೇಷಣವು ಸಾಕು ಅದಲ್ಲದೆ ನಿಖಿಲೇತ್ಯಾದಿ ವಿಶೇಷಣವು ಅಸಂಭಾವಿತ ಎಂಬ ಇತ್ಯಾದಿ ಶಂಕೆ ಬಂದರೆ ಪರಿಹಾರಕ್ಕಾಗಿ ಅಸ್ಮೋದ್ಭವಾದಿದಂ ಎಂಬುದು

ಬಂತು. ಆಗ ಪರಮಾತ್ಮನಲ್ಲಿ ಜನಿಮರಣಾದಿದೋಷಗಳು ಇದ್ದದ್ದರಿಂದ ಅವನು ಗುಣಪೂರ್ಣನು ಅಲ್ಲ ಎಂಬ ಶಂಕೆಯು ಬಂದಾಗ ಪರಿಹಾರವಾಗಿ ಬ್ರಹ್ಮಸೂತ್ರದ ಎರಡನೇ ಅಧ್ಯಾಯದಲ್ಲಿ ಹೇಳಿದ ಪ್ರಕಾರ ನಿರ್ದೋಷತ್ವವನ್ನು ಹೇಳಿದರು. ಅಷ್ಟಾದಾಗ ಲೋಕದಲ್ಲಿ ನಿಖಿಲಶಬ್ದವನ್ನು ಬಹಳ ಎಂಬ ಅರ್ಥದಲ್ಲಿ ಪ್ರಯೋಗಿಸುತ್ತಾರೆ. ಅದು ಯದ್ಯಪಿ ಅಮುಖ್ಯಾರ್ಥ ಆದರೂ ಆ ಅಮುಖ್ಯಾರ್ಥ ಇಲ್ಲಿ ವಿವಕ್ಷಿತವಲ್ಲ ಎಂದು ತಿಳಿಸುವುದಕ್ಕೋಸ್ಕರ ನಿಖಿಲಾಃ ನಿಶ್ಶೇಷಾಃ ಎಂದು ಇತ್ಯಾದಿ ಅರ್ಥವನ್ನು ಹೇಳಬೇಕಾಯ್ತು.

ಪೂರ್ಣ ಶಬ್ದಕ್ಕೂ ಆಪೇಕ್ಷಿತಪೂರ್ಣತ್ವರೂಪ ಅರ್ಥದಲ್ಲಿ ಲೋಕದಲ್ಲಿ ಪ್ರಯೋಗವು ಇದೆ. ಭೋಜನದಿಂದ ಹೊಟ್ಟೆ ತುಂಬಿತು. ಹೊಟ್ಟೆ ಪರಿಪೂರ್ಣವಾಯಿತು ಎಂದು ಹೇಳುತ್ತಾರೆ. ಅಂತಹ ಆ ಅಮುಖ್ಯಪೂರ್ಣತ್ವವು ಇಲ್ಲಿ ವಿವಕ್ಷಿತವಲ್ಲ ಎಂದು ತಿಳಿಸುವುದಕ್ಕಾಗಿ ಪೂರ್ಣ ಎಂಬ ಶಬ್ದಕ್ಕೆ ಪ್ರತ್ಯೇಕ, ಅನವಧಿಕ ಎಂಬ ಅರ್ಥವನ್ನು ಹೇಳಬೇಕಾಯ್ತು. ಅನವಧಿಕತ್ವ ಎಂದು ಇಷ್ಟೇ ಬರೆದರೆ ಪರಮಾಣುಗಳು ಅನಂತ ಅಥವಾ ಅನವಧಿಕವೆಂದು ಲೋಕದಲ್ಲಿ ಹೇಳುತ್ತಾರೆ. ಹಾಗೆ ಇಲ್ಲಿ ಅಂತಹ ಸಂಯುಕ್ತಪೂರ್ಣತ್ವವಲ್ಲ ಎಂದು ತಿಳಿಸುವುದಕ್ಕೋಸ್ಕರ ಪ್ರತ್ಯೇಕಂ ಎಂಬ ಶಬ್ದವನ್ನು ಪ್ರಯೋಗಿಸಿದ್ದು ಎಂದು ತಿಳಿಸಬೇಕಾಯ್ತು.

ಈ ರೀತಿ ಒಂದರಿಂದ ಒಂದು ಉದ್‌ಭವವಾಗುವ ಪ್ರಶ್ನ ಕ್ರಮಗಳನ್ನು ತಿಳಿದುಕೊಂಡರೆ, ಗಮನಿಸುತ್ತಾ ಬಂದರೆ ಅದಕ್ಕೆ ಉತ್ತರರೂಪವಾಗಿ ಈ ಗ್ರಂಥಘಟ್ಟವು ಬಂದಿದೆ ಎಂದು ಮನದಟ್ಟಾಗುತ್ತದೆ. ಈ ರೀತಿ ಸಿಂಹಾವಲೋಕನ ಮಾಡಿದಾಗಲೇ ಗ್ರಂಥಸೌಷ್ಠವ ತಿಳಿದುಬರುತ್ತದೆ. ಉಪಪಾದನಾಯ ಎಂಬ ಪದದ ಹಿಂದಿರುವ ಚಿಂತನಜಾಲ ಕಂಡು ಬರುತ್ತದ.

ಈ ರೀತಿ ಸಮಗ್ರ ಪ್ರಶ್ನೋತ್ತರ ರೂಪದಲ್ಲಿ ಹರಿದುಕೊಂಡು ಬರುವ ಸುಧಾದ ಪರಿಯನ್ನು ಸಮಷ್ಟಿಯಾಗಿ ಸಿಂಹದಂತೆ ಅವಲೋಕಿಸಿದಲ್ಲಿ ಉಪಪಾದನಾಯ ಎಂಬ ಪದ ಎಷ್ಟು ಶಕ್ತಿಯುತವಾಗಿದೆ ಎಂದು ತಿಳಿದು ಬರುತ್ತದೆ.

(ಮುಂದುವರಿಯುವುದು)

*With Best Compliments from :*

***"Bedsheet People"***

**"In Textile Field Since 1910"**

***RAJASHREE TEXTILE TRADERS***

Vasudev Enclave, Maidan 4th Cross Road, Mangalore - 575 001.

Phone : 2426624, 2421216, 5266624.

# “ಉತ್ತಿಷ್ಠ ಶ್ರೀಕರ ಸ್ವಾಹಾ”

**ಚಿಪ್ಪಗಿರಿ ನಾಗೇಂದ್ರಾಚಾರ್ಯ**

ಮುಖಪುಟ ಲೇಖನ

ಈ ರೂಪವನ್ನ ಐತರೇಯ ವೇದಮಂತ್ರ ಇಂತು ಕೊಂಡಾಡಿದೆ.

**ಅಪ್ರಕ್ಷಿತಂ ವಸುಬಿಭರ್ಷಿ ಹಸ್ತಯೋಃ ರಷಾಹ್ಯಂ ಸಹಸ್ತನ್ವಿ ಶ್ರುತೇ ದಧೇ**
**ಆವೃತಾಸೋಽ ವತಾಸೋ ನ ಕರ್ತೃಭಿ ಸ್ತನೂಷು ತೇ ಕ್ರತವ ಇಂದ್ರ ಭೂ ರಯಃ**

ಎರಡು ಕೈಗಳಿಂದ ಭಕ್ತನಿಗೆ ನಿರಂತರ ನಾಶವಿಲ್ಲದ ಐಹಿಕ ಹಾಗೂ ಜ್ಞಾನ ಸಂಪತ್ತನ್ನ ಧಾರೆ ಹರಿಸುವಿ. ನಿನ್ನ ಈ ಸಂಪತ್ತನ್ನ ಅಪಹರಿಸಲು ಯಾರಿಗೂ ಆಗದು. ನಿನ್ನ ಶಕ್ತಿಯು ಸೋಲನ್ನರಿಯದಂತಹುದು. ನೆಲದಲ್ಲಿ ಹೂತಿಟ್ಟ ಸಂಪತ್ತನ್ನ ಧನಿಕ ಸಂರಕ್ಷಿಸುವಂತೆ (ಆವೃತಾಸೋಽ ಅವತಾಸೋ....) ಈ ಜೀವಿಗಳನ್ನ (ಕೃತವ) ತನ್ನುದರದಲ್ಲಿಟ್ಟು ನಿರಂತರ ಕಾಪಿಡುವೆ.

ಶ್ರೀಕರ ಭುಕ್ತಿ ಹಾಗೂ ಮುಕ್ತಿ ಗಳೆರಡನ್ನೂ ಕರುಣಿಸುವ, ಆದರೆ ಅಪೇಕ್ಷಿಸತಕ್ಕದ್ದು ಮುಕ್ತಿಯೇ ವಿನಾ ಭುಕ್ತಿಯಲ್ಲ.

‘ರಾಯೇ’ ಅಂದರೆ ಭುಕ್ತಿಯಲ್ಲ ‘ಮೋಕ್ಷಾಖ್ಯವಿತ್ತ’ ಎಂದರು ಆಚಾರ್ಯ ಮಧ್ವರು.

ಶ್ರೀಕರ ಭಕ್ತರಿಗೆ ಸಂಪತ್ತನ್ನಹರಿಸಿದರೆ ಅಭಕ್ತರ ಸಂಪತ್ತನ್ನ ಕಸಿಯುವವನು ಕೂಡಾ (ಕೃಜ್ ಹರಣೇ). ನರಕಾಸುರನ್ನ ಸಂಹರಿಸಿ ಅದಿತಿಯ ಕುಂಡಲಗಳನ್ನ ಅರ್ಪಿಸಲು ಸತ್ಯೆಯ ಜತೆ ಗರುಡಾರೂಢನಾಗಿ ಹಾರುತ್ತಿರು ರೂಪವೇ ಶ್ರೀಕರದ ಪ್ರತಿರೂಪ.

ಅಷ್ಟ ಭುಜಗಳು, ಶೋಭಿಸುವ ಶ್ರೀತೊಡೆಯಲ್ಲಿ, ಧರ್ಮ, ಅರ್ಥ, ಕಾಮ, ಮೋಕ್ಷದ ಪ್ರತಿನಿಧಿಯಾಗಿ ಶಂಖ, ಚಕ್ರ, ಚಂದ್ರ, ಸೂರ್ಯ, ಶಂಖ ಮತ್ತು ಪ್ರಸೂನ ಎಂಬೆರಡು ನಿಧಿಗಳು, ಇನ್ನೆರಡು ಕೈಗಳಿಂದ ನಿರಂತರ ಭುಕ್ತಿ ಮುಕ್ತಿ ಸಂಪತ್ತಿನ ಧಾರೆ. ಗರುಡನ ಹೆಗಲೇರಿ ಭಕ್ತರ ಬಳಿಗೆ ಪಯಣ ಇದೇ ಶ್ರೀಕರನ ಕಲ್ಪನೆ.

ಗರುಡ ಛಂದಸ್ಸಿನ ಪ್ರತೀಕ. (ಛಂದೋಮ ಯೇ ನ ಗರುಡೇನ ಸಮುಹ್ಯಮಾನಃ) ಶ್ರೀ ವೇದಾಭಿಮಾನಿನಿ. ಶ್ರೀಕರನೇ ವೇದ ಪ್ರತಿಪಾದ್ಯ. ಆಯುಧಗಳೇ ಧರ್ಮಾರ್ಥ ಕಾಮ ಮುಕ್ತಿಯ ಪ್ರತೀಕ. ವೇದಗಳ ಹೊರತಗಳಿಯಾದ ಹೊಳೆಯುವ ಇವುಗಳೇ ನಮ್ಮ ಬಯಕೆಯಾಗದೇ ವೇದದ ಅಂತಃ ನಿಹಿತನಾದ ಶ್ರೀಕರನೇ ನಮ್ಮ ಬಯಕೆಯಾಗಬೇಕು. ಶ್ರೀಕರನಿಗಾಗಿಯೇ ಮುಕ್ತಿಯೂ ಕೂಡಾ.

**ಆದಿತ್ಯಚಂದ್ರಾವಪಿ ಚಕ್ರ ಶಂಖಃ ಶಂಖ ಪ್ರಸೂನಾಖ್ಯ ನಿಧೀ ದಧಾನಃ**
**ದ್ವಾಭ್ಯಾಂ ಕರಾಭ್ಯಾಂ ವಸು ತರ್ಪಯನ್ನ ಸ್ವಾಂಕಸ್ಥಲಕ್ಷ್ಮೀ ರ್ಗರುಡಾಂಸ ಸಂಸ್ಥಃ**



# ಸಂಸ್ಕೃತ - ಸುಸಂಸ್ಕೃತ

ಯಾರ ಹತ್ತಿರ ಸಂಸ್ಕೃತಿ ಮೃತವಾಗಿದೆಯೋ ಅವನು ಸಂಸ್ಕೃತವನ್ನು ಮೃತಭಾಷೆಯೆನ್ನುತ್ತಾನೆ.

ಯಾಕೆಂದರೆ ನುಡಿ ವ್ಯಕ್ತಿಯ ಅಂತಃ ಸಂಸ್ಕೃತಿಯ ಸಂಸೂಚಕ. ಸಂಸ್ಕೃತದ ಅಮೃತತ್ವವನ್ನು, ಅಮರತ್ವವನ್ನು, ಅಂತಃಸತ್ವವನ್ನು, ಅಂತಃಸ್ವತ್ವವನ್ನು ಗುರುತಿಸಲು ಕೂಡಾ ಉತ್ತಮ ಸಂಸ್ಕಾರವೇ ಬೇಕು.

ಸುಸಂಸ್ಕೃತನಿಗೆ, ಸುಸಂಸ್ಕಾರವಂತನಿಗೆ ಮಾತ್ರ ಸಂಸ್ಕೃತ ತನ್ನನ್ನು ತಾನು ತೆರೆಸಿಕೊಳ್ಳುತ್ತದೆ. ಬಿಡಿಸಿಕೊಳ್ಳುತ್ತದೆ.

ಸಂಸ್ಕೃತ ಅಸಂಸ್ಕೃತಭಾಷೆಯಲ್ಲ. ಕಚ್ಚಾ ಭಾಷೆಯಲ್ಲ. ಗ್ರಾಮ್ಯಭಾಷೆಯಲ್ಲ. ಅದು ಶಿಷ್ಟ ಭಾಷೆ, ವಿಶಿಷ್ಟ ಭಾಷೆ, ಉತ್ಕೃಷ್ಟ ಭಾಷೆ, ಸ್ವಾದು ಭಾಚೆ, ಸಾಧ್ವಿ ಭಾಷೆ, ಸಾಧು ಭಾಷೆ.

ಸಂಸ್ಕೃತ ಬಿಟ್ಟು ಉಳಿದ ಭಾಷೆಗಳು ಸಂಸ್ಕೃತದಷ್ಟು ಸುಂಸ್ಕೃತಗಳೇ? ಆದ್ದರಿಂದ ಸಂಸ್ಕೃತವನ್ನು ಮಾತ್ರ ಸಂಸ್ಕೃತ ಶಬ್ದದಿಂದಲೇ ಸಂಭೋಧಿಸಿದ್ದು. ಆದ್ದರಿಂದಲೇ ಉದ್ಗಾರ – "ಏಕಃ ಶಬ್ದಃ ಸುಷ್ಠು ಪ್ರಯುಕ್ತಃ ಸ್ವರ್ಗೇ ಲೋಕೇ ಕಾಮಧುಗ್ ಭವತಿ" ಎಂದು.

ಸಂಸ್ಕೃತ ಸಂಸ್ಕಾರಭರಿತ ಎಂಬುದು ಎಷ್ಟು



ಯುಕ್ತತಮವಾಗಿದೆ ಎಂದರೆ ಜಿಹ್ವಾ ಸಂಸ್ಕಾರವಿಲ್ಲದವನಿಗೆ ಸಂಸ್ಕೃತವನ್ನು ಸಂಸ್ಕೃತ ಎಂದು ಸಂಬೋಧಿಸುವುದೂ ಕೂಡಾ ಅಸುಕರ. ಅವ ಸಂಕೃತ ಭಾಷೆ, ಸ್ಯಾಂಸ್ಕ್ರಿಟ್ ಭಾಷೆ ಅನ್ನಬೇಕಾಗುತ್ತದೆ.

ಕೇವಲ ಸಂಸ್ಕೃತ ಶಬ್ದವೇ ಸಂಸ್ಕೃತ ಭಾಷೆಯಲ್ಲಿ ಅತ್ಯಂತ ಸಂಸ್ಕಾರ ಭರಿತ ಶಬ್ದವಾಗಿರುವಾಗ ಕಿಮುತ ಸಂಸ್ಕೃತ ಭಾಷೆ?

ಇಂದು ಸುಸಂಸ್ಕೃತಿ ಸತ್‌ಸಂಸ್ಕಾರಗಳಿಗೆ ತಿಲಾಂಜಲಿಯಿಟ್ಟು ಅವು ಅಂತ್ಯ ಸಂಸ್ಕಾರಗೊಳಗಾಗುವುದರಿಂದಲೇ ಸಂಸ್ಕೃತಕ್ಕೆ ಸ್ವದೇಶದಲ್ಲಿ ಹಿನ್ನಡೆ ಪ್ರತಿಭಾಸಮಾನವಾಗಬಹುದು ಹೊರತು ಸಂಸ್ಕೃತದ ಸತ್ವದ ಸಾಂತತೆಯಿಂದಲ್ಲ.

ಸಂಸ್ಕೃತದಲ್ಲಿ ಅನಂತ ಅಂತಃಸತ್ವವಿದೆ.

'ಸಂಸ್ಕಾರೋ ಬಲವಾನ್ ಯತಃ' ಎಂದು ಆಚಾರ್ಯರು ಉದ್ಗರಿಸಿದಂತೆ ಪ್ರತಿಯೊಬ್ಬನೂ ಅವನವನು ಪಡೆದ ಸಂಸ್ಕಾರಕ್ಕೆ ತಕ್ಕಂತೆಯೇ ವರ್ತಿಸುವವನಾದ್ದರಿಂದ ಉತ್ತಮವರ್ತನೆಯನ್ನು ತಮ್ಮ ಮಕ್ಕಳಲ್ಲಿ ನಿರೀಕ್ಷಿಸುವುದಾದರೆ ಅವರಿಗೆ ಉತ್ತಮ ಸಂಸ್ಕಾರ ಕೊಡಲೇ ಬೇಕು. ಸುಸಂಸ್ಕೃತರಾಗಲು ಅವರಿಗೆ ಸುಂದರ ಸಂಸ್ಕೃತ ಜೊತೆಗೆ ಬೇಕೇ ಬೇಕು.

ಯತಃ ಸಂಸ್ಕೃತರಹಿತನು ಅಸಂಸ್ಕೃತ. ಸುಸಂಸ್ಕೃತನು ಸಸಂಸ್ಕೃತ. ಅಥವಾ ಸಂಸ್ಕೃತಸುಹೃತ್.

ಇತ್ತೀಚೆ ಉಡುಪಿಯಲ್ಲಿ ಸಂಸ್ಕೃತ ಮಹಾ ಪಾಠಶಾಲೆಯ ಶತಮಾನೋತ್ಸವ
ಸಂದರ್ಭದಲ್ಲಿ ಉಡುಪಿ ಶ್ರೀ ಪುತ್ತಿಗೆ ಮಠಾಧೀಶರಾದ

**ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು**

ನೀಡಿದ ಸಾರ ಸಂದೇಶ.

ಮರ್ಮಮೀಮಾಂಸೆ

# ಸಂವತ್ಸರ ಫಲ?!!!

ಯತ್ರ ಧೂಮಃ ತತ್ರ ವಹ್ನಿಃ ಎಂದು ಧೂಮವಿದ್ದಲ್ಲಿ ವಹ್ನಿಯಿದೆಯೆಂಬ ತಾರ್ಕಿಕರ ಮೂಲಮಂತ್ರ ಅತ್ಯಂತ ನಿರ್ಮೂಲ ಗುರುಗಳೇ! ಅದನ್ನು ಈ ಕೂಡಲೇ ಶಾಸ್ತ್ರ ಪುಸ್ತಕದಿಂದ ತೆಗೆದು ಹಾಕಬೇಕು. ಯಾಕೆಂದರೆ ತಮಿಳ್ ನಾಡಿನಲ್ಲಿ ಇತ್ತೀಚೆ ಆಯಮ್ಮ ಮಾಟಗಾರ್ತಿಯಂತೆ ಬೆಂಕಿಯಿಲ್ಲದೇನೇ ಪುಂಖಾನುಪುಂಖವಾಗಿ ಹೊಗೆ ಉಗುಳುವುದನ್ನು ಪ್ರತ್ಯಕ್ಷವಾಗಿ ಜಗಜ್ಜಾಹೀರಾಗಿ ತೋರಿಸಿ ಕೊಡುತ್ತಿದ್ದಾಳಂತೆ. ಪ್ರತಿನಿತ್ಯ ಪೇಪರಿನಲ್ಲಿ ಬರುತ್ತಿದೆಯಂತೆ.

ಎಂದು ಪೆಟ್‌ಶಿಷ್ಯ ಡಿತ್ಥನು ಪ್ರಬಲವಾಗಿ ಪ್ರಶ್ನೆಯೆಸದಾಯಿತು. ತರ್ಕ ಪಾಠ ಮಾಡುತ್ತಿದ್ದ ಮಹಾ ತರ್ಕಕ್ಕೇ ಸರಿ ಡಾಕ್ಟರ್ ಪಿಪ್ಪಲಾಚಾರ್ಯರ ಅಧಿಕರಣವಾಗಿದ್ದ ಕೂತ ಮನೆ ಗಡಗಡ ನಡುಗತೊಡಗಿತು. ಅದರಲ್ಲಿ ಆಧೇಯರಾಗಿದ್ದ ಆಚಾರ್ ಅಧೀರರಾದರು. ಅವಚ್ಛಿನ್ನರಾದರು. ಅವಾಕ್ಕಾದರು.

ಅರೇ ಬೆಂಕಿಯಿಲ್ಲದೇನೇ ಧೂಮ ಸೃಷ್ಟಿಯಾಗಿ ಹೋಯಿತೆಂದರೆ ಈ ಧೂಮ ಮಾಲೆಯಲ್ಲೆ ಧೂಮಕೇತುವಿನಲ್ಲೆ ಹೆಣೆದು ಕಟ್ಟಿದ್ದ ಗುಡ್ಡದಷ್ಟು ಎತ್ತರದ ನಮ್ಮ ತರ್ಕ ಶಾಸ್ತ್ರದ ಗತಿಯೇನು? ಅಲ್ಲ ಮತ್ತೆ ನಮ್ಮ ಜಾಬಿನ ಗತಿಯೇನು? ವ್ಯಭಿಚಾರ ಬಂದು ಬಿಟ್ಟಿತಲ್ಲಾ? ಅಷ್ಟಗುಣದ ಈ ಈಶ್ವರ ನಮಗೆ ಇಷ್ಟು ಕಷ್ಟ ಯಾಕೆ ಕೊಡುತ್ತಾನೋ ಎಂದು ಗೋಗರೆದಾಗ ಎರಡನೆ ಪೆಟ್ ಶಿಷ್ಯ ಕಪಿತ್ಥ ಹೇಳುತ್ತಾನೆ.

ಗುರುಗಳೇ ಡಿತ್ಥ ಹೇಳುವುದು ಅಪ್ಪಟ ಸುಳ್ಳು. ಪ್ರತಿನಿತ್ಯ ದಿನಪತ್ರಿಕೆಯಲ್ಲಿ ಕಂಚಿಯವರು ಈ ಹಿಂದೆಯೇ ಹಾಕಿದ್ದ ಗುಪ್ತಬೆಂಕಿ ದಿನಕ್ಕೊಂದರಂತೆ ಅನಾವರಣಗೊಳ್ಳುತ್ತಿದೆ ನೋಡಿ? ಎಂದ.

ಪುನಃ ಡಿತ್ಥ ವಾದಿಸಿದ. ಅದು ಎಂದೋ ಆರಿ ಹೋಗಿತ್ತು ಮಾರಾಯ ಅಥವಾ ಇರಲೇ ಇಲ್ಲ. ಅದರ ಮೇಲೆ ಇವರು ಈಗ ಬೇರೆ ಎಲ್ಲಿಂದಲೋ ಬೆಂಕಿ ತಂದು ಗುಡ್ಡೆ ಹಾಕಿ ಗಾಳಿ ಹಾಕಿ ಎಬ್ಬಿಸುತ್ತಿರುವುದು ಮಾರಾಯಾ. ಆ ಬೆಂಕಿಗೂ ಈ ಧೂಮಕ್ಕೂ ಕಾಲಿಕ ಸಂಬಂಧವೂ ಇಲ್ಲ. ಇದು ಫ್ಯಾಬ್ರಿಕೇಟೆಡ್ ಫಯರ್ ಮಾರಾಯ. ಇಲ್ಲದಿದ್ದರೆ ಧೂಮ ಯಾಕೆ ಆವಾಗ ಹೊರ ಬರಲಿಲ್ಲ? ಆವಾಗ ಏಕೆ ಆಯಮ್ಮನ ಕಣ್ಣು ಉರಿಯಲಿಲ್ಲ? ಕಂಚಿಯವರು ಬಯಲು ಸನ್ಯಾಸಿಯಲ್ಲ? ನೀನಾದರೂ ಸ್ವಲ್ಪ ತಲೆ ಖರ್ಚು ಮಾಡಬೇಡವಾ? ಎಂದಾಗ.

ಕಪಿತ್ಥ ಕನಲಿದ. ಫಯರೋ, ಎಫೈಯಾರೋ ಅದು ನಿನಗೆ ಬಿಟ್ಟದ್ದು. ಆದರೆ ನಮ್ಮ ಬಳಿ ಪುರಾವೆಯಿದೆ. ಫಯರಿನ ಟೇಪು ಇದೆ ಗೊತ್ತಾ? ನೋಟಿನ ನಂಬರಿದೆ ಗೊತ್ತಾ? ಹೆಚ್ಚು ಕಮ್ಮಿ ಮಾತಾಡಬೇಡ ನಿನಗೆ ಕಂಬಿ ಎಣಿಸಬೇಕೆಂಬ ಆಸೆಯಿದೆಯಾ? ಎಂದು ಗದರಿದ.

ಡಿತ್ಥ ವಾದಿಸಿದ. ಈಗ ನಿನ್ನ ಬಳಿ ಟೇಪು ಇದೇ ಎಂದು ಹೇಳುತ್ತೀಯಲ್ಲವಾ? ನಿನಗೆ ಆ ಗುಪ್ತ ಬೆಂಕಿಯ ಟೇಪು ಮಾಡಬೇಕೆಂದು ಸ್ವಿಚ್ ಹಾಕಬೇಕೆಂದು ಹೇಳಿದ್ದು ಯಾರು? ಪುರಾವೆ ತಯಾರಿಸಬೇಕೆಂದು ಹೇಳಿದವರು ಯಾರು? ಬೆಂಕಿ ಬರುತ್ತದೆಂದು ಗೊತ್ತಿದ್ದರೆ ಹತ್ಯೆಯಾಗುತ್ತದೆಂದು ಮುಂಜಾನೆ ಗೊತ್ತಿದ್ದರೆ ನೀನೇಕೆ ಅದನ್ನು ತಡೆಯಲಿಲ್ಲ. ಅದು ಬಿಟ್ಟು ನಿದ್ದೆ ಬಿಟ್ಟು ಧ್ವನಿ ಟೇಪು ಮಾಡಲು ಕೂತದ್ದು, ನಿನಗೆ ಸುಳಿವಿದ್ದೂ ತಡೆಯದಿದ್ದದ್ದು ನೀನೇ ಹಂತಕನೆಂದು ತಿಳಿಸುವುದಿಲ್ಲವಾ? ಕಂಚಿಯವರ ಕಂಚಿನ ಕಂಠವಾಣಿಯನ್ನು ಕದ್ದದ್ದು ಮಹಾಪರಾಧವಲ್ಲವಾ? ಅಥವಾ ಅದು ಅತ್ಯಾಧುನಿಕವಾಗಿ ನಿರಂತರವಾಗಿ ಯಾಂತ್ರಿಕವಾಗಿ ನಡೆಯುತ್ತಿದ್ದರೆ ಅದು ಇವರ ನಂಬರಲ್ಲ ನಿರಂತರವಾಗಿ ನಡೆಯಲೆಂದು ಆದೇಶ ವಿತ್ತವಳು ಯಾರು? ಈ ಚೆನ್ನಮ್ಮನೋ ಅಥವಾ ಆ ದಿಲ್ಲಿಯ ಚಿನ್ನಮ್ಮನೋ? ಹಾಗಿದ್ದರೆ ನಿಮಗೆ ಕಂಚಿಯವರ ಮೇಲೆ ಮೊದಲೇ ಕಣ್ಣಿತ್ತು ಕೆಂಗಣ್ಣಿತ್ತು ಎಂದಾಯ್ತಲ್ಲವಾ? ಅವರನ್ನು ಬೋನಿನಲ್ಲಿ ಹಾಕುವ ಉದ್ದೇಶವಿತ್ತೆಂದಾಯಿತಲ್ವಾ? ಆ ಉದ್ದೇಶ ನಿಮಗೆ ಯಾಕೆ ಬಂತು? ಅಲ್ಲಿಯೇ ನಿಜವಾದ ಬೆಂಕಿ ಅಡಗಿದೆ ನೋಡು. ಕಿಂಕರನಾದ ಶಂಕರರಾಮನಿಗೂ ಕಂಚಿಯವರಿಗೂ ಇರುವ ಭಯಂಕರ ಕೋಪವನ್ನು ಗುರುತಿಸಿ ಟೇಪು ಮಾಡುತ್ತಿದ್ದ ನೀನೇ ಯಾಕೆ ಶಂಕರನನ್ನು ಮುಗಿಸಿರಬಾರದು? ಮುಗಿಸಿ ಕಂಚಿಯವರ ಮುಖಕ್ಕೆ ಮೆತ್ತಿರಬಾರದು? ಮೊಸರು ತಿಂದು ಮೇಕೆಯ ಮುಖಕ್ಕೆ ತೇಪೆಹಾಕುತ್ತೀಯಾ ಕೋತಿ? ಎಂದು ಡಿತ್ಥ ಚಿಂಪಾಂಜಿಯಂತೆ ಮುಖ ಮಾಡಿದಾಗ ಪಕ್ಕದಲ್ಲಿದ್ದ ಅಶ್ವತ್ಥಾಮನೂ ಅವನ ಜೊತೆ ಸೇರಿದ.

ಅಶ್ವದ್ಧ ಹೇಳಿದ, ಡಿತ್ಥ ಹೇಳುವುದು ಖಚಿತ ಎಂದು ತೋರುತ್ತದೆ ನೋಡು. ಅದಲ್ಲದಿದ್ದರೆ ದೀಪಾವಳಿ ದಿನ ಮಧ್ಯೆ ರಾತ್ರಿ ಕಂಚಿಯವರನ್ನು ವಂಚಿಸಿ ಎತ್ತಿಕೊಂಡು ಒಂದು ಬೆಳ್ಳಂಬೆಳ್ಳಗನೇ ಕೋರ್ಟು ಬಾಗಿಲು ತೆಗೆಸಿ ಅವಸರವಸರವಾಗಿ ಕಾರಾಗೃಹಕ್ಕೆ ಏಕೆ ದೂಡಬೇಕಿತ್ತು? ಎಲ್ಲಾದರೂ ಇಷ್ಟು ಅವಸರ ಅವಸರವಾಗಿ ಕೋರ್ಟು ಬಾಗಿಲು ತೆಗೆದದ್ದುಂಟಾ? ಪ್ರಮುಖ ಧಾರ್ಮಿಕ ನಾಯಕರೊಬ್ಬರನ್ನು ಕಾರಾಗೃಹಕ್ಕೆ ಕಳುಹಿಸುವಂತಹ ಅಪೂರ್ವ ಕ್ರಮ ಅಭೂತಪೂರ್ವ ಕ್ರಮವನ್ನು ತೆಗೆದುಕೊಳ್ಳುವಾಗ ಸ್ವಲ್ಪ ಹಿಂದು ಮುಂದೆ ನೋಡುವುದು ಸಹಜವಾಗಿರುವಾಗ ಈ ರೀತಿ ಆತುರತೆ ಅತ್ಯಾತುರತೆ ಏನನ್ನು ಸೂಚಿಸುತ್ತದೆ? ತತ್ರಾಪಿ ಅಲ್ಲೂ ಉಚ್ಚವ್ಯಕ್ತಿಯನ್ನು ತುಚ್ಛವಾಗಿ ನಡೆಸಿಕೊಂಡದ್ದರ ಹಿನ್ನಲೆಯಲ್ಲಿ ಆರೋಪಿಯನ್ನು ಮಹಾಪರಾಧಿಯಂತೆ ನಡೆಸುತ್ತಿರುವುದರ ಹಿನ್ನೆಲೆಯಲ್ಲಿ ಸೇಡು ಪ್ರತೀಕಾರದ ಕೈವಾಡ ಕಾಣಿಸುವುದಿಲ್ಲವೇ? ಪುರಾವೆಯಿದೆ ಎಂದು ಹೇಳುವ ಅವಶ್ಯಕತೆಯಿಲ್ಲದೆನೂ ಪುರಾವೆಯಿದೆಯೆಂದು ಸದನದಲ್ಲೇ ಅಯಾಚಿತವಾಗಿ ಹೇಳಿದ್ದು ನಮಗೆ ದೊಡ್ಡ ಪುರಾವೆಯಲ್ಲವೇ? ಎಂತಹ ಅಪರಾಧಿಗಳೂ ಸಾಮಾನ್ಯವಾಗಿ ಜಾಮೀನು ಪಡೆದು ಹೊರಬರುವುದು

ಸಹಜವಾಗಿರುವಾಗ ಜಾಮೀನು ಸಿಗದಂತೆ ಶತಾಯಗತಾಯ ಗುಪ್ತ ಪ್ರಯತ್ನ ನಡೆಯುತ್ತಿದೆಯೆಂದು ಭಾಸವಾಗುದಲ್ಲವೇ? ಅದಕ್ಕೋಸ್ಕರವೇ ಹೇಗೂ ತಪ್ಪಿಸಿಕೊಳ್ಳದಂತೆ, ಕಟ್ಟಿ ಹಾಕಿ ಹಳೇ ಕೃತಕ ಕೃತಗಳನ್ನೆಲ್ಲಾ ಎತ್ತಿ ಹಾಕುತ್ತಿರುವುದಲ್ಲವೇ? ಸದ್ದಾಮಿನ ಮೇಲೆ ಸೇಡು ತೀರಿಸಲು ಹೂಡಿದ ಜಾಗತಿಕ ಅಪರಾಧೀಕರಣದ ಪ್ರಯೋಗ, ಸೃಷ್ಟಿಸಿದ ಆಪಾದನೆಗಳು ಇಲ್ಲೂ ನಡೆಯುತ್ತಿದೆಯಲ್ಲವೇ? ಇದು ಬರೇ ಹೊಲಸು ರಾಜಕೀಯವಲ್ಲವೇ? ಆದಲ್ಲದಿದ್ದರೆ ಕಾರಾಗೃಹಕ್ಕೆ ಕಳುಹಿಸಿದಾಗ ಶಹಭಾಸ್‌ಗಿರಿ ಕೊಟ್ಟವರು ಈಗ ಮೆಲ್ಲನೆ ರಾಗ ಬದಲಾಯಿಸಲು ಏನು ಕಾರಣ? ಅಮ್ಮನನ್ನು ಪೀಠದಿಂದ ಉರುಳಿಸಿ ಮುಂದಿನ ಮುಖ್ಯಮಂತ್ರಿಯಾಗುವ ದುರಾಶೆಯ ಉದಯವಲ್ಲವೇ ಇದು? ಇತ್ಯಾದಿ ಇತ್ಯಾದಿಯಾಗಿ ಅಶ್ವತ್ಥಾಮನು ಸಿಂಹ ಘರ್ಜನೆ ಮಾಡಿದ. ಕಪಿತ್ಥನಿಗೆ ಪಿತ್ತ ನೆತ್ತಿಗೇರಿದೆ ಎಂದು ಕಿರುಚಿದ.

ಈ ಮಧ್ಯದಲ್ಲಿ ಧ್ವನಿ ಸೇರಿಸುತ್ತಾ ಪಾಲಾಕ್ಷ ಕಪಾಲಕ್ಕೆ ಹೊಡೆದಂತೆ ವಿಮರ್ಶೆ ಶುರುಮಾಡಿ ಇದೀಗ ನಿಮಗೆ ಡೌಟು ಆಯಮ್ಮನೋ ಈಯಮ್ಮನೋ ಎಂದು ಅಂದ. ಯಾಕೆಂದರೆ ಇಬ್ಬರಿಗೂ ಆ ಸ್ವಭಾವ ಇದೆ ನೋಡು. ಆಯಮ್ಮ ಇದೇ ರೀತಿ ಉಮಮ್ಮನನ್ನು ಮಾಡಿದ್ದಾಳೆ. ಈಯಮ್ಮ ಪಾತ್ರೆ ಪರಡಿಕಟ್ಟಿಕೊಂಡು ಡಿಲ್ಲಿಗೆ ಹೋಗಿ ಕ್ಯಾಂಪ್ ಮಾಡಿ ಆ ಬ್ರಹ್ಮಚಾರಿಯ ಸರಕಾರವನ್ನು ಹೊಡೆದುರುಳಿಸಿದವಳು ನೋಡಿ. ಕೊನೇಗೆ ಈ ಡಬ್ಬಲಮ್ಮರು ಸೇರಿ ಇದು ಮಾಡಿದ್ದು ಇರಬಹುದು ಯಾಕೆಂದರೆ ಆಂಧ್ರ ತಮಿಳುನಾಡು ಜೊತೆ ಸೇರಿ ಮಾಡಿದ ಕೆಲಸವಿದು ಎಂದು ತ್ರಿಶಂಕುವಿನಂತೆ ಶಂಕಿಸಿದಾಗ

ಪಾಠದ ಮಧ್ಯೆ ಜೋಕರ್ ಆಗಿರುವ ಹೈತುಕನಾದ ಲೋಲಾಕ್ಷ ಕೌತುಕದಿಂದ ಅಲ್ಲಾ ಆ ಉಮಮ್ಮ ನಂತರ ಈ ಚೆನ್ನಮ್ಮ ಚಿನ್ನಮ್ಮರುಗಳು ಆರೆಂಜ್ ಕಲರ್ ಸೀರೆ ಯಾಕೆ ಉಟ್ಟುಕೊಳ್ಳಬಾರದು? ಎಂದು ಮಧ್ಯೆ ಕ್ವಾರಿ ತೆಗೆದ.

ತಕ್ಷಣ ಪಕ್ಕದಲ್ಲಿ ಕೂತಿದ್ದ ಮೀನಾಕ್ಷ ನೋಡು ಅದೇ ಕಲರಿನ ಇತರ ಪದಾರ್ಥ ಇನ್ನೂ ಸಂತೆಗೆ ಬಂದಿಲ್ಲ. ಬಂದ ಮೇಲೆ ಅವರೂ ಶುರುಮಾಡುತ್ತಾರೆ. ಚಿಂತೆ ಮಾಡಬೇಡ. ಒಟ್ಟಿಗೆ ನಾವು ಮಾಡುವ ಆಳ ವಿಮರ್ಶೆಯನ್ನು ಹಾಳುಮಾಡಬೇಡ ಎಂದಾಗ ಲೋಲಾಕ್ಷ ಹೇಳುತ್ತಾನೆ. ಸರಿ ಹಾಗಿದ್ದರೆ ಸಬ್ಜೆಕ್ಟಿನ ಮೇಲೆಯೇ ನಾನು ನನ್ನ ವಿಮರ್ಶೆ ಮಂಡಿಸುತ್ತೇನೆ. ಕೇಳುತ್ತೀರಾ ಎಂದ. ಎಲ್ಲರೂ ಹೇಳು ಹೇಳು ಎಂದು ಹುರುದುಂಬಿಸಿದಾಗ.

ನೀವೆಲ್ಲಾ ವಿಮರ್ಶೆ ಮಾಡುವುದು ವ್ಯರ್ಥ. ವಿಚಾರ ಇಷ್ಟೆ. ಆಯಮ್ಮ ಕಂಚಿಯವರ ಹತ್ತಿರ ಇಟ್ಟುಕೊಳ್ಳಲು ಏನೋ ಗಂಟು ಕೊಟ್ಟಿರಬೇಕು. ಅದನ್ನು ವಾಪಾಸು ಕೇಳಿದಾಗ ಇವರು ಮುಖ ಗಂಟಿಕ್ಕಿರಬೇಕು. ವಿಶ್ವಾಸ ದ್ರೋಹ ಮಾಡಿರಬೇಕು. ಭಯಂಕರ ವಿಶ್ವಾಸ ದ್ರೋಹಮಾಡಿರಬೇಕು. ಮೊದಲೇ ಜಗಳ ಗಂಟಿಯೆನಿಸಿದ ಅದಲ್ಲದೆ ಇತ್ತೀಚೆ ವೀರಪ್ಪನ್ ಮುಗಿಸಿ ಜಗದಗಲದಲ್ಲೆ ಪ್ರಸಿದ್ಧಳಾದ ಗಜದಾನಿಗೆ ಅನ್ಯಾಯವಾಯಿತೆಂದರೆ ಇನ್ನೇನು ಬೇಕು ಮದವೇರಲು? ಕೋಪವೇರಲು? ನೀವು ಜಯೇಂದ್ರರಾದರೆ ನಾನು



ಜಯಲಲಿತಾ. ಸುಲಲಿತವಾಗಿ ಜಯಿಸುವವಳು. ಅಂದವಳೇ ಇಷ್ಟೆಲ್ಲಾ ಮಾಡಿರಬೇಕು ಎಂದಾಗ ಲೋಲಾಕ್ಷನ ವಿಮರ್ಶೆ ಕೇಳಿ ಎಲ್ಲರೂ ಹುಬ್ಬೇರಿಸಿದರು. ತಬ್ಬಿಬ್ಬಾದರು. ತಕ್ಷಣ ಡಿತ್ಥ ಆಯಮ್ಮನ ಫೋಟೋವನ್ನು ದಿಟ್ಟಿಸಿ ನೋಡುತ್ತಾ ಆಯಮ್ಮನ ಹೊಟ್ಟೆಯಲ್ಲೇನೋ ಚಿಕ್ಕ ಬೆಂಕಿಯುಂಡೆಯಂತೆ ಚೆಂಡಿನಂತೆ ತಿರುಗುತ್ತಿರುವುದನ್ನು ಕಂಡು ಲೋಲಾಕ್ಷ ಯತ್ರ ಧೂಮಃ ತತ್ರ ಅಗ್ನಿಃ ಎಂಬುದು ಸುಳ್ಳಲ್ಲ. ಕ್ರೋಧಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ಎನ್ನುತ್ತಾ ತಾನು ತರ್ಕಶಾಸ್ತ್ರವನ್ನು ಉಳಿಸಿಕೊಟ್ಟವನಂತೆ ಧೂಮಾಗ್ನಿಗೆ ಅಂತಸ್ತಂಭಂತ ಕಂಡುಕೊಂಡವನಂತೆ ನೆಗೆದುಬಿಟ್ಟ.

ಅಷ್ಟಾದಾಗ ಡೀಪಾಗಿ ವಿಮರ್ಶೆ ಮಾಡಲು ಹೋಗಬಾರದು. ಋಷಿಮೂಲ, ಸ್ತ್ರೀ ಮೂಲ ಎಲ್ಲಾ ವಿಮರ್ಶೆಗೆ ಒಳಪಡಿಸತಕ್ಕದಲ್ಲ ಆಳದಲ್ಲಿ ಹುಡುಕಲು ಶುರುಮಾಡಿದರೆ ಕೆಸರು ಸಿಗುತ್ತದೆ ಗೊತ್ತಾ? ಅದರಲ್ಲಿ ಕಮಲ ಅರಳಿ ಬಿಟ್ಟಿತು ಜೋಕೆ ಎಂದು ಉಪದೇಶಿಸಲು ಶುರುಮಾಡಿದ ದೇವದತ್ತ.

ಇಷ್ಟೆಲ್ಲಾ ಆಗುವಾಗ ಸುಮ್ಮನೆ ತಲೆಗೆ ಕೈಯಿಟ್ಟು ಕೂತಿದ್ದ ಗುರುಪಿಪ್ಪಲಾಚಾರ್ಯರು ಈ ಬಗ್ಗೆ ಏನು ಹೇಳುತ್ತಾರೆ ಎಂದು ತಿಳಿದುಕೊಳ್ಳುವ ಚಪಲ ಎಲ್ಲರಿಗೂ ಉಂಟಾಗಿ ಕೇಳಿಕೊಂಡಾಗ ಪಿಪ್ಪಲಾಚಾರ್ಯ ಉವಾಚ.

ಖರೇ ಹೇಳುವುದಾದರೆ ನನಗೆ ಇದೆಲ್ಲಾ ಖರ ವಿಷಾಣದ ಹಾಗೆ ಕಾಣುತ್ತದೆ. ಇಲ್ಲದೇ ಇದ್ದ ಮೊಲದ ಕೊಂಬಿನಂತೆ ಕಾಣುತ್ತದೆ. ಅದೆಲ್ಲೋ ನಮ್ಮ ತರ್ಕಶಾಸ್ತ್ರವನ್ನೇ ಹಾಳು ಮಾಡಲು ಯಾರೋ ಖರವಿಷಾಣವನ್ನು ಸೃಷ್ಟಿಸಿ ಆ ಖರವಿಷಾಣದಿಂದ ತರ್ಕಶಾಸ್ತ್ರಗಳನ್ನು ರಕ್ಷಿಸಿಕೊಂಡು ಬಂದಿದ್ದ ಸನ್ಯಾಸಿಗಳನ್ನೇ ಹೊಡೆಯಹತ್ತಿದ್ದಾರೆ ನೋಡಿ. ಯಾರನ್ನು ದೂರಿಯೂ ಏನೂ ಪ್ರಯೋಜನವಿಲ್ಲ. ಅಂತಿಮವಾಗಿ ಹೇಳುವುದಿದ್ದರೆ ಇದು ಸಂವತ್ಸರ ಫಲ ನೋಡಿ, ತಾರಣ ನಾಮ ಸಂವತ್ಸರ ರಾಜಕಾರಣ ನಾಮ ಸಂವತ್ಸರ ಎಂಬುದಾಗಿದೆ ನೋಡಿ.

ಒಟ್ಟಿನಲ್ಲಿ ಈ ಸಂವತ್ಸರ ಸನ್ಯಾಸಿಗಳಿಗೆ ಸನ್ಯಾಸಿನಿಯರಿಗೆ ಜಗಳ ಹುಟ್ಟು ಹಾಕಿ ಸನ್ಯಾಸಿ ಕುಲಕ್ಕೆ ಅನಿಷ್ಟವಾಗಿದ್ದು ಅದರ ಫಲವಾಗಿಯೇ ನೋಡಿ ದೊಡ್ಡ ಸನ್ಯಾಸಿಗಳೊಬ್ಬರು ಮಹಾಪೀಠ ತ್ಯಾಗ ಮಾಡಿದರು. ಸನ್ಯಾಸಿನಿಯೊಬ್ಬಳಿಗೆ ಜೈಲಾಯಿತು. ಮತ್ತು ಪಕ್ಷದಿಂದ ಹೊರದಬ್ಬಿದರು ಕೂಡಾ. ಮಗದೊಬ್ಬ ಸನ್ಯಾಸಿಗಳ ಪ್ರತಿಕೃತಿಯನ್ನೇ ಸುಟ್ಟು ಬಿಟ್ಟರು. ಮಗದೊಬ್ಬ ಸನ್ಯಾಸಿಯ ಮೇಲೆ ಸುಳ್ಳು ಆಪಾದನೆ ಹೊರಿಸಿ ಖಳನಾಯಕನಾಗಿ ಚಿತ್ರಿಸಿದರು. ಈ ಸಂವತ್ಸರದಲ್ಲಿ ಬ್ರಹ್ಮಚಾರಿಗಳ ವಿರುದ್ಧ ಸನ್ಯಾಸಿನಿಯರು, ಸನ್ಯಾಸಿಯರ ವಿರುದ್ಧ ಬ್ರಹ್ಮಚಾರಿಣಿಯವರು ಕೆಂಡ ಕಾರುತ್ತಾರೆ. ಇದು ಕಾರಣನಾಮ ಸಂವತ್ಸರದ ಫಲ, ರಾಜಕಾರಣನಾಮ ಸಂವತ್ಸರದ ಫಲ. ಇನ್ನೇನು ಕಾದಿದೆಯೋ ಗ್ರಹಚಾರ ಈ ಸನ್ಯಾಸಿ ಸನ್ಯಾಸಿನಿಯರಿಗೆ ಈ ಸಂವತ್ಸರದಲ್ಲಿ! ಆ ತರ್ಕೇಶನಿಗೇ ಗೊತ್ತು ಎನ್ನುತ್ತಾ ಪಿಪ್ಪಲಾಚಾರ್ ಪಪ್ಪಾಯಿಯಂತಾದರು.

**- ಸುಶ್ರೀ**

# ಏಡ್ಸ್ ಎಂಬ ರಕ್ತ ಬೀಜಾಸುರನನ್ನು ನಾಶ ಮಾಡಲು ದುರ್ಗೆ ಅವತಾರವೆತ್ತಲು ಸಮಯ ಸನ್ನಿಹಿತ

ಯುನಿಸೆಫ್ ಮತ್ತು ಡಬ್ಲ್ಯುಸಿ ಆರ್‌ಪಿ ಸಂಸ್ಥೆಗಳು ಜಂಟಿಯಾಗಿ ನವದೆಹಲಿಯಲ್ಲಿ ಸಂಘಟಿಸಿದ SAIRC (ದಕ್ಷಿಣ ಏಶ್ಯದ ಅಂತರ್‌ಧರ್ಮೀಯ ಪ್ರಾದೇಶಿಕ ಮಂಡಳಿ)ನ ಉದ್ಘಾಟನಾ ಮಹೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪುತ್ತಿಗೆ ಮಠದ ಪರಮಪೂಜ್ಯ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಏಡ್ಸ್ ಮಹಾ ಮಾರಿಯನ್ನು ರಕ್ತ ಬೀಜಾಸುರನಿಗೆ ಹೋಲಿಸಿದರು. "ರಕ್ತ ಬೀಜಾಸುರನ ಒಂದೊಂದು ಹನಿ ನೆತ್ತರು, ಭೂಮಿಗೆ ಬಿದ್ದಾಗಲೂ ಅಸಂಖ್ಯಾತ ರಕ್ತ ಬೀಜಾಸುರರು ಹುಟ್ಟಿಕೊಳ್ಳುತ್ತಿದ್ದರು. ಕೊನೆಗೂ ಆತನ ಸಂಹಾರಕ್ಕಾಗಿ ದುರ್ಗಾಮಾತೆ ಅವತರಿಸ ಬೇಕಾಯಿತು. ಜಗತ್ತಿನ ಉದ್ದಗಲಗಳಲ್ಲಿ ರಕ್ತದಿಂದ ರಕ್ತಕ್ಕೆ ಕಾಳ್ಗಿಚ್ಚಿನಂತೆ ಹಬ್ಬುತ್ತಿರುವ ಮಹಾಮಾರಿ ಏಡ್ಸ್ ರಕ್ತಬೀಜಾಸುರನ ಹೊಸ ಅವತಾರ. ದುರ್ಗಾ ಎಂಬ ಪದಕ್ಕೆ ಅಸಾಧ್ಯವಾದುದನ್ನು ಸಾಧ್ಯವಾಗಿಸುವ ಎಂಬ ಅರ್ಥವೂ ಇದೆ. ಜಗತ್ತಿನ ಎಲ್ಲ ಧರ್ಮಗಳ ನೇತಾರರು ಇಂದು ಇಲ್ಲಿ ಸೇರಿದ್ದಾರೆ. ಇದು ಕೂಡ ಅಭೂತಪೂರ್ವವಾದ ಹಾಗೂ ಈ ತನಕ ಅಸಾಧ್ಯವಾದ ವಿದ್ಯಮಾನ. ಧಾರ್ಮಿಕ ಮುಖಂಡರ ಮಂಡಳಿ ದುರ್ಗೆಯ ಅವತಾರದಂತಾಗಬೇಕು" ಎಂದು ಶ್ರೀಪಾದರು ಪ್ರತಿಪಾದಿಸಿದರು.

ಈ ಬೇನೆಯ ಕಾರಣಗಳನ್ನು ವಿಶ್ಲೇಷಿಸಿದ ಶ್ರೀಪಾದರು ಪ್ರಾಚೀನ ಜೀವನಶೈಲಿ ಮತ್ತು ಮೌಲ್ಯಗಳ ಸಾರಾಸಗಟಾದ ನಿರಾಕರಣೆ ಮತ್ತು ಮಿತಿ ಮೀರಿದ ಭೌತಿಕವಾದಕ್ಕೆ ಜಗತ್ತು ಜೋತು ಬಿದ್ದಿರುವುದೇ ಏಡ್ಸ್‌ಗೆ ದಾರಿ ಮಾಡಿ ಕೊಟ್ಟಿತೆಂದು ಪ್ರತಿಪಾದಿಸಿದರು.

ಅಫ್‌ಘಾನಿಸ್ತಾನದ ಧಾರ್ಮಿಕ ವ್ಯವಹಾರಗಳ ಸಚಿವ ಮೌಲ್ವಿ ಅತ್ತಾವುರ್‌ರಹಮಾನ್ ಸೇಲೀಂ ಅವರು ಎಲ್ಲ ರಾಷ್ಟ್ರಗಳ ಮತ್ತು ಎಲ್ಲ ಧರ್ಮಗಳ ನೇತಾರರು ಏಡ್ಸ್‌ನ ವಿರುದ್ಧ ನಡೆಯುವ ಹೋರಾಟದಲ್ಲಿ ಒಂದುಗೂಡಬೇಕೆಂದು ಕರೆಯಿತ್ತರು.



ಅಫ್‌ಘಾನಿಸ್ತಾನ, ಪಾಕಿಸ್ತಾನ, ಬಾಂಗ್ಲಾದೇಶ, ಭೂತಾನ್, ನೇಪಾಲ, ಶ್ರೀಲಂಕಾ ಮತ್ತು ಮಾಲ್ದೀವ್ಸ್ ದೇಶಗಳ ಧಾರ್ಮಿಕ ಮುಂದಾಳುಗಳು ಪ್ರಸ್ತುತ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅಂಕಿ - ಅಂಶ ಹಾಗೂ ಕಾರ್ಯಾಚರಣೆಯ ಸಚಿವ ಆಸ್ಕರ್ ಫೆರ್ನಾಂಡಿಸ್‌ರವರು ಮಾತಾಡುತ್ತ ಈ ಪಿಡುಗಿನ ನಿವಾರಣೆಗೆ ಸರಕಾರವು ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಸರ್ವೋಪರಿ ಆದ್ಯತೆ ನೀಡಿದೆ ಎಂದು ವಿಶದೀಕರಿಸಿದರು.

ಪ್ರೊ। ಅಖ್ತರುಲ್ ವೇಸಿ, ಡಾ। ವೇನು ಅರಾಮ್, ಜೇಮ್ಸ್ ಕೈನ್ಸ್, ಪಾಲ್ ಶಾರ್ಬೊ ಮತ್ತಿತರರು ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತಾಡಿದರು.

ಎರಡು ದಿನ ನಡೆದ ಈ ಸಮ್ಮೇಳನದಲ್ಲಿ ಅನೇಕ ಮಹತ್ವಪೂರ್ಣ ನಿರ್ಣಯಗಳನ್ನು ಕೈಕೊಳ್ಳಲಾಯಿತು. ಹಾಗೆಯೇ ಈ ಮಾರಿಕಾಬೇನೆಗೆ ಗುರಿಯಾದ ದೀಪಕ್ ಸಿಂಗ್ ಮತ್ತು ಮನೋಜ್ ಪರದೇಸಿ ತಮ್ಮ ಅನುಭವಗಳನ್ನು ಪ್ರತಿನಿಧಿಗಳೊಂದಿಗೆ ಹಂಚಿಕೊಂಡರು.

ಯುನಿಸೆಫ್‌ನ ಏಡ್ಸ್ ನಿರ್ಮೂಲನ ಯೋಜನೆಯ ಸಲಹೆಗಾರರಾದ ಅಯಾನ್ ಮೆಕಿಷಯೋಡರು ದಕ್ಷಿಣ ಏಶ್ಯದಲ್ಲಿ ಈ ರೋಗದ ಪ್ರಚಲಿತ ಸ್ಥಿತಿ ಮತ್ತು ಭಾವೀ ಸಾಧ್ಯತೆಗಳನ್ನು ಸೂಚಿಸುವ ಪ್ರಬಂಧವನ್ನು ಮಂಡಿಸಿದರು. ಸ್ಲೈಡ್ ಪ್ರದರ್ಶಿಸಿದರು. ಈ ಸಮ್ಮೇಳನದಲ್ಲಿ ಭಾರತದ ಶ್ರೀ ಪುತ್ತಿಗೆ ಶ್ರೀ ಪಾದರ ಮಾರ್ಗದರ್ಶನದಲ್ಲಿ ಬಾಂಗ್ಲಾದೇಶದ ಶರ್ಮಸುಲ್ ಅಲಾಮ್, ಶ್ರೀಲಂಕಾದ ಶ್ರೀಮತಿ ಇಂದ್ರಾಣಿ ದೇವೇಂದ್ರರನ್ನೊಳಗೊಂಡ ಒಂದು ಸಮಿತಿಯನ್ನು ರೂಪಿಸಲಾಯಿತು. ಮುಸ್ಲಿಮ್ ವೈಯಕ್ತಿಕ ಕಾನೂನು ಮಂಡಳಿಯ ಮುಂದಾಳುಗಳು ಅಖಿಲ ಭಾರತ ಇಗರ್ಜಿ ಸಂಘದ ನೇತಾರರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಧಾರ್ಮಿಕ ಮುಂದಾಳುಗಳ ಸಮಿತಿಯಲ್ಲಿ ಮುಸ್ಲಿಮ್, ಕ್ರೈಸ್ತ, ಜೈನ, ಬಹಾಯಿ, ಪಾರ್ಸಿ ಮತ್ತು ಬೌದ್ಧ ಮತಗಳಿಗೆ ಪ್ರಾತಿನಿಧ್ಯ ನೀಡಲಾಯಿತು.

ತಮ್ಮ ಸಮಾರೋಪ ಭಾಷಣದಲ್ಲಿ ಶ್ರೀಪಾದರು ಈ ರೋಗವನ್ನು ಎಚ್. ಐ. ವಿ. ಪೊಸಿಟಿವ್ ಎಂದು ಕರೆಯಲಾಗುತ್ತಿದೆ. ವಿವಿಧ ಧರ್ಮಗಳ ಸಮುನ್ನತ ನಾಯಕರನ್ನು ಒಂದು ವೇದಿಕೆಯಲ್ಲಿ ಕಲೆಹಾಕಿರುವುದೊಂದೇ ಇದರ ಪೊಸಿಟಿವ್ ಅಂಶ. ಧನಾತ್ಮಕ ಅಂಶ. ಉಳಿದೆಲ್ಲ ಇದು ನೆಗೆಟಿವ್ ಆಗಿದೆ ಎಂದು ವರ್ಣಿಸಿದರು.







**ಏಡ್ಸ್ ಬಗೆಗಿನ ದಕ್ಷಿಣ ಏಶ್ಯ ಅಂತರ್ಧರ್ಮೀಯ ಸಂಸ್ಥೆಯಉದ್ಘಾಟನೆ**

ಯುನಿಸೆಫ್ ಮತ್ತು ಶಾಂತಿಗಾಗಿರುವ ಧರ್ಮಗಳ ವಿಶ್ವ ಸಮ್ಮೇಳನ (WCRP)ಗಳ ನೇತೃತ್ವದಲ್ಲಿ ಡಿಲ್ಲಿಯ ಪಾರ್ಕ್ ಹೋಟೆಲ್‌ನಲ್ಲಿ ಸಂಘಟಿಸಲ್ಪಟ್ಟ ಎಚ್‌ಐವಿ ಏಡ್ಸ್ ಬಗೆಗಿನ ದಕ್ಷಿಣ ಏಶ್ಯ ಅಂತರ್ ಧರ್ಮೀಯ ಸಮ್ಮೇಳನದಲ್ಲಿ ಜಗದ್ಗುರು ಶ್ರೀ ಮಧ್ವಾಚಾರ್ಯ ಸಂಸ್ಥಾನ ಉಡುಪಿ ಶ್ರೀ ಪುತ್ತಿಗೆ ಮಠದ ಪರಮಪೂಜ್ಯ ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು, ಅಫ್‌ಘಾನಿಸ್ಥಾನದ ಧಾರ್ಮಿಕ ವ್ಯವಹಾರಗಳ ಘನವೆತ್ತ ಸಚಿವ ಮೌಲ್ವಿ ಅತ್ತಾವುರ್‌ರಹಿಮಾನ್ ಸಲೀಮ್, ಯುನಿಸೆಫ್‌ನ ಜೇಮ್ಸ್ ಕ್ರೈನ್ಸ್, ಅಖ್ತರುಲ್‌ವೇಸಿ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು. ಕೆಳಗಿನ ಚಿತ್ರ ಸಮ್ಮೇಳನದಲ್ಲಿ ಆಯ್ಕೆಯಾದ ನೂತನ ಸಮಿತಿಯ ಸದಸ್ಯರು ಶ್ರೀಪಾದರೊಂದಿಗೆ.

